ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಮೀರಾ ಕುಮಾರ್


ವಿರೋಧ ಪಕ್ಷಗಳ ರಾಷ್ಟ್ರಪತಿ ಅಭ್ಯರ್ಥಿ

ಸಂಪುಟ 11 | ಸಂಚಿಕೆ 27 | ಪುಟ 16 | ಜೂನ್ 26– ಜುಲೈ2, 2017 | ರೂ. 10/–


web: www.janashakthi.co.in | e-mail : js_weekly@yahoo.com



2 ಲಕ್ಷ ಐಟಿ ಉದ್ಯೋಗಿಗಳ ವಜಾ?



ನಾಯ್ಡುಗಾರು !



ಸಾಲ ಮನ್ನಾ ಫ್ಯಾಶನ್ ಅಲ್ಲ !!

ಪ್ರಭಾಕರ ಭಟ್ ಬಂಧಿಸಿ

ಬ್ರಿಟನ್ : ವರ್ಗ ರಾಜಕೀಯದ ಮರುಸ್ಥಾಪನೆ



ಎಸ್ಕಾಂ ಗುತ್ತಿಗೆ ಕಾರ್ಮಿಕರ ಹೋರಾಟ





ಆದಿವಾಸಿ ಸಮ್ಮೇಳನ: ಪ್ರಬಲ ಪ್ರತಿರೋಧದ ಸಂಕಲ್ಪ

ಕೇಂದ್ರ ಪರಿಸರ ಮಂತ್ರಿಗಳಿಗೆ ಎಐಕೆಎಸ್ ಮನವಿ ಪತ್ರ

ಜಾನುವಾರು ವ್ಯಾಪಾರ ನಿರ್ಬಂಧ ಅಧಿಸೂಚನೆಯನ್ನು ತಕ್ಷಣ ಹಿಂತೆಗೆದುಕೊಳ್ಳಿ ಪ್ರಾಣಿದಯೆ ಕುರಿತಂತೆ ರೈತರು ಮತ್ತು ಕೃಷಿಕೂಲಿಕಾರರ ಸಂಘಟನೆಗಳ ಸಭೆ ಕರೆಯಿರಿ

ಜಾನುವಾರು ವ್ಯಾಪಾರದ ಮೇಲೆ ನಿರ್ಬಂಧಗಳನ್ನು ಹಾಕುವ ಭಾರತ ಸರಕಾರದ ಗಜೆಟ್ ಅಧಿಸೂಚನೆಯಿಂದ ಕೋಟ್ಯಂತರ ರೈತರು ಮತ್ತು ಇತರ ಜನವಿಭಾಗಗಳ ಜೀವನಾಧಾರಗಳ ಮೇಲೆ ಆಗುವ ದುಷ್ಪರಿಣಾಮಗಳತ್ತ ಗಮನ ಸೆಳೆಯಲು ಕೇಂದ್ರ ಪರಿಸರ, ಅರಣ್ಯಗಳು ಮತ್ತು ಹವಾಮಾನ ಬದಲಾವಣೆ ಮಂತ್ರಿ ಡಾ.ಹರ್ಷವರ್ಧನ್ ಅವರಿಗೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಜೂನೆ 21ರಂದು ಒಂದು ಮನವಿ ಪತ್ರವನ್ನು ಕಳಿಸಿದ್ದಾರೆ. ಅದರಲ್ಲಿ ಈ ದುಷ್ಪರಿಣಾಮಗಳನ್ನು ಪಟ್ಟಿ ಮಾಡುತ್ತ ದೇಶದ ರೈತಾಪಿಗಳ ಜನಗಳ ಆಗ್ರಹಗಳನ್ನು ಮುಂದಿಟ್ಟಿದ್ದಾರೆ.

ಹನ್ನನ್ ಮೊಲ್ಲ ಈ ಪತ್ರದಲ್ಲಿ ವಿವರವಾಗಿ ಎತ್ತಿರುವ ಎಐಕೆಎಸ್‌ನ್ ಆಕ್ಷೇಪಣೆಗಳ ಸಾರಾಂಶ ಹೀಗಿದೆ:

* ಒಟ್ಟಿನಲ್ಲಿ ಇದು ಮಾಂಸಕ್ಕಾಗಿ ಜಾನುವಾರುಗಳ ವ್ಯಾಪಾರವನ್ನು ನಿಷೇಧಿಸುತ್ತದೆ.
* ಜಾನುವಾರು ಎಂಬದರಲ್ಲಿ ದನಗಳಲ್ಲದೆ ಇತರ ಪ್ರಾಣಿಗಳನ್ನೂ ಸೇರಿಸಿರುವದು ಗ್ರಾಮಿಣ ಪ್ರದೇಶದಲ್ಲಿ ಗಂಭೀರ ಆರ್ಥಿಕ ನಷ್ಟಗಳನ್ನು ತರುತ್ತದೆ, ಜಾನುವಾರು ವ್ಯಾಪಾರ ರೈತರ ಹಕ್ಕು ಮತ್ತು ಆದಾಯದ ಮೂಲ, ಇದರ ಮೇಲೆ ನಿರ್ಬಂಧ ಮೂಲಭೂತ ಆಸ್ತಿ ಹಕ್ಕಿನ ನಿರಾಕರಣೆಯಾಗುತ್ತದೆ.
* ಈ ಅಧಿಸೂಚನೆಯನ್ನು ಪ್ರಾಣಿಗಳಿಗೆ ಕ್ರೌರ್ಯ ಕಾಯ್ದೆಯ ಅಡಿಯಲ್ಲಿ ತರಲಾಗಿದೆ. ಇದು ಕಾನೂನಾತ್ಮಕವಾಗಿಯೂ ಸರಿಯಲ್ಲ.
* ಈ ಅಧಿಸೂಚನೆಯಲ್ಲಿನ ನಿರ್ಬಂಧಗಳು ಜಾನುವಾರು ಸಂತೆಗಳಲ್ಲಿ ಜಾನುವಾರು ವ್ಯಾಪಾರವನ್ನು ನಿರಾಕರಿಸಿ ರೈತರ ಚೌಕಾಸಿ ಶಕ್ತಿಯನ್ನು, ಆಮೂಲಕ ಬದುಕಿನ ಆದಾಯವನ್ನು ಕುಂದಿಸುತ್ತದೆ.
* 24% ಬಡ ಮತ್ತು ಸಣ್ಣ ರೈತರು ದೇಶದ 50% ಜಾನುವಾರುಗಳನ್ನು ಹೊಂದಿದ್ದಾರೆ. ಈ ಅಧಿಸೂಚನೆ ಅವರು ಬೀಜ, ರಸಗೊಬ್ಬರ ಮತ್ತು ಉತ್ಪಾದಕ ಜಾನುವಾರುಗಳನ್ನು ಕೊಳ್ಳುವ ಅವರ ಸಾಮರ್ಥ್ಯಕ್ಕೆ ಸಂಚಕಾರ ತಂದು ಅವರ ಬದುಕನ್ನು ಧ್ವಂಸಗೊಳಿಸುತ್ತದೆ.
* ಹೈನುಗಾರಿಕೆಯ ಮೇಲೆ ಇದು ತೀವ್ರ ದುಷ್ಪರಿಣಾಮ ಬೀರುತ್ತದೆ. ಹಾಲಿಗೆ ದುಪ್ಪಟ್ಟು ಬೆಲೆ ಪಡೆದರೂ ಹೈನುಗಾರಿಕೆ ನಡೆಸಲಾಗದ ಪರಿಸ್ಥಿತಿಯನ್ನು ತರುತ್ತದೆ.
* ಸಾಗಾಣಿಕೆಯ ಮೇಲೆ ನಿರ್ಬಂಧ' ಕಾವಲುಕೋರ ಗುಂಪುಗಳಿಂದ ರೈತರು ಇನ್ನಷ್ಟು ತೊಂದರೆಗೊಳಗಾಗಿ ಅವರ ಜಾನುವಾರುಗಳಿಗೆ ಬೆಲೆಯಿಲ್ಲದಾಗುತ್ತದೆ.
* ಲಕ್ಷಾಂತರ ಮಂದಿಗೆ ಉದ್ಯೋಗ ಕೊಡುವ ಮಾಂಸ ಸಂಸ್ಕರಣೆ, ರಫ್ತು, ಚರ್ಮ ಉದ್ದಿಮೆ ಮತ್ತು ಜಾನುವಾರು ಸಾಗಾಣಿಕೆಯ ಮೇಲೂ ಇದು ದುಷ್ಪರಿಣಾಮ ಬೀರುತ್ತದೆ.

ಈ ಹಿನ್ನೆಲೆಯಲ್ಲಿ ಎಐಕೆಎಸ್ ಮಂತ್ರಿಗಳ ಮುಂದೆ ಈ ಕೆಳಗಿನ ಮನವಿಯನ್ನು ಇಟ್ಟಿದೆ.

1. ಈ ಅಧಿಸೂಚನೆ 'ಪ್ರಾಣಿಗಳಿಗೆ ಕ್ರೌರ್ಯ (ಜಾನುವಾರು ಮಾರುಕಟ್ಟೆ ನಿಯಂತ್ರಣ) ನಿಯಮಗಳು, 2017'ನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.
2. ಗೋವಧೆಯನ್ನು ನಿಷೇಧಿಸಲು ಗೋರಕ್ಷಣಾ ಕಾಯ್ದೆ ತಂದಿರುವ ರಾಜ್ಯಗಳಲ್ಲಿ ಸರಕಾರ ಎಲ್ಲ ಅನುತ್ಪಾದಕ ಹೆಣ್ಣು ಮತ್ತು ಗಂಡು ಜಾನುವಾರುಗಳನ್ನು ರೈತರಿಗೆ ಮಾರುಕಟ್ಟೆ ಬೆಲೆಯನ್ನು ಕೊಟ್ಟು ಖರೀದಿಸುವ ಮತ್ತು ಜಾನುವಾರು ಆಶ್ರಯಗಳನ್ನು ನಡೆಸುವ ಅಂಶವನ್ನು ಸೇರಿಸುವ ತಿದ್ದುಪಡಿಗಳನ್ನು ತರುವಂತೆ ಈ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಬೇಕು.
3. ಇಂತಹ ರಾಜ್ಯಸರಕಾರ ಸಾರ್ವಜನಿಕರ ಮೇಲೆ ಹೊರೆ ಹಾಕದೆ, ಯಾವುದೇ ಗೋತೆರಿಗೆ ಅಥವ ಸೆಸ್ ಹಾಕದೆ ಎಲ್ಲ ಬೀದಿ ಜಾನುವಾರುಗಳಿಗೆ ಆಶ್ರಯತಾಣಗಳನ್ನು, ಸಾಕಷ್ಟು ಮೇವು, ನೀರು ಮತ್ತು ಪಶು ವೈದ್ಯಕೀಯ ವ್ಯವಸ್ಥೆಯೊಂದಿಗೆ ಕಲ್ಪಿಸಬೇಕು.
4. ಪ್ರಾಣಿಗಳಿಗೆ ಕ್ರೌರ್ಯವನ್ನು ತಡೆಯಲು ತರ್ಕಬದ್ಧ ನಿಯಮಗಳನ್ನು ರೂಪಿಸುವ ಬಗ್ಗೆ ಚರ್ಚಿಸಲು ರೈತರು ಮತ್ತು ಕೃಷಿಕೂಲಿಕಾರರ ಸಂಘಟನೆಗಳ ಒಂದು ಸಭೆಯನ್ನು ಕರೆಯಬೇಕು.

ಡಾರ್ಜಿಲಿಂಗ್‌ನಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಡಾರ್ಜಿಲಿಂಗ್ ಗುಡ್ಡಗಾಡು ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ಏರ್ಪಟ್ಟಿದೆ ಎಂದು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು ಮತ್ತು ರಾಜ್ಯ ಸರಕಾರ ಹೇಳಿಕೊಳ್ಳುತ್ತಿದ್ದರೂ ಅಲ್ಲಿ ಪ್ರತಿದಿನ ನಿರಂತರ ಮುಷ್ಕರದ ಕರೆಗಳು ಬರುತ್ತಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ ಎಂದು ಅಲ್ಲಿಯ ಪರಿಸ್ಥಿತಿಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆತಂಕ ವ್ಯಕ್ತಪಡಿಸಿದೆ.

ಅಲ್ಲಿ ಸಾಮಾನ್ಯಸ್ಥಿತಿ ಏರ್ಪಡಿಸಬೇಕಾಗಿದೆ. ಅದು ಗೋರ್ಖಾ ಜನಮುಕ್ತಿ ಮೋರ್ಚಾ(ಜಿಜೆಎಂ) ದೊಡನೆ ಮಾತುಕತೆಗಳ ಮೂಲಕ ಮಾತ್ರ ಸಾಧ್ಯ. ಈ ಸಂಘಟನೆಯ ಮೇಲೆ ಪೊಲೀಸ್ ದಾಳಿಗಳು, ಬಂಧನಗಳು ಮುಂತಾದ ಸರ್ವಾಧಿಕಾರಶಾಹಿ ಕ್ರಮಗಳಿಂದ ಪರಿಹಾರ ಸಾಧ್ಯವಿಲ್ಲ. ಇವು ಖಂಡನೀಯ, ಇವು ಪರಿಸ್ಥಿತಿಯನ್ನು ಮತ್ತಷ್ಟು ಗೋಜಲುಗೊಳಿಸುತ್ತವೆ ಎಂದು ಸಿಪಿಐ(ಎಂ) ಹೇಳಿದೆ.

ಈ ಹಿಂದೆ ಎಡರಂಗ ಸರಕಾರ, ಕೇಂದ್ರಸರಕಾರ ಮತ್ತು ಜಿಜೆಎಂ ಪ್ರತಿನಿಧಿಗಳ ನಡುವೆ ನಡೆದ ತ್ರಿಪಕ್ಷೀಯ ಒಪ್ಪಂದದ ನಂತರ ಗೋರ್ಖಾ ಪ್ರಾದೇಶಿಕ ಆಡಳಿತ(ಜಿಟಿಎ) ಎಂಬುದನ್ನು ಸ್ಥಾಪಿಸಲಾಗಿತ್ತು. ರಾಜ್ಯ ಸರಕಾರ ಮತ್ತು ಮುಖ್ಯಮಂತ್ರಿಗಳು ಈ ತ್ರಿಪಕ್ಷೀಯ ವ್ಯವಸ್ಥೆಯನ್ನು ತಕ್ಷಣವೇ ಬಳಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಲಹೆ ಮಾಡಿದೆ.

ಇದರ ಜೊತೆಗೇ ಈ ಪ್ರದೇಶದ ಪಶ್ನೆಗಳ ಪರಿಹಾರಕ್ಕೆ ಮತ್ತು ಸಾಮಾನ್ಯ ಸ್ಥಿತಿಯನ್ನು ತರಲು ರಾಜ್ಯಸರಕಾರ ಮತ್ತು ಮುಖ್ಯಮಂತ್ರಿಗಳು ದಾರ್ಜಿಲಿಂಗ್ ಪರಿಸ್ಥಿತಿಯ ಬಗ್ಗೆ ಒಂದು ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಬೇಕು. ಇದು ಪಶ್ಚಿಮ ಬಂಗಾಲದಲ್ಲಿ ನೆಲೆಸಿರುವ ಜನಗಳ ಐಕ್ಯತೆ ಮತ್ತು ರಾಜ್ಯದ ಸಮಗ್ರತೆಯ ದೃಷ್ಟಿಯಿಂದ ಅತ್ಯಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಜೂನ್ 16: ದೇಶಾದ್ಯಂತ ರೈತರ ಬೃಹತ್ ಪ್ರತಿಭಟನೆ

ರೈತ–ವಿರೋಧಿ ಬಿಜೆಪಿ ಸರಕಾರಗಳ ವಿರುದ್ಧ ಆಕ್ರೋಶದ ಐಕ್ಯ ಕಾರ್ಯಾಚರಣೆಗಳು ಐಕ್ಯ ಹೋರಾಟಗಳನ್ನು ನಡೆಸಲು 100ಕ್ಕೂ ಹೆಚ್ಚು ರೈತ ಸಂಘಟನೆಗಳ ನಿರ್ಧಾರ

ಜೂನ್ 16 ರಂದು ದೇಶಾದ್ಯಂತ ನಡೆದ ಬ್ರಹತ್ ಪ್ರತಿಭಟನೆಗಳಲ್ಲಿ ರೈತರು ರಸ್ತೆಗಳನ್ನು ಅಡ್ಡಗಟ್ಟಿದ್ದಲ್ಲದೆ ಪ್ರಧಾನ ಮಂತ್ರಿ ಮೋದಿ, ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಹಣಕಾಸು ಮಂತ್ರಿ ಅರುಣ್ ಜೇಟ್ಲಿಯವರ ಪ್ರತಿಕೃತಿಗಳನ್ನು ಸುಟ್ಟು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಮಧ್ಯಪ್ರದೇಶದ ಮಂದ್‌ಸೌರ್‌ನಲ್ಲಿ ಆರು ರೈತರ ಅಮಾನುಷ ಹತ್ಯೆ ಮತ್ತು ಬಿಜೆಪಿ ಸರಕಾರದ ರೈತ–ವಿರೋಧಿ ಧೋರಣೆಗಳು ಹಾಗೂ ಸಂವೇದನಾಶೂನ್ಯತೆಯ ವಿರುದ್ಧ ಈ ಸಮರಧೀರ ಐಕ್ಯ ಸೌಹಾರ್ದ ಕಾರ್ಯಾಚರಣೆಗೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ದೇಶದ ರೈತಾಪಿ ಜನಗಳನ್ನು ಅಭಿನಂದಿಸಿದೆ.

ವರದಿಗಳ ಪ್ರಕಾರ ಬಂಗಾಲದ ಎಲ್ಲ 355 ಬ್ಲಾಕುಗಳಲ್ಲಿ ರೈತರು ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದರು. ಕೇರಳದಲ್ಲಿ ಎಲ್ಲ ಜಿಲ್ಲೆಗಳಲ್ಲಿ ರಸ್ತೆ ತಡೆಗಳು ಮತ್ತು ಪ್ರತಿಕೃತಿ ದಹನಗಳು ನಡೆದವು. ತ್ರಿಪುರಾದಲ್ಲಿ ಭಾರೀ ಮಳೆಯ ನಡುವೆಯೂ ಎಲ್ಲ ಕಡೆಗಳಲ್ಲಿ ಸಾವಿರಾರು ರೈತರು ಪ್ರತಿಭಟನೆಗಳಲ್ಲಿ ಭಾಗವಹಿಸಿದರು. ಮಧ್ಯಪ್ರದೇಶ, ರಾಜಸ್ತಾನ, ಒಡಿಶ, ಹರ್ಯಾಣ, ಉತ್ತರಪ್ರದೇಶ, ತೆಲಂಗಾಣ, ತಮಿಳುನಾಡು, ಝಾರ್ಖಂಡ್‌ನಲ್ಲಿ ರೈತರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಬೀದಿಗಿಳಿದರು.

ಮಧ್ಯಪ್ರದೇಶ ಪೋಲೀಸರು ರೇವಾದಲ್ಲಿ ಎಐಕೆಎಸ್ ರಾಜ್ಯ ಕಾರ್ಯದರ್ಶಿ ರಾಮ್ ನಾರಾಯಣ್ ಅವರನ್ನು ಪ್ರತಿಭಟನಾ ನಿರತ ನೂರಾರು ರೈತರೊಂದಿಗೆ ಬಂಧಿಸಿದರು. ಮೊರೆನ ಜಿಲ್ಲೆಯ ಕೈಲಾರಸ್ ಮತ್ತಿತರ ಹಲವು ಕಡೆಗಳಲ್ಲಿಯೂ ರೈತರನ್ನು ಬಂಧಿಸಲಾಯಿತು. ರಾಜ್ಯಾದ್ಯಂತ 1500ಕ್ಕೂ ಹೆಚ್ಚು ರೈತರನ್ನು ಬಂಧಿಸಲಾಯಿತು ಎಂದು ವರದಿಯಾಗಿದೆ. ಹಲವೆಡೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರೈತರು ಅಡ್ಡಗಟ್ಟಿ ನಿಂತು ಪ್ರತಿಭಟನೆ ವ್ಯಕ್ತಪಡಿಸಿದರು.

ರಾಜಸ್ತಾನದಲ್ಲಿ ಅಂದು ಸಾಲಮನ್ನಾ, ಫಲದಾಯಕ ಬೆಲೆಗಳು, ಚೌಹಾಣ್ ರಾಜೀನಾಮೆಗಾಗಿ ಮತ್ತು ಜಾನುವಾರು ವ್ಯಾಪಾರ ನಿರ್ಬಂಧದ ಅಧಿಸೂಚನೆಯ ವಿರುದ್ಧ ಬೃಹತ್ ಪ್ರತಿಭಟನೆಗಳು ನಡೆದವು. ಸಿಕಾರ್‌ನಲ್ಲಿ ಕಲೆಕ್ಟರ್ ಕಚೇರಿಯ ಘೇರಾವ್ ನಡೆಸಿದ ಮಹಾಪಡಾವ್ ನಂತರ ಅಧಿಕಾರಿಗಳು ಈರುಳ್ಳಿಯ ನ್ಯಾಯಬೆಲೆಯಲ್ಲಿ ಖರೀದಿಗೆ ಮತ್ತು ರೈತರ ಇತರ ಅಹವಾಲುಗಳನ್ನು ಪರಿಶೀಲಿಸಲು ಒಪ್ಪುವಂತೆ ಮಾಡಲಾಯಿತು.

ಹರ್ಯಾಣದಲ್ಲಿ 9 ಜಿಲ್ಲೆಗಳಲ್ಲಿ ಜೂನ್ 14ರಿಂದ ಧರಣಿಗಳು ನಡೆಯುತ್ತಿದ್ದು ಕೆಲವು ಜಿಲ್ಲೆಗಳಲ್ಲಿ ಅವು ಕಲೆಕ್ಟರ್ ಕಚೇರಿಗಳ ಘೇರಾವ್‌ಗಳಾಗಿ ಪರಿವರ್ತನೆಗೊಂಡವು. ಹಿಸ್ಸಾರ್‌ನಲ್ಲಿ ಮುತ್ತಿಗೆ ಆನಂತರವೂ ಮುಂದುವರಿಯಿತು. ಪಂಜಾಬಿನಲ್ಲಿ ರಾಜ್ಯಾದ್ಯಂತ ರಸ್ತೆ ತಡೆಗಳು ಆರಂಭವಾಗಿ ಒಂದು ವಾರದ ವರೆಗೆ ಅದನ್ನು ಮುಂದುವರೆಸಲಾಗಿದೆ.

ಬಿಹಾರ, ಅಸ್ಸಾಂ, ಜಮ್ಮು–ಕಾಶ್ಮೀರದಲ್ಲಿ ಜೂನ್ 14ರಂದು ಪ್ರತಿಭಟನೆ ನಡೆದರೆ, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಜೂನ್ 12ರಂದು ನಡೆಯಿತು. ಉತ್ತರಪ್ರದೇಶದಲ್ಲಿ ಮೆರವಣಿಗೆಗಳು, ಪ್ರತಿಕೃತಿ ದಹನ ಮತ್ತು ಮತಪ್ರದರ್ಶನಗಳು ನಡೆದವು. ತಮಿಳುನಾಡಿನಲ್ಲಿ ಜೂನ್ 14ರಂದು ತಿರುವರೂರ್‌ನಲ್ಲಿ ಬೃಹತ್ ಜಂಟಿ ಪ್ರದರ್ಶನ ನಡೆಯಿತು, ನಂತರ ಜೂನ್ 16ರಂದು ತಮಿಳುನಾಡು ವ್ಯವಸಾಯಿಗಳ್ ಸಂಘಂ ಪ್ರತಿಭಟನೆಗಳು ನಡೆದವು. ತೆಲಂಗಾಣದಲ್ಲಿ ರೈತ ಸಂಘ ಮತ್ತು ಕೃಷಿಕೂಲಿಕಾರರ ಸಂಘ ಜಂಟಿಯಾಗಿ ರಾಸ್ತಾರೋಕೋ ನಡೆಸಿದವು. ಒಡಿಶದಲ್ಲಿ ಎಲ್ಲ ಕಡೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ರೈತರು ಭಾಗವಹಿಸಿದರು.

ಭೂಮಿ ಅಧಿಕಾರ್ ಆಂದೋಲನ್ನ ಅಂಗ ಸಂಘಟನೆಗಳೂ ಈ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವು.

ರಾಜಸ್ತಾನ ಮತ್ತು ಮಧ್ಯಪ್ರದೇಶದಲ್ಲಿ ರೈತರ ಹೋರಾಟಕ್ಕೆ ಸಿಕ್ಕ ವಿಜಯ ದೇಶಾದ್ಯಂತ ರೈತರಿಗೆ ಹೊಸ ಹುರುಪು ತುಂಬಿವೆ. ಮಧ್ಯಪ್ರದೇಶ, ಝಾರ್ಖಂಡ್ ಮತ್ತಿತರ ಕಡೆಗಳಲ್ಲಿ ಅಮಾನುಷ ದಮನ ರೈತರ ಹೋರಾಟಗಳನ್ನು ತಡೆಯಲಾರವು ಎಂದಿರುವ ಎಐಕೆಎಸ್ ಜೂನ್ 16 ರಂದು 100 ಕ್ಕೂ ಹೆಚ್ಚು ಸಂಘಟನೆಗಳ ಸಭೆ ನಡೆದು ಮುಂಬರುವ ದಿನಗಳಲ್ಲಿ ಸಂಯೋಜಿತ ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದೆ. ರೈತಾಪಿ ಜನಗಳ ಎಲ್ಲ ಬೇಡಿಕೆಗಳು ಈಡೇರುವ ವರೆಗೆ ರೈತಾಪಿಗಳು, ಶ್ರಮಜೀವಿ ಸಮೂಹಗಳು ಮತ್ತು ದಮನಿತ ವಿಭಾಗಗಳನ್ನು ಒಂದುಗೂಡಿಸಿ ಹೋರಾಟಗಳನ್ನು ತೀವ್ರಗೊಳಿಸುವುದಾಗಿ ಎಐಕೆಎಸ್ ಎಚ್ಚರಿಸಿದೆ.

ಇತ್ತೀಚಿನ ವರ್ಷಗಳಲ್ಲಿ ರೈತಾಪಿ ಜನಗಳ ಅತ್ಯಂತ ವ್ಯಾಪಕ ಪ್ರತಿಭಟನಾ ಕಾರ್ಯಾಚರಣೆ: ಸಿಐಟಿಯು ಅಭಿನಂದನೆ

ಅಖಿಲ ಭಾರತ ಕಿಸಾನ್ ಸಭಾ ಮತ್ತಿತರ ರೈತಸಂಘಟನೆಗಳ 'ಭೂಮಿ ಅಧಿಕಾರ್ ಆಂದೋಲನ್ ಕರೆಯ ಮೇರೆಗೆ ಸ್ವಾಮಿನಾಥನ್ ಆಯೋಗದ ಶಿಫಾರಸು, ಸಮಗ್ರ ಸಾಲ ಮನ್ನಾ, ಮಧ್ಯಪ್ರದೇಶ ಮುಖ್ಯಮಂತ್ರಿ ರಾಜೀನಾಮೆ, ಜಾನುವಾರು ವ್ಯಾಪಾರ ನಿರ್ಬಂಧದ ಅಧಿಸೂಚನೆಯ ರದ್ದು ಮತ್ತಿತರ ಬೇಡಿಕೆಗಳನ್ನು ಆಗ್ರಹಿಸಿ ಜೂನ್ 16ರಂದು ನಡೆಸಿರುವ ಯಶಸ್ವಿ ಪ್ರತಿಭಟನಾ ಕಾರ್ಯಾಚರಣೆಗೆ ರೈತಾಪಿಗಳು ಮತ್ತು ರೈತಸಂಘಟನೆಗಳನ್ನು ಸಿಐಟಿಯು ಅಭಿನಂದಿಸಿದೆ.

ಇದು ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ನಡೆದಿರುವ ರೈತಾಪಿ ಜನಗಳ ಅತ್ಯಂತ ವ್ಯಾಪಕವಾದ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಒಂದು ಎಂದು ಸಿಐಟಿಯು ವರ್ಣಿಸಿದೆ. ಹಿಂದಿ ಭಾಷಿಕ ಪ್ರದೇಶದಲ್ಲಿ ಇದು ಯಶಸ್ವಿಯಾಗಿ ನಡೆದಿರುವುದು ಗಮನಾರ್ಹ ಎಂದು ಅದು ಹೇಳಿದೆ. ಸಿಐಟಿಯು ಸಂಘಗಳು ರೈತರ ಪ್ರತಿಭಟನೆಗೆ ಬೆಂಬಲವನ್ನು ಸಂಘಟಿಸಿದವು, ಹಲವೆಡೆ ರೈತರೊಂದಿಗೆ ಪ್ರತಿಭಟನೆಗಳಲ್ಲಿ ಕೈಜೋಡಿಸಿದವು, ಹರ್ಯಾಣದಲ್ಲಿ ಹಲವೆಡೆಗಳಲ್ಲಿ ಎಐಕೆಎಸ್ ನೊಂದಿಗೆ ಜಂಟಿಯಾಗಿ ರಸ್ತ ತಡೆಗಳನ್ನು ನಡೆಸಿದವು.

ರೈತಾಪಿ ಜನಗಳು ಕಾರ್ಪೊರೇಟ್–ಪರ, ರೈತ–ವಿರೋಧಿ ನರೇಂದ್ರ ಮೋದಿ ಸರಕಾರದ ವಿರುದ್ಧ ಬೀದಿಗಿಳಿರುವುದು ಅಭಿನಂದನಾರ್ಹ. ಎಐಕೆಎಸ್ ಮತ್ತು ಭೂಮಿ ಅಧಿಕಾರ್ ಆಂದೋಲನ್ ತಮ್ಮ ಸತತ ಹೋರಾಟಗಳ ಮೂಲಕ ಭೂಸ್ವಾಧೀನ ಸೇರಿದಂತೆ ರೈತರ ಪ್ರಶ್ನೆಗಳನ್ನು ರಾಷ್ಟ್ರೀಯ ಅಜೆ–ಂಡಾಕ್ಕೆ ತರುವಲ್ಲಿ ಮುತುವರ್ಜಿ ವಹಿಸಿವೆ. ತಮ್ಮ ಬೇಡಿಕೆಗಳು ಈಡೇರುವ ವರೆಗೆ ಹೋರಾಟವನ್ನು ಮುಂದುವರೆಸುವ ರೈತ ಸಂಘಟನೆಗಳ ನಿರ್ಧಾರವನ್ನು ಸ್ವಾಗತಿಸುತ್ತ ಸಿಐಟಿಯು ಈ ಹೋರಾಟಗಳಿಗೆ ತನ್ನ ಸಂಪೂರ್ಣ ಸೌಹಾರ್ದ ಮತ್ತು ಬೆಂಬಲ ವ್ಯಕ್ತಪಡಿಸಿದೆ.

ಮೋದಿ ಸರಕಾರ ಕೃಷಿಯ ಕಾರ್ಪೊರೇಟೀಕರಣದ ತನ್ನ ಧೋರಣೆಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ತಕ್ಷಣ ರೈತಾಪಿ ಜನಗಳ ನ್ಯಾಜ ಬೇಡಿಕೆಗಳನ್ನು ಸ್ವೀಕರಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ. ಮುಂಬರುವ ದಿನಗಳಲ್ಲಿ ದೇಶಾದ್ಯಂತ ಸಿಐಟಿಯು ರಾಜ್ಯಸಮಿತಿಗಳು ರೈತರೊಂದಿಗೆ ಸೌಹಾರ್ದವನ್ನು ಮುಂದುವರೆಸಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ.

ಸಂಪಾದಕೀಯ

ಕಲ್ಲಡ್ಕ ಪ್ರಭಾಕರ ಭಟ್ ಬಂಧಿಸಿ!

ಕಲ್ಲಡ್ಕದಲ್ಲಿ ಪದೇ ಪದೇ ಹಿಂಸಾಚಾರದ ಘಟನೆಗಳು ನಡೆಯುತ್ತಿವೆ. ಚೂರಿ ಇರಿತ, ಕೊಲೆ, ಹಲ್ಲೆ, ದೊಂಬಿ ಇಲ್ಲಿ ಸಾಮಾನ್ಯ. ಹೆಚ್ಚು ಕಡಿಮೆ ಕಳೆದ 4 ವಾರಗಳಿಂದ ಸತತವಾಗಿ ನಿಷೇಧಾಜ್ಞೆಯಲ್ಲಿದೆ. ಇತ್ತೀಚೆಗೆ ಮೇ 26 ಮತ್ತು ಜೂನ್ 13ರಂದು ನಡೆದ ಚೂರಿ ಇರಿತಗಳು, ಜೂನ್ 21ರಂದು ಎಸ್.ಡಿ.ಪಿ.ಐ. ಕಾರ್ಯಕರ್ತನ ಕೊಲೆ – ಹೀಗೆ ಸತತವಾಗಿ ಹಿಂಸಾಚಾರ ನಡೆಯುತ್ತಲೇ ಇದೆ. ಪ್ರತಿ ಹಿಂಸಾಚಾರದ ಘಟನೆ ಅದು ವೈಯಕ್ತಿಕ ದ್ವೇಷದ ಕಾರಣವಾಗಿರಲಿ ಇನ್ನೇನೇ ಇರಲಿ, ಅದು ಕೋಮು ಗಲಭೆ–ದೊಂಬಿಗೆ ತಿರುಗುವುದು ಕಲ್ಲಡ್ಕದ ವಿಶೇಷ. ಇದು ಬರಿಯ ಕಳೆದ ಕೆಲವು ವಾರಗಳ ವಿದ್ಯಮಾನ ಅಲ್ಲ. ಇದು ಹಲವು ವರ್ಷಗಳಿಂದ ನಡೆದು ಬಂದಿದೆ. ಒಂದು ಧರ್ಮದ ವ್ಯಕ್ತಿಯ ವಾಹನದಿಂದ ಚಿಮ್ಮಿದ ಕೆಸರು ಮತ್ತೊಂದು ಧರ್ಮದವರ ಮೇಲೆ ಬಿದ್ದ ಘಟನೆ ಸಹ ಕೋಮುದೊಂಬಿಗೆ ತಿರುಗುತ್ತದೆ. ಒಂದು ಧರ್ಮದ ವ್ಯಾಪಾರಿಯ ಅಂಗಡಿಯಲ್ಲಿದ್ದ ಕೊಳೆತ ಟೊಮೆಟೊ ಎಸೆಯುವಾಗ ಇನ್ನೊಂದು ಧರ್ಮದ ವ್ಯಕ್ತಿಯ ಮೇಲೆ ಬಿದ್ದ ಘಟನೆ ಕೋಮು ಹಿಂಸಾಚಾರಕ್ಕೆ ಕಾರಣವಾಗುತ್ತದೆ. ಇದೇನು ಆಕಸ್ಮಿಕವಲ್ಲ. ಇದು ಯೋಜಿತ. ಮತ್ತು ಇದು ಮುಂದುವರಿಯುತ್ತಿರುವುದಕ್ಕೆ ಕಾರಣ, ಈ ಕೋಮು ಗಲಭೆಗಳನ್ನು ಯೋಜಿಸುತ್ತಿರುವವರು ಪ್ರಬಲ ಶಕ್ತಿ–ವ್ಯಕ್ತಿಗಳು. ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ ಎಂಬ ಭರವಸೆ. ಕಲ್ಲಡ್ಕದ ಈ ಅಪಕೀರ್ತಿಗೆ ಒಂದು ಪ್ರಮುಖ ಕಾರಣ ಇದೇ ಪಟ್ಟಣದ ಹೆಸರು ಹೊತ್ತ ಒಬ್ಬ ವ್ಯಕ್ತಿ – ಕಲ್ಲಡ್ಕ ಪ್ರಭಾಕರ ಭಟ್.

ಕಲ್ಲಡ್ಕ ಪ್ರಭಾಕರ ಭಟ್ ಕಲ್ಲಡ್ಕ ಮಾತ್ರವಲ್ಲ, ಇಡೀ ದಕ್ಷಿಣ ಕನ್ನಡದ ಕೋಮುವಾದೀಕರಣದ ಕೋಮು ಕಲಹಗಳ, ಕೋಮು ದೊಂಬಿಗಳ ಸೂತ್ರಧಾರ. ಆರೆಸ್ಸೆಸ್ ನ ದಕ್ಷಿಣ ಭಾರತ ಮಟ್ಟದ ನಾಯಕ ಈತ. ಸೂತ್ರಧಾರ ಎಂದರೆ ಹಿಂದೆ ನಿಂತು ಗಲಭೆಗಳನ್ನು ನಡೆಸುವುದು ಮಾತ್ರವಲ್ಲ. ಆತನ ಭಾಷಣಗಳು ಅಕ್ಷರಶಃ ಕೋಮು ಬೆಂಕಿ ಉಗುಳುವಂತಹುದು. ಸಂಘ ಗ್ಯಾಂಗ್ ನ ರಾಜಕೀಯ ಬಂಡವಾಳ ಖಾಲಿಯಾದಾಗ ಚುನಾವಣೆಗಳ ಮೊದಲು ನಡೆಸುವ ಹಿಂದೂ ಸಮಾಜೋತ್ಸವಗಳಲ್ಲಿ ಆತ ದಕ್ಷಿಣ ಕನ್ನಡದ ಎರಡು ದೊಡ್ಡ ಅಲ್ಪ ಸಂಖ್ಯಾತ ಸಮುದಾಯಗಳಾದ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರ ವಿರುದ್ಧ ಕಾರುವ ಕೋಮು ವಿಷ, ಶಿವಸೇನೆಯ ನಾಯಕ ಬಾಳಾ ಠಾಕ್ರೆಯನ್ನು ನಾಚಿಸುವಂತೆ ಇರುತ್ತದೆ. ಆತನನ್ನು "ಮಂಗಳೂರಿನ ಬಾಳಾ ಠಾಕ್ರೆ" ಎಂದು ಕರೆಯಲಾಗುತ್ತದೆ. ಆತನ ಎಷ್ಟೋ ಭಾಷಣಗಳ ವಿರುದ್ಧ ಕೋಮುದ್ವೇಷ–ಪೂರಿತ ದೂರು, ಮೊಕದ್ದಮೆಗಳನ್ನು ಹಾಕಲಾಗಿದೆ. ಆದರೆ ಎಂದೂ ಬಾಳಾ ಠಾಕ್ರೆಯಂತೆ ಆತನನ್ನು ಬಂಧಿಸಲಾಗಿಲ್ಲ. ಈ ಎರಡೂ ಪ್ರಕರಣಗಳಲ್ಲಿ ನಿಜವಾದ ಅಪರಾಧಿಗಳು ಕಾಂಗ್ರೆಸ್ ಸರಕಾರಗಳು ಮತ್ತು ಆಡಳಿತ. ಏಕೆಂದರೆ ಅವರು ಕಾನೂನು ಪ್ರಕಾರ ಇಂತಹ ವ್ಯಕ್ತಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿಲ್ಲ. ಬದಲಾಗಿ ಆತನೊಂದಿಗೆ 'ಅನಾಕ್ರಮಣ' ಒಪ್ಪಂದ ಮಾಡಿಕೊಂಡಿದ್ದಾರೆ. ಕೆಲವು ಕಾಂಗ್ರೆಸಿಗರು ಶಾಮೀಲು ಕೂಡಾ ಆಗಿದ್ದಾರೆ. ಆದ್ದರಿಂದ ಕಲ್ಲಡ್ಕ ಮಾತ್ರವಲ್ಲ, ಇಡೀ ದಕ್ಷಿಣ ಕನ್ನಡ ಅವ್ಯಾಹತವಾಗಿ ಕೋಮು ದಳ್ಳುರಿಯಲ್ಲಿ ನಲುಗುತ್ತಿದೆ.

ಬೆಂಗಳೂರಿನಲ್ಲಿ ಯಾವುದೇ ಸರಕಾರ ಇರಲಿ, ಕಲ್ಲಡ್ಕ ಪ್ರಭಾಕರ ಭಟ್ ದಕ್ಷಿಣ ಕನ್ನಡದ 'ಬದಲಿ' ಅಥವಾ 'ನಿಜವಾದ' ಸರ್ಕಾರ ಎನ್ನಲಾಗುತ್ತದೆ. ಅಥವಾ ಉಸ್ತುವಾರಿ ಮಂತ್ರಿ ಎನ್ನೋಣವೇ?! ಜಿಲ್ಲೆಯ ಸಿವಿಲ್ ಮತ್ತು ಪೋಲಿಸ್ ಅಧಿಕಾರಿಗಳ ನೇಮಕ, ಟ್ರಾನ್ಸಫರ್ ಆತನ ಸಮ್ಮತಿಯೊಂದಿಗೆ ನಡೆಯುತ್ತದೆ ಎನ್ನಲಾಗುತ್ತದೆ. ಬಾಳಾ ಠಾಕ್ರೆಯ ಬಗ್ಗೆ ಹೇಳುತ್ತಿದ್ದಂತೆ, ಪ್ರಭಾಕರ ಭಟ್ ನನ್ನು ಬಂಧಿಸಿದರೆ ಇಡೀ ದಕ್ಷಿಣ ಕನ್ನಡ ಹತ್ತಿ ಉರಿಯುತ್ತದೆ ಎಂದು ಆಡಳಿತ, ಪೋಲಿಸ್ ಮತ್ತು ರಾಜಕೀಯ ನಾಯಕರನ್ನು ಬೆದರಿಸಲಾಗುತ್ತದೆ. ಇದನ್ನು ಹೌದಾ ಎಂದು ಯಾರೂ ಟೆಸ್ಟ್ ಮಾಡಲು ಹೋಗಿಲ್ಲ. ಆದರೆ ಇದನ್ನು ಮಾಡದೆ ಯಾವುದೇ ಸರಕಾರ ದಕ್ಷಿಣ ಕನ್ನಡದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡುತ್ತೇವೆ ಎಂದು ಶಪಥ ಮಾಡುವುದು ಆತ್ಮವಂಚನೆಯಾಗುತ್ತದೆ. ಬೊಗಳೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸೆಕ್ಯುಲರ್ ಮತ್ತು ಎಡ ಶಕ್ತಿಗಳು ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಬಂಧಿಸಲು ಬೇಕಾದಷ್ಟು ಪುರಾವೆಗಳಿವೆ. ಆತನ "ಕೋಮುದ್ವೇಷ"ದ ಭಾಷಣಗಳ ದೊಡ್ಡ ಲೈಬ್ರರಿಯೇ ಇದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು ಅಷ್ಟೇ. ಕಳೆದ ಚುನಾವಣೆ ಪ್ರಚಾರದ ಸಮಯದಲ್ಲಿ ಆ ಮೇಲೆ ಮಂತ್ರಿಗಳಾದ ರಮಾನಾಥ ರೈ ಮತ್ತು ಯು.ಟಿ. ಖಾದರ್, ಕಾಂಗ್ರೆಸ್ ಸರಕಾರ ಬಂದರೆ ಕಲ್ಲಡ್ಕ ಪ್ರಭಾಕರ ಭಟ್ ಬಂಧಿಸುತ್ತೇವೆ ಎಂದು ಜಿಲ್ಲೆಯ ಜನತೆಗೆ ಆಶ್ವಾಸನೆ ಕೊಟ್ಟಿದ್ದರು. 4 ವರ್ಷ ವಿಳಂಬವಾಗಿದ್ದರೂ, ಈಗಲಾದರೂ ರಮಾನಾಥ ರೈ ಅವರಿಗೆ ಇನ್ನೊಂದು ಚುನಾವಣೆ ಹತ್ತಿರ ಬರುತ್ತಿರುವಾಗಲಾದರೂ ಆ ಆಶ್ವಾಸನೆ ಈಡೇರಿಸುವ ಮನಸ್ಸಾಗಿದ್ದರೆ ಅದನ್ನು ಎಲ್ಲರೂ ಸ್ವಾಗತಿಸಬೇಕು. ಟೀಕಿಸಬೇಕಾಗಿಲ್ಲ.

ರಮಾನಾಥ ರೈ ಈ ಬಗ್ಗೆ ಎಸ್.ಪಿ.ಯವರಿಗೆ ನೀಡಿದ ಆದೇಶ ಸರಿಯಾಗಿಯೇ ಇದೆ. ಅದು ಅವರ ಸಂವಿಧಾನಬದ್ಧ ಕರ್ತವ್ಯವೂ ಹೌದು. ಅದನ್ನು ವೈಯಕ್ತಿಕವಾಗಿ ಎಸ್.ಪಿ.ಗೆ ಹೇಳಬೇಕಿತ್ತೊ ಮೀಟಿಂಗ್ ನಲ್ಲಿ ಹೇಳಬೇಕಿತ್ತೊ ಎಂಬುದು ಬೇರೆ ವಿಚಾರ. ಆ ಮೀಟಿಂಗಿನಲ್ಲಿ ಇದ್ದವರೆಲ್ಲಾ ಅಧಿಕಾರಿಗಳು. ಅದರ ವಿಡಿಯೋ ಹೇಗೆ ಮಾಧ್ಯಮಗಳಿಗೆ ತಲುಪಿತು ಎಂಬ ಬಗ್ಗೆ ತನಿಖೆಗೆ ಆಜ್ಞೆ ಮಾಡಬೇಕು. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಇದರ ಬಗ್ಗೆ ಸದನದಲ್ಲಿ ಇದು ಒಂದು ಅಪರಾಧವೋ ಎಂಬಂತೆ ಸದನದಲ್ಲಿ ರೈ ಗಳ ಮೇಲೆ ಮುಗಿ ಬಿದ್ದ ಬಿಜೆಪಿ ಸದಸ್ಯರಿಗೆ ಸಂವಿಧಾನ ಕಾನೂನು ಪಾಠ ಹೇಳಬೇಕಾಗಿದೆ. ಬಿಜೆಪಿಯ ಈ ಅರಚಾಟವನ್ನೇ ತಾರಕಕ್ಕೆ ಒಯ್ದ ಮಾಧ್ಯಮಗಳಿಗೂ ಈ ಪಾಠ ಹೇಳಬೇಕಾಗಿದೆ. ರಮಾನಾಥ ರೈ ಅವರನ್ನು ಪರಿಣಾಮಕಾರಿಯಾಗಿ ಬೆಂಬಲಿಸದ ಗೃಹ ಮಂತ್ರಿ ಮತ್ತು ಕಾಂಗ್ರೆಸ್ ಗೂ ಈ ಪಾಠ ಹೇಳಬೇಕಾಗಿದೆ.

ಕಲ್ಲಡ್ಕ ಪ್ರಭಾಕರ ಭಟ್ ಮಾತ್ರವಲ್ಲ, ಆಗಾಗ ದಕ್ಷಿಣ ಕನ್ನಡದಲ್ಲಿ "ಕೋಮುದ್ವೇಷ" ಹಬ್ಬಿಸುವ ಭಾಷಣ ಮಾಡುವ ಎಲ್ಲರನ್ನು ಬಂಧಿಸಬೇಕು. ಸಂಸದ ನಳಿನ್ ಕಟೀಲ್ ಇಡೀ ಜಿಲ್ಲೆಗೆ ಬೆಂಕಿ ಹಚ್ಚುವ ಭಾಷಣಕ್ಕೂ ಆತನನ್ನು ಬಂಧಿಸಬೇಕು. ಸಂಘ ಗ್ಯಾಂಗಿನ ಬೆದರಿಕೆಗೆ ಮಣಿಯದೆ ಪಿಣರಾಯಿ ವಿಜಯನ್ ಭೇಟಿಯ ಸಂದರ್ಭದಲ್ಲಿ, ಅವರು, ಸಿಪಿಐ(ಎಂ) ಮತ್ತು ರಾಜ್ಯ/ಜಿಲ್ಲಾ ಆಡಳಿತ ತೋರಿಸಿದ ಸ್ಥೈರ್ಯವನ್ನು ಮತ್ತೊಮ್ಮೆ ತೋರಿಸಬೇಕಾಗಿದೆ.

ಸಾಲಮನ್ನಾ – ರೈತರ ಹೋರಾಟಕ್ಕೆ ಜಯ, ಆದರೆ ಅಸಮರ್ಪಕ : ರೈತ ಸಂಘ

ಕರ್ನಾಟಕ ಸರಕಾರವು ಪ್ರಕಟಿಸಿದ ಸಹಕಾರಿ ಬ್ಯಾಂಕುಗಳಲ್ಲಿ ಜೂನ್ 20, 2017 ರವರೆಗೆ ರೈತರು ಪಡೆದ ಒಟ್ಟು ಅಲ್ಪಾವದಿ ಬೆಳೆ ಸಾಲದಲ್ಲಿ 50 ಸಾವಿರ ರೂಪಾಯಿಗಳ ಮನ್ನಾ ಘೋಷಣೆಯು, ರಾಜ್ಯದ ರೈತರು ಹಾಗೂ ಕೂಲಿಕಾರರು ನಡೆಸಿದ ಹೋರಾಟಕ್ಕೆ ಸಂದ ಜಯವಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಂತಸ ವ್ಯಕ್ತಪಡಿಸಿದೆ. ಈ ಮೂಲಕ ರಾಜ್ಯ ಸರಕಾರ ರೈತರು–ಕೂಲಿಕಾರರು ಸರಕಾರದ ನೀತಿ ನಿಯಮಗಳು ಮತ್ತು ಅತಿವೃಷ್ಠಿ, ಅನಾವೃಷ್ಠಿಗಳಿಂದಾಗಿ ಸಾಲ ಬಾಧಿತರಾಗಿರುವುದನ್ನು ಒಪ್ಪಿಕೊಂಡಂತಾಗಿದೆ.

ಆದರೆ ಇದು ಒಟ್ಟಾರೆ, ರಾಜ್ಯದ ಸಾಲ ಬಾಧಿತ ರೈತರ/ಗೇಣಿದಾರರ ಮತ್ತು ಕೂಲಿಕಾರರ ಆತ್ಮಹತ್ಯೆಗಳನ್ನು ತಡೆಯುವಲ್ಲಿ ಅಷ್ಟೇನೂ ಸಹಕಾರಿಯಾಗಿಲ್ಲವೆಂದು ಅಭಿಪ್ರಾಯ ಪಟ್ಟಿದೆ.

ಸಾಲ ಬಾಧಿತ ರೈತರ ಹಾಗೂ ಕೂಲಿಕಾರರ ಮತ್ತು ಗೇಣಿದಾರರ ಖಾಸಗಿ ಸಾಲವೂ ಸೇರಿದಂತೆ, ಸಹಕಾರಿ ಹಾಗೂ ಸಾರ್ವಜನಿಕ ಬ್ಯಾಂಕುಗಳ ಎಲ್ಲಾ ರೀತಿಯ ಸಾಲವನ್ನು, ಕೇರಳ ಸರಕಾರ ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಿದ ಮಾದರಿಯಲ್ಲಿ, ಕರ್ನಾಟಕದಲ್ಲೂ ಜಾರಿಗೊಳಿಸುವುದು ಮಾತ್ರವೇ, ಸಾಲದ ಬಾಧೆಯಿಂದ ಅವರನ್ನು ತಕ್ಷಣ ರಕ್ಷಿಸಲಿರುವ ಮಾರ್ಗವಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಪುನರುಚ್ಚರಿಸಿದೆ. ತಕ್ಷಣವೇ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆ ದಿಕ್ಕಿನಲ್ಲಿ ಕ್ರಮವಹಿಸುವಂತೆ ಮರಳಿ ಒತ್ತಾಯಿಸಿದೆ.

ಸಹಕಾರಿ ಬ್ಯಾಂಕುಗಳು ಬಹುತೇಕ ಭೂಮಾಲಕ ಬಂಡವಾಳದಾರರ ಹಿಡಿತ ಮತ್ತು ಸೇವೆಯಲ್ಲಿರುವುದರಿಂದ ಸಾಲ ಬಾಧಿತರಲ್ಲದ ಮತ್ತು ರೈತರ ಸಾಲಬಾದೆಗೆ ಕಾರಣವಾದ ಇವರ ಸಾಲವನ್ನು ಮನ್ನಾ ಮಾಡಿ ಅವರು ಮತ್ತಷ್ಟು ಬಲಗೊಳ್ಳಲು ನೆರವಾಗಿರುವುದು ಎಂದಿನಂತೆ ಈ ಸಾಲ ಮನ್ನಾದ ವಿಶೇಷವಾಗಿರುವುದು ವಿಷಾದಕರವಾಗಿದೆ. ಹೀಗಾಗಿ, ರಾಜ್ಯದ 65 ಲಕ್ಷ ರೈತರು ಮತ್ತು ಸುಮಾರು 75 ಲಕ್ಷದಷ್ಟಿರುವ ಕೂಲಿಕಾರರು ಗೇಣಿದಾರರಿಗೆ ಹೋಲಿಸಿದರೇ, ಈ ಸಾಲಮನ್ನಾದ ಪ್ರಯೋಜನವು ಕೇವಲ ಶೇ 15 ಜನರಷ್ಟು ಬಾಧಿತರಿಗೆ ಮಾತ್ರ ಭಾಗಶಃ ಸಹಕಾರಿಯಾಗಿದೆ.

ಆದ್ದರಿಂದ ರಾಜ್ಯದ ರೈತರು, ಕೂಲಿಕಾರರು ಮತ್ತು ಗೇಣಿದಾರರೂ, ಕಸುಬುದಾರರು ಎಲ್ಲ ರೀತಿಯ ಸಾಲಮನ್ನಾಕ್ಕಾಗಿ, ಸಮರ್ಪಕ ಬೆಳೆವಿಮೆಗಾಗಿ, ಮತ್ತು ಡಾ. ಎಂ ಎಸ್ ಸ್ವಾಮಿನಾಥನ್ ಸಲಹೆಯಂತೆ ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸೇರಿಸಿದಂತೆ ನಿಗದಿಸಲಾದ ಕನಿಷ್ಠ ಬೆಂಬಲ ಬೆಲೆಯ ಖಾತರಿಗಾಗಿನ ಈ ಹೋರಾಟವನ್ನು ಮುನ್ನಡೆಸಲು ಮತ್ತು ರಾಜ್ಯದಲ್ಲಿ ಈ ಹೋರಾಟವನ್ನು ತೀವ್ರಗೊಳಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ರೈತ ಹಾಗೂ ಕೂಲಿಕಾರರ ಮತ್ತು ದಲಿತ ಸಂಘಗಳ ಜೊತೆ ಸೇರಿ ಜಂಟಿ ಹೋರಾಟದಲ್ಲಿ ತೊಡಗಲು ಕಾರ್ಯಕ್ರಮ ರೂಪಿಸಲಿದ್ದು ಅದರ ಯಶಸ್ವಿಗೆ ಮುಂದಾಗುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದೆ.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಕಡಲ ಕಡೆ

ವರದಿ: ವಾ.ಉ.

ಉಡುಪಿ ಯಕ್ಷರಂಗದ ಕಲಾವಿದರ ಹೋರಾಟಕ್ಕೆ ಜಯ :

ಡಾ। ಶಿವರಾಮ ಕಾರಂತರಿಂದ ಪ್ರಾರಂಭವಾದ ಉಡುಪಿಯ ಯಕ್ಷಗಾನ ಕಲಾಕೇಂದ್ರ ಹಾಗೂ ಯಕ್ಷರಂಗವನ್ನು ಉಡುಪಿಯ ಯಕ್ಷ ಗುರುಕುಲ ಟ್ರಸ್ಟ್ ನಡೆಸುತ್ತಿದ್ದು, ಅಲ್ಲಿನ ಕಲಾವಿದರಿಗೆ ಕಾಲಕಾಲಕ್ಕೆ ವೇತನ ಹೆಚ್ಚಳ, ಬತ್ತೆ, ಪ್ರಾವಿಡೆಂಟ್ ಫಂಡ್ ಮತ್ತಿತರ ಸೌಲಭ್ಯಗಳನ್ನು ಕೊಡದೆ ನಿರಾಕರಿಸಿದ್ದು ಮಾತ್ರವಲ್ಲ, 10 ಮಂದಿ ಯಕ್ಷಗಾನ ಕಲಾವಿದರನ್ನು 20–30 ವರ್ಷಗಳ ಸೇವೆಯ ಬಳಿಕವೂ ಆಡಳಿತ ಮಂಡಳಿ ವಜಾ ಮಾಡಿದ್ದು, ಈ ಹಿನ್ನೆಲೆಯಲ್ಲಿ ವಜಾಗೊಂಡ ಕಲಾವಿದರು ಸಿಐಟಿಯು ಅಡಿಯಲ್ಲಿ ಸಂಘಟಿ–ತರಾಗಿ ಮಣಿಪಾಲದ ಆಡಳಿತ ಮಂಡಳಿಯೊಂದಿಗೆ ಸುಮಾರು 2 ವರ್ಷಗಳಿಂದ ಕಾನೂನು ಸಮರ ನಡೆಸಿತ್ತು.

ಯಕ್ಷಗಾನ ಕಲಾರಂಗದ ಕಲಾವಿದರಾದರೋ ಖ್ಯಾತರಾದ ಕಲಾವಿದರಾಗಿದ್ದಾರೆ. ಜಪಾನ್, ಅಮೇರಿಕಾ, ಯೂರೋಪ್ ಮೊದಲಾದೆಡೆ ಯಕ್ಷಗಾನ ಪ್ರದರ್ಶನವನ್ನು ನೀಡಿದವರು. ಯಕ್ಷಗಾನ ಕಲಾಕೇಂದ್ರಕ್ಕೆ ಕೇಂದ್ರ ನಾಟಕ ಅಕಾಡೆಮಿಯ ಅನುದಾನ ದೊರೆಯುತ್ತಿದ್ದರೂ ಕಲಾವಿದರಿಗೆ 20–30 ವರ್ಷಗಳ ಸೇವೆಯ ಬಳಿಕವೂ ಕನಿಷ್ಟ ವೇತನವನ್ನು ನೀಡಲಾಗುತ್ತಿತ್ತು. ಇವರುಗಳನ್ನು ಸಂಸ್ಥೆಯಿಂದ ವಜಾ ಮಾಡಿದ ಮೇಲೆ ಯಕ್ಷರಂಗದ ಪ್ರದರ್ಶನಗಳು ಹೆಚ್ಚು ಕಡಿಮೆ ನಿಂತು ಹೋಗಿದ್ದು, ಯಕ್ಷಗಾನ ಕಲಾಕೇಂದ್ರದ ಪ್ರದರ್ಶನಗಳೂ ಬಡವಾಗುವುದನ್ನು ಕಲಾರಸಿಕರು ಗಮನಿಸಿದ್ದಾರೆ.

ವಜಾಗೊಂಡ ಕಲಾವಿದರ ಬೇಡಿಕೆಗಳನ್ನು ಸಿಐಟಿಯು ಕೈಗೆತ್ತಿಕೊಂಡ ಮೇಲೆ ನಡೆಸಿದ ಕಾನೂನು ಸಮರದ ಪರಿಣಾಮವಾಗಿ ವಜಾಗೊಂಡ ಕಾರ್ಮಿಕರಿಗೆ ದೊರಕಬೇಕಿದ್ದ ಪ್ರಾವಿಡೆಂಟ್ ಫಂಡ್ ಮೊಬಲಗು ದೊರಕಿದೆಯಲ್ಲದೆ, ಅಂತಿಮವಾಗಿ ಜೂನ್ 21 ರಂದು ಅವರು ಅರ್ಹರಿರುವ ಗ್ರಾಚ್ಯುಟಿ ಪಾವತಿಸಲು ಯಕ್ಷ ಗುರುಕುಲ ಟ್ರಸ್ಟ್ ಒಪ್ಪಿಕೊಂಡಿರುತ್ತದೆ. ನಡೆಸಿದ ಮಾತುಕತೆಯಂತೆ ಕನಿಷ್ಟ ರೂ.27,000 ದಿಂದ ತೊಡಗಿ ರೂ.1,10,000 ವರೆಗೆ ಪ್ರತ್ಯೆಪ್ರತ್ಯೇಕ ಕಲಾವಿದರಿಗೆ ಒಟ್ಟಾಗಿ ರೂ.6,90,000 ಗ್ರಾಚ್ಯುಟಿ ನೀಡಲು ಆಡಳಿತ ಮಂಡಳಿ ಒಪ್ಪಿಕೊಂಡಿರುವುದು ಯಕ್ಷ ಕಲಾವಿದರ ಹೋರಾಟಕ್ಕೆ ಸಂದ ಜಯವಾಗಿದೆ.

ಸಿಐಟಿಯು ಪರವಾಗಿ ಉಡುಪಿ ಜಿಲ್ಲಾ ಸಮಿತಿ ಮುಖಂಡರಾದ ಬಾಲಕೃಷ್ಣ ಶೆಟ್ಟಿ ಆಡಳಿತ ಮಂಡಳಿಯೊಂದಿಗೆ ಮಾತುಕತೆ ನಡೆಸಿದ್ದರು. ವಜಾಗೊಂಡ ಕಲಾವಿದರು ಎಷ್ಟೊಂದು ಪ್ರಸಿದ್ಧರೆಂದರೆ ಅವರು ಈಗಾಗಲೇ ಕೋಟಾದ ಡಾ।ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ ಯಕ್ಷಾಂತರಂಗ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದು ಯಕ್ಷಶಿಕ್ಷಣ ನೀಡುತ್ತಿರುವುದಲ್ಲದೆ, ಶ್ರೇಷ್ಠ ಮಟ್ಟದ ಕಲಾಪ್ರದರ್ಶನವನ್ನೂ ನೀಡುತ್ತಿದ್ದಾರೆ.

ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸಲು ಉಡುಪಿ ಬೀಡಿ ಕಾರ್ಮಿಕ ಸಮ್ಮೇಳನದ ಆಗ್ರಹ

ಹೊಸದಾಗಿ ಜಾರಿಗೆ ಬರಲಿರುವ ಜಿಎಸ್‌ಟಿ ಪದ್ಧತಿಯಿಂದ ಭಾರೀ ಪ್ರಮಾಣದ ತೆರಿಗೆಯನ್ನು ಕೇಂದ್ರ ಸರಕಾರದ ಬೀಡಿ ಉದ್ಯಮದ ಮೇಲೆ ಹೊರಿಸುವ ಮೂಲಕ, ಉದ್ಯಮವನ್ನೇ ಸಾಯಿಸಲು ಹೊರಟಿದೆ ಎಂಬುದಾಗಿ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸೈಯ್ಯದ್ ಮುಜೀಬ್ ಆರೋಪಿಸಿದರು.

ಜೂನ್ 20 ರಂದು ಉಡುಪಿಯಲ್ಲಿ ನಡೆದ ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಒಕ್ಕೂಟದ ಸಮ್ಮೇಳನವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಶೇ.28ರಷ್ಟು ಜಿಎಸ್‌ಟಿಯನ್ನು ಬೀಡಿಗೆ ವಿಧಿಸಲಾಗಿದ್ದು ಇದರಿಂದ ಉದ್ಯಮ ಅವನತಿಯತ್ತ ಸಾಗುತ್ತಿದೆ. ಉದ್ಯೋಗ ಕಳೆದುಕೊಳ್ಳಲಿರುವ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗುವ ಭೀತಿ ಎದುರಿಸುತ್ತಿದ್ದಾರೆ ಎಂದರು.

ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನ ತಡೆ ಕಾಯ್ದೆ (ಕೋಟ್ಪಾ)ಯನ್ನು ಆರೋಗ್ಯದ ನೆಪದಲ್ಲಿ ಸರಕಾರ ಜಾರಿ ಮಾಡುತ್ತಿರುವುದರಿಂದ ಬಡ ಕಾರ್ಮಿಕರಿಗೆ ಬದುಕು ನೀಡಿದ ಬೀಡಿ ಕೈಗಾರಿಕೆಗಳು ಬಾಗಿಲು ಮುಚ್ಚುವ ಹಂತಕ್ಕೆ ಬಂದಿದೆ. ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗದ ವ್ಯವಸ್ಥೆ ಮಾಡಬೇಕು ಎಂದು ಮುಜೀಬ್ ಆಗ್ರಹಿಸಿದರು.

ಉಡುಪಿ ಜಿಲ್ಲಾ ಒಕ್ಕೂಟದ ಅಧ್ಯಕ್ಷ ಮಹಾಬಲ ವಡೇರಹೋಬಳಿ, ಕಾರ್ಯದರ್ಶಿ ಕೆ.ಲಕ್ಷ್ಮಣ, ಕೋಶಾಧಿಕಾರಿ ಉಮೇಶ್ ಕುಂದರ್, ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಅಧ್ಯಕ್ಷ ಪಿ.ವಿಶ್ವನಾಥ ರೈ, ಕಾರ್ಯದರ್ಶಿ ಕೆ.ಶಂಕರ್, ಕೋಶಾಧಿಕಾರಿ ಬಾಲಕೃಷ್ಣ ಶೆಟ್ಟಿ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಸಿಪಿಐ(ಎಂ) ಹಿರಿಯ ಸದಸ್ಯರಾದ ಈಶ್ವರ ಶಕ್ತಿನಗರ ನಿಧನ



ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರೂ, ಮಂಗಳೂರು ನಗರ ಸಮಿತಿಯ ಮಾಜಿ ಸದಸ್ಯರಾದ ಎ ಈಶ್ವರ ಶಕ್ತಿನಗರ (78) ರವರು 16 ಜೂನ್ 2017 ಮುಂಜಾನೆ ತಮ್ಮ ಶಕ್ತಿನಗರದಲ್ಲಿರುವ ಸ್ವಗೃಹದಲ್ಲಿ ನಿಧನ ಹೊಂದಿದರು. ತಮ್ಮ ಯೌವನಾವಸ್ಥೆಯಲ್ಲಿ ಹಂಚು ಕಾರ್ಮಿಕನಾಗಿ ದುಡಿಯುವಂತಹ ಸಂದರ್ಭದಲ್ಲಿ ಯೂನಿಯನ್ ಸದಸ್ಯರಾಗುವ ಮೂಲಕ ಹಂಚು ಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯ ಪಾತ್ರ ವಹಿಸಿದ ಈಶ್ವರರವರು ಅನೇಕ ಹೋರಾಟ, ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಇದೇ ಸಂದರ್ಭದಲ್ಲಿ ಗೇರು ಬೀಜ ಕಾರ್ಮಿಕರ ಸಂಘಟನೆಯು ಪ್ರಬಲವಾಗಿ ಬೆಳೆಯುವಲ್ಲಿ ಸಕ್ರಿಯಪಾತ್ರ ವಹಿಸಿದ್ದಾರೆ. ಕ್ರಮೇಣ ಹಂಚಿನ ಫ್ಯಾಕ್ಟ್ರಿಯ ಸಮಿತಿಯಲ್ಲಿ ಮುಖಂಡರಾಗುವ ಮೂಲಕ ಹಂಚು ಕಾರ್ಮಿಕರ ಯೂನಿಯನ್‌ನಲ್ಲಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು. 1964ರಲ್ಲಿ ಪಕ್ಷ ಇಬ್ಭಾಗವಾದಾಗ ಹಂಚು ಕಾರ್ಮಿಕರ ಮಧ್ಯೆ ಸಿಪಿಐ(ಎಂ)ಗೆ ಭಾರೀ ಪ್ರಭಾವ ಇದ್ದುದರಿಂದ ಸಿಪಿಐ(ಎಂ)ನತ್ತ ಬಂದರು. ತನ್ನ ಬಾಲ್ಯ ಜೀವನದಲ್ಲಿ ಜಪ್ಪಿನಮೊಗರು ವಿನಲ್ಲಿದ್ದ ಈಶ್ವರರವರು 1973ರಲ್ಲಿ ಶಕ್ತಿನಗರಕ್ಕೆ ಬಂದು ನೆಲೆಸಿದರು. ನಂತರ ಶಕ್ತಿನಗರದಲ್ಲಿ ಪಕ್ಷದ ಸಂಘಟನೆಗೆ ಚಾಲನೆ ನೀಡಿ ಪಕ್ಷದ ಶಾಖೆಯನ್ನು ಪ್ರಾರಂಭಿಸಿದರು. ಆ ಶಾಖೆಯ ಕಾರ್ಯದರ್ಶಿಯಾಗಿದ್ದುಕೊಂಡು ಕ್ರಮೇಣ ಪಕ್ಷದ ನಗರ ಸಮಿತಿ ಸದಸ್ಯರಾದರು. ಪ್ರದೇಶದಲ್ಲಿ ಬೀಡಿ ಸಂಘಟನೆಗೆ ಭಾರೀ ಪ್ರಭಾವವಿದ್ದು ಬೀಡಿ ಸಂಘಟನೆ ವಿಸ್ತಾರಕ್ಕೆ ಗಮನ ನೀಡಿದರು. ಪಕ್ಷದ ಪತ್ರಿಕೆ ಜನಶಕ್ತಿ ಹಾಗೂ ಸಾಹಿತ್ಯ ಮಾರಾಟದಲ್ಲೂ ಸಕ್ರಿಯ ಪಾತ್ರ ವಹಿಸಿದರು. ಇಂತಹ ಸಂಗಾತಿಯನ್ನು ಕಳೆದುಕೊಂಡಿರುವುದು ಕಮ್ಯೂನಿಸ್ಟ್ ಚಳುವಳಿಗೆ ತುಂಬಲಾರದ ನಷ್ಟವಾಗಿದೆ ಎಂದು ಸಿಪಿಐ(ಎಂ) ತಿಳಿಸಿದೆ.

ಮೃತರ ಅಂತಿಮ ದರ್ಶನದಲ್ಲಿ ಸಿಪಿಐ(ಎಂ) ಮುಖಂಡರಾದ ಕೆ. ಆರ್. ಶ್ರೀಯಾನ್, ವಸಂತ ಆಚಾರಿ, ಜೆ. ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಯಾದವ ಶೆಟ್ಟಿ, ಯು ಬಿ. ಲೋಕಯ್ಯ, ಜಯಂತ ನಾಯ್ಕ್, ರಮಣಿ ಮೂಡಬಿದ್ರಿ, ಜಯಂತಿ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು ಪಕ್ಷದ ನಗರ ಸಮಿತಿ ಮುಖಂಡರಾದ ಸುರೇಶ್ ಬಜಾಲ್, ದಯಾನಂದ ಶೆಟ್ಟಿ, ಸಂತೋಷ್ ಶಕ್ತಿನಗರ, ಸಂತೋಷ್ ಬಜಾಲ್ ಮುಂತಾದವರು ಪಾಲ್ಗೊಂಡಿದ್ದರು.

ಅವರ ನಿಧನಕ್ಕೆ ಸಿಪಿಐ(ಎಂ) ಮಂಗಳೂರು ನಗರ ಸಮಿತಿ, ಡಿ.ವೈ.ಎಫ್.ಐ ಮಂಗಳೂರು ನಗರ ಸಮಿತಿ, ಸ್ಥಳೀಯ ಶಕ್ತಿನಗರದ ಸಿಪಿಐ(ಎಂ), ಡಿ.ವೈ.ಎಫ್.ಐ, ಎಸ್.ಎಫ್.ಐ, ನಿವೇಶನರಹಿತರ ಹೋರಾಟ ಸಮಿತಿ ಹಾಗೂ ಜನಶಕ್ತಿ ಬಳಗ ಸೇರಿದಂತೆ ಅನೇಕ ಸಂಘಸಂಸ್ಥೆಗಳು ಅತೀವ ಶೋಕ ವ್ಯಕ್ತ ಪಡಿಸಿದೆ.

ಸುನಿಲ್ ಕುಮಾರ್ ಬಜಾಲ್

ಕಾರ್ಮಿಕರ ಹಿತಾಸಕ್ತಿಯನ್ನು ಬಲಿ ಕೊಡುತ್ತಿರುವ ಕೇಂದ್ರ ಸರಕಾರ – ಕೆ. ಆರ್. ಶ್ರೀಯಾನ್ ಆಕ್ರೋಶ



ಸ್ವಾತಂತ್ರ್ಯ ಪೂರ್ವದಿಂದಲೇ ಕಾರ್ಮಿಕರ ಹಕ್ಕುಗಳಿಗಾಗಿ ಧೀರೋದತ್ತ ಹೋರಾಟ ನಡೆಸಿದ ಕಾರ್ಮಿಕರು, ಸ್ವಾತಂತ್ರ್ಯ ದೊರೆತ ಬಳಿಕವೂ ಅನೇಕ ಹಕ್ಕುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಕಾರ್ಮಿಕ ವರ್ಗವು, ದೇಶದ ಸ್ವಾತಂತ್ರ್ಯ ಐಕ್ಯತೆ, ಸಾರ್ವಭೌಮತೆಯನ್ನು ರಕ್ಷಿಸುವಲ್ಲಿ ಇಂದಿಗೂ ಮುಂಚೂಣಿಯಲ್ಲಿದೆ. ಆದರೆ ಇಂದು ದೇಶದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಕಾರ್ಮಿಕರ ಕಾನೂನುಗಳನ್ನು ಮೊಟಕುಗೊಳಿಸಿ, ಕಾರ್ಮಿಕರ ಹಕ್ಕುಗಳನ್ನು ಕಸಿಯಲು ಹೊರಟಿದೆ. ಮಾತ್ರವಲ್ಲದೆ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಬಲಿ ಕೊಡಲು ಕಾತರರಾಗಿದ್ದಾ–ರೆ. ಕಾರ್ಮಿಕರ ಹಿತಾಸಕ್ತಿಗಳನ್ನು ಪಾಲಿಸಬೇಕಾದ ಕೇಂದ್ರ ಸರಕಾರವು ಬಂಡವಾಳಶಾಹಿಗಳ ಪರವಾಗಿ ತುತ್ತೂರಿ ಭಾರಿಸುತ್ತಿದೆ ಎಂದು ಜಿಲ್ಲೆಯ ಹಿರಿಯ ರೈತ ಕಾರ್ಮಿಕರ ಮುಂದಾಳು ಕೆ. ಆರ್. ಶ್ರೀಯಾನ್‌ರವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಅವರು ಸಿಐಟಿಯು ನೇತೃತ್ವದಲ್ಲಿ ನಗರದ ಬೋಳಾರದಲ್ಲಿ ಎರಡು ದಿನಗಳ ಕಾಲ ಜರುಗಿದ ದ.ಕ ಜಿಲ್ಲಾ ಮಟ್ಟದ ಸಂಘಟನಾ ಕಾರ್ಯಾಗಾರವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಪ್ರಾಸ್ತವಿಕ ಮಾತುಗಳನ್ನಾಡಿದ ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು, ದ.ಕ ಜಿಲ್ಲೆಯ ಕಾರ್ಮಿಕವರ್ಗದ ಚರಿತ್ರೆಯನ್ನು ವಿವರಿಸುತ್ತಾ ಮುಂದಿನ ದಿನಗಳಲ್ಲಿ ಬಲಿಷ್ಠವಾದ ಕಾರ್ಮಿಕರ ಚಳುವಳಿಯನ್ನು ಕಟ್ಟುವ ಮೂಲಕ ದ.ಕ ಜಿಲ್ಲೆಯನ್ನು ಕೋಮು ಸೌಹಾರ್ದತಾ ತಾಣವನ್ನಾಗಿ ನಿರ್ಮಿಸಲು ಕಂಕಣಬದ್ಧರಾಗಿ ದುಡಿಯಬೇಕೆಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ದ.ಕ ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ನಮ್ಮನ್ನಾಳುವ ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರಂತರವಾಗಿ ಕಾರ್ಮಿಕ ವಿರೋಧಿಯಾಗಿ ವರ್ತಿಸುತ್ತಿದ್ದು ಅದರ ವಿರುದ್ಧ ಕಾರ್ಮಿಕರ ಮಧ್ಯೆ ಜನಜಾಗೃತಿಯನ್ನು ಮೂಡಿಸಿ ಪ್ರಬಲ ಚಳುವಳಿಯನ್ನು ರೂಪಿಸಬೇಕಾಗಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಕಾರ್ಮಿಕವರ್ಗದ ಮುಂದಿರುವ ಸವಾಲುಗಳು ಎಂಬ ವಿಷಯದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಸೆ. 14ರ ಬೃಹತ್ ಹೋರಾಟದ ಬೇಡಿಕೆಗಳ ಕುರಿತು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಸಂಘಟನೆ–ವಿಸ್ತರಣೆ ಎಂಬ ವಿಷಯದ ಬಗ್ಗೆ ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮೀ, ಮುಂದಿನ ಕಾರ್ಯಯೋಜನೆಗಳ ಬಗ್ಗೆ ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು ತರಗತಿಗಳನ್ನು ನೀಡಿದರು.

ಸುನಿಲ್ ಕುಮಾರ್ ಬಜಾಲ್

ಹೆಸ್ಕಾಂ ಕೇಂದ್ರ ಕಚೇರಿ ಮುಂದೆ ಗುತ್ತಿಗೆ ಕಾರ್ಮಿಕರಿಂದ ಪ್ರತಿಭಟನೆ

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಆಗ್ರಹ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ವ್ಯಾಪ್ತಿಯ ಜಿಲ್ಲೆಗಳಲ್ಲಿಯ ಗ್ರಿಡ್, ಕಚೇರಿ ಹಾಗೂ ಮುಂತಾದೆಡೆ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರು ತಮ್ಮ ವಿವಿದ ಬೇಡಿಕೆಗಳ ಇಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಶನ್ ಹಾಗೂ ಸಿಐಟಿಯು ಸಂಯೋಜಿತ ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಇಂದು ನವನಗರದಲ್ಲಿರುವ ಹೆಸ್ಕಾಂ ಕೇಂದ್ರ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ನೀಡಿದರು.

ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ನೇರ ನೇಮಕಾತಿಯಲ್ಲಿ 50% ಮೀಸಲಾತಿ ನೀಡಬೇಕು, ಸುಪ್ರೀಂ ಕೋರ್ಟ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಯಾವುದೇ ಕಾರಣ ನೀಡದೇ ಕೆಲಸದಿಂದ ವಜಾಮಾಡುವುದನ್ನು ಕೈಬಿಡಬೇಕು, ಇಲಾಖಾ ಕನಿಷ್ಠ ವೇತನ ನಿಗದಿ ಮಾಡಬೇಕು, ಕಾರ್ಮಿಕ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಮಾಡದ ಗುತ್ತಿಗೆದಾರರ ಮೇಲೆ ಕ್ರಮವಹಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಇಡೇರಿಸುವಂತೆ ಪ್ರತಿಭಟನಾಕಾರರು ಈ ಸಂದರ್ಭದಲ್ಲಿ ಆಗ್ರಹಿಸಿದರು. ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ನೀಡುವ ನಿಟ್ಟಿನಲ್ಲಿ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಗುತ್ತಿಗೆದಾರರು ಮತ್ತು ಸಂಘಧ ಮುಖಂಡರೊಂದಿಗೆ ಜಂಟಿ ಸಭೆ ನಡೆಸಲು ಪ್ರತಿಭಟನಾಕಾರರು ಒತ್ತಾಯಿಸಿದರು. ವ್ಯವಸ್ಥಾಪಕ ನಿರ್ದೇಶಕರ ಅನುಪಸ್ಥಿತಿಯಲ್ಲಿ ಮನವಿ ಸ್ವೀಕರಿಸಿದ ಅಧೀಕ್ಷಕ ಅಭಿಯಂತರರಾದ ಟಿ.ಬಿ. ಮಜ್ಜಗಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಮಾತನಾಡಿ ಸಭೆ ಕರೆಯುವದಾಗಿ ಭರವಸೆ ನೀಡಿದರು.

ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟ ಜಿಲ್ಲೆಗಳಿಂದ ಗುತ್ತಿಗೆ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ, ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ ಪತ್ತಾರ, ಸಿಐಟಿಯು ರಾಜ್ಯ ಉಪಾಧ್ಯಕ್ಷ ಹರೀಶ ನಾಯಕ, ಡಿ.ವ್ಹಿ.ಬೋಳಹಟ್ಟಿ, ರಮೇಶ ಅಂಗಡಿ, ಮಂಜುನಾಥ ಕೊಪ್ಪಿಕಾರ, ಲಕ್ಷ್ಮಣ ಕೂಡ್ಲೂರ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಎಸ್.ಎಂ. ಶಿವಕುಮಾರ





ಮೆಸ್ಕಾಂ ಗುತ್ತಿಗೆ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಕೆಗಾಗಿ ಪ್ರತಿಭಟನಾ ಪ್ರದರ್ಶನ

ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ ಆಗ್ರಹಿಸಿ ಇಂಧನ ಇಲಾಖೆಯ ಎಲ್ಲಾ ವಿಭಾಗಗಳ ಗುತ್ತಿಗೆ ಕಾರ್ಮಿಕರ ಖಾಯಂಗೊಳಿಸಲು ಒತ್ತಾಯಿಸಿ, ಗುತ್ತಿಗೆ ಕಾರ್ಮಿಕರನ್ನು ಬಳಸಿ ಬಿಸಾಡುವ ನೀತಿಯನ್ನು ವಿರೋಧಿಸಿ, ಮೆಸ್ಕಾಂನಲ್ಲಿ ದುಡಿಯುತ್ತಿರುವ ಗುತ್ತಿಗೆ ಕಾರ್ಮಿಕರು 21 ಜೂನ್ 2017 ನಗರದ ಬಿಜೈಯಲ್ಲಿರುವ ಮೆಸ್ಕಾಂ ಪ್ರಧಾನ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು, ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯು ಸಾರ್ವಜನಿಕರಿಗೆ ಮೂಲ ಸೌಕರ್ಯವಾಗಿದ್ದು ವಿವಿಧ ಕೃಷಿ, ಕೈಗಾರಿಕೆ, ಸೇವೆಗಳಿಗೆ ಅಗತ್ಯವಾಗಿದೆ. ಮಾತ್ರವಲ್ಲದೆ ರಾಜ್ಯದ ಅಭಿವೃದ್ಧಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಇಂತಹ ಪ್ರಮುಖವಾದ ಇಲಾಖೆಯಲ್ಲಿ ದುಡಿಯುತ್ತಿರುವ ಗುತ್ತಿಗೆ ನೌಕರರ ಪರಿಸ್ಥಿತಿ ತೀರಾ ಹೀನಾಯವಾಗಿದೆ. ಕಳೆದ 15–20 ವರ್ಷಗಳಿಂದ ದುಡಿಯುತ್ತಿರುವ ಗುತ್ತಿಗೆ ನೌಕರರಿಗೆ ಕನಿಷ್ಠ ಕೂಲಿ ನೀಡುತ್ತಿಲ್ಲ. ಯಾವುದೇ ರೀತಿಯ ಸಾಮಾಜಿಕ ಭದ್ರತೆ ಇಲ್ಲ. ಅಪಘಾತಕ್ಕೀಡಾಗಿ ಮರಣವನ್ನಪ್ಪಿದರೆ ಪರಿಹಾರವನ್ನು ನೀಡದೆ ಅಮಾನವೀಯವಾಗಿ ನಡೆಸಲಾಗುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರಕಾರದ ಇಂತಹ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಗುತ್ತಿಗೆ ಕಾರ್ಮಿಕರು ಸಂಘಟಿತರಾಗಿ ಪ್ರಬಲ ಹೋರಾಟವನ್ನು ರೂಪಿಸಬೇಕಾಗಿದೆ. ಎಂದು ಕಾರ್ಮಿಕರಿಗೆ ಕರೆ ನೀಡಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್‌ರವರು ಮಾತನಾಡುತ್ತಾ, ದೇಶದ ಸುಪ್ರೀಂ ಕೋರ್ಟ್ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬ ತೀರ್ಪು ನೀಡಿದರೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದನ್ನು ಪಾಲಿಸದೆ ಉಲ್ಲಂಘಿಸುತ್ತಿರುವುದು ತೀರಾ ಖಂಡನೀಯ. ನೇರ ನೇಮಕಾತಿಯಲ್ಲಿ ಸೇವಾ ಹಿರಿತನದ ಆಧಾರದಲ್ಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಬೇಕಾಗಿದೆ. ಅಪಘಾತಗಳು ಸಂಭವಿಸಿದಾಗ ಕಾರ್ಮಿಕರಿಗೆ ಇಲಾಖೆಯೇ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿ ಪರಿಹಾರವನ್ನು ನೀಡಬೇಕಾಗಿದೆ ಎಂದು ಹೇಳಿದರು. ಹೋರಾಟದ ನೇತೃತ್ವವನ್ನು ಮೆಸ್ಕಾಂ ಗುತ್ತಿಗೆ ಕಾರ್ಮಿಕರ ಸಂಘದ ಮುಖಂಡರಾದ ಮಹೇಶ್, ವಿನೀತ್, ಲೋಕೇಶ್, ಅನಿಲ್ ಮುಂತಾದವರು ವಹಿಸಿದ್ದರು.

ಜನತೆಯನ್ನು ಅತಂತ್ರಕ್ಕೆ ತಳ್ಳಿದ ಒಳಚರಂಡಿ ಯೋಜನೆ ಕುಂದಾಪುರ ಪುರಸಭೆ ಕಛೇರಿ ಎದುರು ಬೃಹತ್ ಪ್ರತಿಭಟನಾ ಮೆರವಣಿಗೆ ಧರಣಿ

ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ಯೋಜನೆಯ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಕಳಪೆ ಕಾಮಗಾರಿ ವಿರುದ್ಧ, ಸಂಸ್ಕರಣಾ ಕೇಂದ್ರವನ್ನ ಜನನಿಬಿಡ ಪ್ರದೇಶದಿಂದ ದೂರದ ಸ್ಥಳಕ್ಕೆ ಸ್ಥಳಾಂತರಿಸಲು ಒತ್ತಾಯಿಸಿ, ರಸ್ತೆಗಳ ದುರಸ್ತಿ ಹಾಗೂ ಪುರಸಭೆಗೆ ಖಾಯಂ ಇಂಜಿನಿಯರ್ ನೇಮಕಕ್ಕೆ ಆಗ್ರಹಿಸಿ ಕುಂದಾಪುರ ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿ ಮತ್ತು ಸಿಪಿಐ(ಎಂ) ಕುಂದಾಪುರ ವಲಯ ಸಮಿತಿಗಳ ಜಂಟಿ ಸಹಯೋಗದ ನೇತೃತ್ವದಲ್ಲಿ ಕುಂದಾಪುರ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಬಳಿಕ ಕುಂದಾಪುರ ಪುರಸಭೆ ಕಛೇರಿ ಎದುರು ಸಾಮೂಹಿಕ ಧರಣಿ ಸತ್ಯಾಗ್ರಹ ಹೋರಾಟ ಯಶಸ್ವಿಯಾಗಿ ಜರಗಿತು.

ಕುಂದಾಪುರ ಜನತೆ ಬಹುಕಾಲದಿಂದ ಸುವ್ಯವಸ್ಥಿತವಾದ ಒಳಚರಂಡಿ ಯೋಜನೆ ಆಗಬೇಕೆಂದು ಬಯಸುತ್ತಿದ್ದು, ಅದರಂತೆ ರೂಪಾಯಿ 48 ಕೋಟಿ ಯೋಜನೆ ಜಾರಿ ಮಾಡುವುದಾಗಿ ಸರಕಾರ ಪ್ರಕಟಿಸಿದಾಗ ಕುಂದಾಪುರ ಪುರಸಭಾ ವ್ಯಾಪ್ತಿಯ ಸಮಸ್ತ ನಾಗರಿಕರು ಸ್ವಾಗತಿಸಿದರು. ಈ ಯೋಜನೆಯಿಂದ ಫಲವತ್ತಾದ ಕೃಷಿ ಭೂಮಿ ಕಳೆದುಕೊಳ್ಳುವ ಕೃಷಿಕರಿಗೆ ಗರಿಷ್ಠ ಪ್ರಮಾಣದ ಪರಿಹಾರ ನೀಡಬೇಕು ಎಂದು ಸರಕಾರವನ್ನು ಆಗ್ರಹಿಸಲಾಗಿದ್ದರೂ ಈಗ ಬಿಡುಗಡೆ ಮಾಡಿರುವ ಪರಿಹಾರ ಹಣ ಅತೀ ಕಡಿಮೆಯಾಗಿರುವುದನ್ನು ಕೃಷಿಕರು ಒಪ್ಪದೇ ಪರಿಹಾರ ಹಣವನ್ನು ಪಡೆಯದೇ ನಿರಾಕರಿಸಲಾಗಿದೆ. ಈ ಯೋಜನೆಯಲ್ಲಿ ಬರುವ ಶೇಖರಣಾ ಘಟಕ ಮತ್ತು ಸಂಸ್ಕರಣಾ ಕೇಂದ್ರವನ್ನು ಜನ ನಿಬಿಡ ವಸತಿ ಪ್ರದೇಶದಿಂದ ದೂರದ ಸ್ಥಳಕ್ಕೆ ವಿಸ್ತರಿಸಬೇಕೆಂಬುದನ್ನು ಸ್ಥಳೀಯ ನಿವಾಸಿಗಳು ಒತ್ತಾಯಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಮುಂದುವರಿಸುವ ಭರವಸೆ ನೀಡಿ, ಇದೀಗ ಕೊಟ್ಟ ಮಾತಿಗೆ ತಪ್ಪಿ ಅದೇ ಸ್ಥಳದಲ್ಲಿ ಗಡಿ ಗುರುತು ಮಾಡಲು ಮುಂದಾಗುತ್ತಿರುವುದು ಖಂಡನೀಯ. ಇದರಿಂದ ಕುಂದಾಪುರ ಪುರಸಭಾ ವ್ಯಾಪ್ತಿಯ ವಡೇರ ಹೋಬಳಿ, ಬೆಟ್ಟಗಾರ ಮತ್ತು ಮಠದಬೆಟ್ಟು ಪ್ರದೇಶ ಪರಿಸರದ ಜನರಲ್ಲಿ ಆತಂಕ ಮೂಡಿಸಿದೆ. ಅಧಿಕಾರಿಗಳ ಈ ಜನವಿರೋಧಿ ನಿಲುವನ್ನು ತೀವ್ರವಾಗಿ ವಿರೋಧಿಸಲಾಗಿದೆ.



ಕಳಪೆ ಕಾಮಗಾರಿ: ಒಳಚರಂಡಿ ಯೋಜನೆಯಡಿ ನಡೆದಿದೆ ಎನ್ನಲಾದ ಕಾಮಗಾರಿ ತೀರ ಕಳಪೆ ಗುಣಮಟ್ಟದಲ್ಲಿದೆ ಅಲ್ಲದೇ ಒಂದು ರಸ್ತೆ ಕಾಮಗಾರಿ ಆರಂಭ ಮಾಡಲು ನಡುರಸ್ತೆಯ ಕಾಂಕ್ರೀಟ್ ಕಡಿದು ಹಾಕಿ ಜನವಾಹನ ಸಂಚಾರಕ್ಕೆ ತೊಂದರೆಯಾಗುವಂತೆಯೇ ಕಾಮಗಾರಿ ಸಂಪೂರ್ಣಗೊಳಿಸದೇ ಪುನಃ ಸ್ವಲ್ಪ ಸಮಯದ ಬಳಿಕ ಮತ್ತೆ ಅಗೆಯುವುದರಿಂದ ಸಾರ್ವಜನಕರಿಗೆ ಸಂಕಟ ಅನುಭವಿಸುವಂತಾಗಿದೆ. ಹಲವರು ಪ್ರದೇಶದಲ್ಲಿ ರಸ್ತೆಯ ಬದಿಯ ಚರಂಡಿ ಕುಸಿದಿದೆ. ಇಷ್ಟೆಲ್ಲಾ ಅವಾಂತರಗಳು ನಡೆಯುತ್ತಿದ್ದರೂ ಪುರಸಭೆಯ ಆಡಳಿತ ಕಣ್ಣು ಮುಚ್ಚಿ ಕುಳಿತಿದೆ. 'ಅವಘಟಗಳಿಗೆ ಎಡೆಮಾಡಿ ಕೊಡುತ್ತಿರುವುದು' ಗಮನದಲ್ಲಿದೆಯೆಂದು ಪುರಸಭೆ ಅಧಿಕಾರಿಗಳು ಹೇಳುತ್ತಿದ್ದಾರೆಯೇ ವಿನಹಃ ಕಾರ್ಯಪ್ರವರ್ತರಾಗುತ್ತಿಲ್ಲ.

ಖಾಯಂ ಇಂಜಿನಿಯರ್ ಬೇಕು: ಕುಂದಾಪುರ ಪುರಸಭೆ ಬೆಳೆಯುತ್ತಿರುವ ನಗರವಾಗಿದೆ. ಆದರೆ ಇಲ್ಲಿನ ಪುರಸಭೆಯಲ್ಲಿ ಈ ಮೊದಲು 4 ಮಂದಿ ಖಾಯಂ ಇಂಜಿನಿಯರ್ ಕರ್ತವ್ಯದಲ್ಲಿದ್ದರು. ಇದೀಗ ಸುಮಾರು ಒಂದುವರೆ ವರ್ಷದಿಂದ ವಾರದಲ್ಲಿ ಕೇವಲ ದಿನ ಬೇರೆಡೆಯಿಂದ ಒಬ್ಬ ಎರವಲು ಇಂಜಿನಿಯರ್ ಬಂದು ಹೋಗುವುದರಿಂದ ಒಳಚರಂಡಿ ಯೋಜನೆ ಹಾಗೂ ಪುರಸಭೆ ವತಿಯಿಂದ ನಡೆಯುವ ಇತರ ಅಭಿವೃದ್ಧಿ ಕಾಮಗಾರಿಗಳ ಮೇಲುಸ್ತುವಾರಿ, ನಿರ್ವಹಣೆ ನೋಡಿಕೊಳ್ಳುವವರಿಲ್ಲದೇ ಕಳಪೆ ಕಾಮಗಾರಿ ನಡೆಯುವ ಅವಕಾಶ ಹೆಚ್ಚಿದೆ. ಅಲ್ಲದೇ ನಾಗರಿಕರಿಗೂ ವಸತಿ, ಕಟ್ಟಡ ನಿರ್ಮಾಣ ಮತ್ತಿತ್ತರ ಕಾಮಗಾರಿ ಕೆಲಸಗಳಿಗೆ ಇಂಜಿನಿಯರ್ ಇಲ್ಲದೇ ತುಂಬಾ ಅನಾನುಕೂಲವಾಗಿರುತ್ತದೆ.

ಈ ಎಲ್ಲಾ ಜ್ವಲಂತ ಸಮಸ್ಯೆಗಳನ್ನು ಸರಿಪಡಿಸಬೇಕಾದ ಪುರಸಭಾ ಆಡಳಿತ ಮಂಡಳಿ ಈ ಬಗ್ಗೆ ಮುತುವರ್ಜಿ ವಹಿಸದೇ, ಯೋಜನೆ ಕುರಿತು ವಿವರವಾದ ಮಾಹಿತಿ ಪಡೆಯದೇ ಇರುವುದು ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಪರಿಪೂರ್ಣವಾದ ವ್ಯವಸ್ಥಿತ ಒಳಚರಂಡಿ ಯೋಜನೆ ಕಾಮಗಾರಿ ಜ್ಯಾರಿ ಮಾಡುವುದು ಬೆಳೆಯುತ್ತಿರುವ ಕುಂದಾಪುರ ನಗರಕ್ಕೂ ತೀರಾ ಅಗತ್ಯವಾಗಿದೆ. ಸ್ಥಳೀಯ ನಾಗರಿಕರಿಗೆ ಆತಂಕವಾಗಿರುವ ಶೇಖರಣೆ ಬಾವಿ ಮತ್ತು ಶುದ್ಧೀಕರಣ ಘಟಕವನ್ನು ಜನವಸತಿ ಪ್ರದೇಶದಿಂದ ದೂರದ ಸ್ಥಳಕ್ಕೆ ವಿಸ್ತರಿಸಬೇಕು ಎಂದು ಆಗ್ರಹಿಸಿ ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕುಂದಾಪುರ ವಲಯ ಸಮಿತಿ ವತಿಯಿಂದ ಪುರಸಭಾ ಅಧ್ಯಕ್ಷರಾದ ವಸತಿ ಮೋಹನ್ ಸಾರಂಗ ಮತ್ತು ಮುಖ್ಯಾಧಿಕಾರಿ ಗೋಪಾಲಕೃಷ್ಣ ಶೆಟ್ಟಿಯವರಿಗೆ ಮನವಿ ಅರ್ಪಿಸಲಾಯಿತು. ಪ್ರತಿಭಟನಾ ಮೆರವಣಿಗೆ ಮತ್ತು ಧರಣಿ ಮುಷ್ಕರದ ಪುರಸಭಾ ಮಾಜಿ ಅಧ್ಯಕ್ಷರಾದ ವಿ.ನರಸಿಂಹ, ಗುಣರತ್ನ, ಎಚ್. ನರಸಿಂಹ, ಕೆ. ಶಂಕರ, ಮಹಾಬಲ ವಡೇರ ಹೋಬಳಿ, ರಾಜೇಶ್ ವಡೇರ ಹೋಬಳಿ, ಶಿವಮೆಂಡನ್, ವೆಂಕಟೇಶ ಕೋಣಿ, ಕೃಷ್ಣ ಪೂಜಾರಿ, ಲಕ್ಷಣ ಡಿ. ಬಲ್ಕಿಸ್, ಪುಂಡಲೀಕ ಮೊದಲಾದವರು ನೇತೃತ್ವ ವಹಿಸಿದ್ದರು.

ವರದಿ : ವೆಂಕಟೇಶ ಕೋಣಿ



ಪ್ರೊ. ವಿ. ಎನ್. ಲಕ್ಷ್ಮೀನಾರಾಯಣ

ಇತ್ತೀಚೆಗೆ 'ಲೆಫ್ಟ್ ವರ್ಡ್' ಡಾ.ಬಿ.ಆರ್. ಅಂಬೇಡ್ಕರ್ ಅವರ 'ಇಂಡಿಯಾ ಅಂಡ್ ಕಮ್ಯುನಿಸಂ' ಎಂಬ ಅಪೂರ್ಣ ಪುಸ್ತಕದ ಲಭ್ಯವಿರುವ ಭಾಗಗಳನ್ನು ಡಾ. ಆನಂದ್ ತೇಲತುಂಬ್ಡೆ ಅವರ ದೀರ್ಘ ಮುನ್ನುಡಿಯೊಂದಿಗೆ ಪ್ರಕಟಿಸಿದೆ. ಡಾ. ತೇಲತುಂಬ್ಡೆ ಅವರು ತಮ್ಮ ಮುನ್ನುಡಿಯಲ್ಲಿ ಕಮ್ಯುನಿಸಂ ಮತ್ತು ಮಾರ್ಕ್ಸ್‌ವಾದದ ಬಗ್ಗೆ ಅಂಬೇಡ್ಕರ್ ಅವರ ಚಿಂತನೆಗಳು, ಅಂಬೇಡ್ಕರ್ ಮತ್ತು ಕಮ್ಯುನಿಸ್ಟರ ನಡುವೆ ಬಿರುಕಿಗೆ ಚಾರಿತ್ರಿಕ ಕಾರಣಗಳು ಮತ್ತು ಈಗ ಭಾರತದ ಬಡ ಮತ್ತು ದಮನಿತ ಜನತೆಯ ವಿಮೋಚನೆಗೆ ಅಗತ್ಯವಾದ ಕಮ್ಯುನಿಸ್ಟರು ಮತ್ತು ಅಂಬೇಡ್ಕರ್ ವಾದಿಗಳ ನಡುವಿನ ಐಕ್ಯತೆಯನ್ನು ಯಾವ ನೆಲೆಯ ಮೇಲೆ ಕಟ್ಟಬಹುದು ಎಂಬ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಈ ಪುಸ್ತಕವನ್ನು ನಾನು ಓದುತ್ತಿದ್ದಾಗ ಅದರ "ಹಿಂದೂ ಸಾಮಾಜಿಕ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳು" ಎಂಬ ಅಧ್ಯಾಯ ನನ್ನನ್ನು ಬಹುವಾಗಿ ಸೆಳೆಯಿತು. ಅದರಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಅಂಬೇಡ್ಕರ್ ಅವರ ಒಳನೋಟಗಳು ವಿಶಿಷ್ಟವಾದುವು ಎಂದು ಅನಿಸಿತು. ಈ ಬಾರಿಯ ಅಂಕಣಕ್ಕೆ ಅದರ ಸಂಗ್ರಹಾನುವಾದವನ್ನೇ ಕೊಟ್ಟಿದ್ದೇನೆ.

ಹಿಂದೂ ಸಾಮಾಜಿಕ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳು


- ಡಾ. ಬಿ.ಆರ್. ಅಂಬೇಡ್ಕರ್

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿನ ವಿಶಿಷ್ಟ ಲಕ್ಷಣಗಳು ಮೂರು. ಇವುಗಳಲ್ಲಿ ಬಹು ಮುಖ್ಯವಾದುದು (ಸೂಪರ್‌ಮ್ಯಾನ್) ಮಹಾಪುರುಷನ ಆರಾಧನೆ. ಈ ದೃಷ್ಟಿಯಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆ ನೀಷೆಯ ಮಹಾವಾಣಿಯ ಅನುಷ್ಠಾನದಂತಿದೆ. (ತನ್ನ ಮಹಾಪುರುಷನ ಪರಿಕಲ್ಪನೆಯನ್ನು ಮನುಸ್ಮೃತಿಯಿಂದ ಪಡೆದದ್ದಾಗಿ ಸ್ವತಹ ನೀಷೆಯೇ ಹೇಳಿದ್ದನ್ನು ಅಂಬೇಡ್ಕರ್ ಇಲ್ಲಿ ಉದ್ಧರಿಸುತ್ತಾರೆ.) ಮನುಸ್ಮೃತಿಯನ್ನು ಅನುಪಮವಾದ ಬೌದ್ಧಿಕ ಗ್ರಂಥವೆಂದು ಹೊಗಳುವ ನೀಷೆ, ಅದನ್ನು ಕಂದಾಚಾರಗಳ ಕಂತೆಯಾದ ಬೈಬಲ್ಲಿನ ಜೊತೆ ಪ್ರಸ್ತಾಪಿಸುವುದೂ ಸಹ ಪಾಪವೆಂದು ಹೇಳುತ್ತಾನೆ. ಸಿರಿವಂತಿಕೆ, ಕ್ರೌರ್ಯ ಮತ್ತು ಅಮಾನುಷ ಅಧಿಕಾರದ ಆರಾಧಕನೆಂದು ತನ್ನ ತಾಯ್ನಾಡಿನಲ್ಲೇ, ಒಂದುರೀತಿಯ ಬಹಿಷ್ಕಾರಕ್ಕೆ ಒಳಗಾಗಿದ್ದ ನೀಷೆ ಸೃಜಿಸಿದ ಸೂಪರ್‌ಮ್ಯಾನ್ ಮತ್ತು ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಮನು ಎತ್ತಿಹಿಡಿಯುವ ಬ್ರಾಹ್ಮಣ ಈ ಇಬ್ಬರ ಮಧ್ಯೆ ಅಗಾಧ ಸಾಮ್ಯತೆ ಇದೆ. ಎಷ್ಟೋ ವಿಷಯಗಳಲ್ಲಿ ಮನುವಿನ ಬ್ರಾಹ್ಮಣ ನೀಷೆಯ ಸೂಪರ್‌ಮ್ಯಾನ್‌ಗಿಂತಲೂ ಒಂದು ಕೈ ಹೆಚ್ಚು. ಸಾಮಾನ್ಯಜನರ ಪರವಾಗಿ ಆಲೋಚನೆ ಮಾಡುವವರಿಗೆ ನೀಷೆಯ ಸೂಪರ್‌ಮ್ಯಾನ್‌ನನ್ನು ದ್ವೇಷಿಸುವುದಕ್ಕಿಂತಾ ಹೆಚ್ಚಿನ ದ್ವೇಷಕ್ಕೆ ಮನು ಪ್ರಣೀತ ಬ್ರಾಹ್ಮಣ ಪಾತ್ರನಾಗುತ್ತಾನೆ.

ಸೂಪರ್‌ಮ್ಯಾನ್ ಆರಾಧನೆ

ಸ್ವಯಂಭೂ ಆದ ಪ್ರಜಾಪತಿಯ ಮುಖದಿಂದ ಜನಿಸಿದ ಬ್ರಾಹ್ಮಣ ವೇದದ ಅನಂತ ಸಾಕಾರರೂಪ ಎನ್ನುತ್ತಾನೆ ಮನು. ಎಲ್ಲ ಸಂಪತ್ತೂ ಬ್ರಾಹ್ಮಣನಿಗೇ ಸೇರಿದ್ದು. ಮರ್ತ್ಯರು ಜೀವಿಸುವುದೇ ಬ್ರಾಹ್ಮಣನ ದಯೆಯಿಂದ. ಬ್ರಾಹ್ಮಣ ಕಾನೂನನ್ನು ಮೀರಿದವನು. ರಾಜನಿಗಿಂತ ಮೇಲಿರುವವನು. ರಾಜನಾದವನು ಬೆಳಗಾಗಿ ಎದ್ದು ವೇದಪಾರಂಗತನಾದ ಬ್ರಾಹ್ಮಣನನ್ನು ಪೂಜಿಸಿ ಅವನ ಸಲಹೆಯನ್ನು ಪಾಲಿಸಬೇಕು. ಹುಟ್ಟಿನಿಂದ, ಜ್ಞಾನದಿಂದ ಮತ್ತು ಯಜ್ಞೋಪವೀತದಿಂದಾಗಿ ಶ್ರೇಷ್ಠನಾದ ಬ್ರಾಹಣ ಎಲ್ಲ ವರ್ಗಗಳ ಒಡೆಯ. ಅವನು ಯಾವುದೇ ಅಪರಾಧವನ್ನು ಮಾಡಿದರೂ ಅವನಿಗೆ ಶಿಕ್ಷೆಇಲ್ಲ. ಅವನು ಯಾರಿಗೂ ಬಾಧ್ಯನಲ್ಲ. ಸಾಮಾನ್ಯ ಜನರ ಕಲ್ಯಾಣದ ಬಗ್ಗೆ ಅವನು ತಲೆಕೆಡಿಸಿಕೊಳ್ಳಬೇಕಿಲ್ಲ. ಅವನು ಯಾರಿಗೂ ಏನನ್ನೂ ಕೊಡಬೇಕಿಲ್ಲ. ಆದರೆ ದಾನವನ್ನು ಸ್ವೀಕರಿಸುವುದು ಅವನ ಹಕ್ಕು. ಸಾಮಾನ್ಯ ಜನರು ಇರುವುದೇ ಬ್ರಾಹ್ಮಣನ ಸೇವೆ ಮಾಡುವುದಕ್ಕಾಗಿ. ಜ್ಞಾನದ ಮೇಲೆ ಅವನೊಬ್ಬನಿಗೇ ಅಧಿಕಾರವಿರುವುದು.

ಹಿಂದೂ ಸಾಮಾಜಿಕ ವ್ಯವಸ್ಥೆಯ ಮತ್ತೊಂದು ವಿಶಿಷ್ಟತೆಯೆಂದರೆ ಅದರ ಸಂರಕ್ಷಣೆಗೆ ಯೋಜಿಸಿರುವ ತಂತ್ರ. ಈ ತಂತ್ರ ಎರಡು ರೀತಿಯದು: ತಂತ್ರ 1. ಹಿಂದೂ ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆ ರಾಜನ ಹೆಗಲಮೇಲಿದೆ. ವೈಶ್ಯ ಮತ್ತು ಶೂದ್ರರು ತಮ್ಮ ತಮ್ಮ ವರ್ಗಗಳಿಗೆ ವಹಿಸಿರುವ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ರಾಜನಿಗೆ ಇದೆ. ಅದು ಅವನ ಕರ್ತವ್ಯ. ಅವನು ಅದನ್ನು ಸರಿಯಾಗಿ ನಿರ್ವಹಿಸದಿದ್ದರೆ ರಾಜನೂ ಶಿಕ್ಷಾರ್ಹನೇ ಆಗುತ್ತಾನೆ. ಅಂಥ ಸಂದರ್ಭದಲ್ಲಿ ಬ್ರಾಹ್ಮಣ ರಾಜನ ವಿರುದ್ಧ ಬೇಕಾದರೂ ದಂಗೆ ಎದ್ದು ರಾಜನನ್ನು ಶಿಕ್ಷಿಸಬಹುದು.



ಮನುವಿನ ಪ್ರಕಾರ ರಾಜನ ವಿರುದ್ಧ ದಂಗೆಯೇಳುವ ಸ್ವಾತಂತ್ರ್ಯ ಹಿಂದೂ ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆಯಿಂದ ಲಾಭ ಪಡೆಯುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹೀಗೆ ಮೂರು ಮೇಲ್ವರ್ಗಗಳಿಗೂ ಇದೆ. ಆದರೆ ಶೂದ್ರರಿಗೆ ಮಾತ್ರ ಇಲ್ಲ. ಒಂದುವೇಳೆ ಕ್ಷತ್ರಿಯರೂ ರಾಜನೊಂದಿಗೆ ಶಾಮೀಲಾಗಿ ವ್ಯವಸ್ಥೆಯ ನಾಶಕ್ಕೆ ಮುಂದಾದರೆ? ಆಗ ವ್ಯವಸ್ಥೆಯನ್ನು ರಕ್ಷಿಸುವ ಹೊಣೆಯನ್ನು ಮನು ಬ್ರಾಹ್ಮಣನಿಗೆ ಕೊಡುತ್ತಾನೆ. ಬ್ರಾಹ್ಮಣ ತನಗೆ ಅನ್ಯಾಯವಾದರೆ ರಾಜನಿಗೆ ದೂರು ಕೊಡಬೇಕಿಲ್ಲ. ತಾನೇ ನೇರವಾಗಿ ಅನ್ಯಾಯ ಮಾಡಿದವರನ್ನು ಶಿಕ್ಷಿಸಬಹುದು. ಈ ಕಾರಣಕ್ಕಾಗಿ ಬ್ರಾಹ್ಮಣ ಆಯುಧವನ್ನು ಹೊಂದಿರಬಹುದು.

ತಂತ್ರ 2. ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸಲು ಬಳಸುವ ಎರಡನೆಯ ತಂತ್ರ ಅದ್ವಿತೀಯವಾದುದು. ಬಹುಶಃ ಇದೇ ಹಿಂದೂ ಸಾಮಾಜಿಕ ವ್ಯವಸ್ಥೆಯ ನಿಜವಾದ ವಿಶಿಷ್ಟತೆ.

ಸಾಮಾಜಿಕ ವ್ಯವಸ್ಥೆಯನ್ನು ಸಶಸ್ತ್ರ ದಂಗೆಯಿಂದ ರಕ್ಷಿಸಿಕೊಳ್ಳಲು ಆಳುವವರ ವಿರುದ್ಧ ಏಳುವ ದಂಗೆಯ ಮೂರು ಅಂಶಗಳನ್ನು ಗಮನಿಸಬೇಕಾಗುತ್ತದೆ. ಒಂದು: ಅನ್ಯಾಯದ ಭಾವನೆ. ಎರಡು: ಅನ್ಯಾಯವಾಗಿದೆಯೆಂದು ಗ್ರಹಿಸುವ ಸಾಮರ್ಥ್ಯ. ಮೂರು: ಶಸ್ತ್ರಾಸ್ತ್ರಗಳ ಲಭ್ಯತೆ.

ದಂಗೆಯನ್ನು ನಿಭಾಯಿಸುವುದರಲ್ಲಿ ಎರಡು ವಿಧಾನಗಳಿವೆ. ಮೊದಲನೆಯ ವಿಧಾನ ದಂಗೆಯೇ ಏಳದಂತೆ ನೋಡಿಕೊಳ್ಳುವುದು. ಎರಡನೆಯ ವಿಧಾನ ದಂಗೆಯೆದ್ದಮೇಲೆ ಹತ್ತಿಕ್ಕುವುದು.

ದಂಗೆ ಏಳದಂತೆ ನೋಡಿಕೊಳ್ಳವ ಸಾಧ್ಯತೆ ಇದೆಯ, ಅಥವಾ ಹತ್ತಿಕ್ಕುವುದನ್ನುಳಿದು ಅನ್ಯ ಮಾರ್ಗವಿಲ್ಲವೆ ಎಂಬುದು ದಂಗೆ ಏಳಲು ಕಾರಣವಾದ ಮೂರು ಅಂಶಗಳನ್ನು ನಿಯಂತ್ರಿಸುವ ನಿಯಮ ಯಾವುದು ಎಂಬ ಮೂರನೆಯ ಅಂಶವನ್ನು ಅವಲಂಬಿಸಿದೆ.

ಸಾಮಾಜಿಕ ವ್ಯವಸ್ಥೆಯು ಜನರಿಗೆ ದಂಗೆ ಏಳುವ ಅವಕಾಶವನ್ನು ಕೊಡದಿದ್ದಾಗ, ಶಿಕ್ಷಣದ ಹಕ್ಕನ್ನು ಕೊಡದಿದ್ದಾಗ, ಶಸ್ತ್ರಾಸ್ತ್ರಗಳನ್ನು ಬಳಸುವ ಹಕ್ಕನ್ನು ಕೊಡದಿದ್ದಾಗ ವ್ಯವಸ್ಥೆಯ ವಿರುದ್ಧ ಜನರು ದಂಗೆಯೇಳದಂತೆ ನೋಡಿಕೊಳ್ಳುವುದು ಸಾಧ್ಯವಾಗುತ್ತದೆ.

ಸಾಮಾಜಿಕ ವ್ಯವಸ್ಥೆಯು ಶಿಕ್ಷಣದ ಹಕ್ಕನ್ನು ಕೊಟ್ಟಿದ್ದಾಗ, ಶಸ್ತ್ರಾಸ್ತ್ರಗಳ ಬಳಕೆಗೆ ಅನುಮತಿ ಕೊಟ್ಟಿದ್ದಾಗ, ಅನ್ಯಾಯಕ್ಕೊಳಗಾದವರು ದಂಗೆಯೆದ್ದರೆ ಅದನ್ನು ತಡೆಯಲಾಗುವುದಿಲ್ಲ. ಆಗ ಸಾಮಾಜಿಕ ವ್ಯವಸ್ಥೆಯನ್ನು ಉಳಿಸುವ ಏಕೈಕ ಮಾರ್ಗ ಹಿಂಸೆ-ಕ್ರೌರ್ಯಗಳನ್ನು ಬಳಸಿ ದಂಗೆಯನ್ನು ಹತ್ತಿಕ್ಕುವುದು.

ದಂಗೆಯೇಳದಂತೆ...

ಹಿಂದೂ ಸಾಮಾಜಿಕ ವ್ಯವಸ್ಥೆಯು ಮೊದಲನೆಯ ವಿಧಾನವನ್ನು ಅಳವಡಿಸಿಕೊಂಡಿದೆ. ಕೆಳವರ್ಗಗಳ ಸಾಮಾಜಿಕ ಅಂತಸ್ತನ್ನು ಮುಂಬರುವ ಪೀಳಿಗೆಗಳಿಗೂ ಅನ್ವಯವಾಗುವಂತೆ ಸ್ಥಗಿತಗೊಳಿಸಿಬಿಟ್ಟಿದೆ. ಅವರ ಆರ್ಥಿಕ ಅಂತಸ್ತನ್ನೂ ಸಹ ಸ್ಥಗಿತಗೊಳಿಸಿದೆ. ಸಾಮಾಜಿಕ ಅಂತಸ್ತು ಮತ್ತು ಆರ್ಥಿಕ ಅಂತಸ್ತುಗಳ ನಡುವೆ ವ್ಯತ್ಯಾಸವೇ ಇಲ್ಲವಾದ್ದರಿಂದ ಅತೃಪ್ತಿ ಬೆಳೆಯುವ ಸಾಧ್ಯತೆಯೇ ಇಲ್ಲ.

ಕೆಳವರ್ಗಗಳಿಗೆ ಶಿಕ್ಷಣದ ಹಕ್ಕನ್ನು ಹಿಂದೂ ಸಾಮಾಜಿಕ ವ್ಯವಸ್ಥೆ ನಿರಾಕರಿಸಿದೆ. ಇದರ ಪರಿಣಾಮವಾಗಿ ಯಾರೊಬ್ಬರಿಗೂ ತಮ್ಮ ದುಸ್ಥಿತಿಯೇ ಅತೃಪ್ತಿಗೆ ಮೂಲವಾಗಬಹುದೆಂಬ ಅರಿವೇ ಇಲ್ಲ. ಅರಿವಿದ್ದರೂ ಅದು ತಮ್ಮ ದುಸ್ಥಿತಿಗೆ ಯಾರೂ ಕಾರಣರಲ್ಲ, ವಿಧಿ, ಹಣೆಬರಹದ ಫಲ ಎಂಬ ಅರಿವು ಮಾತ್ರ.

ಅತೃಪ್ತಿ ಇದೆ ಎಂದಿಟ್ಟುಕೊಳ್ಳೋಣ. ಅದರ ಬಗ್ಗೆ ಅರಿವಿದೆ ಎಂದೂ ಇಟ್ಟುಕೊಳ್ಳೋಣ. ಆಗಲೂ ಸಹ ಹಿಂದೂ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಕೆಳವರ್ಗಗಳ ದಂಗೆ ಸಾಧ್ಯವಿಲ್ಲ. ಏಕೆಂದರೆ ವ್ಯವಸ್ಥೆಯು ಜನಸಮುದಾಯಗಳಿಗೆ ಶಸ್ತ್ರಾಸ್ತ್ರಗಳನ್ನು ಬಳಸುವ ಹಕ್ಕನ್ನು ನಿರಾಕರಿಸುತ್ತದೆ.

ಮುಸ್ಲಿಮರು ಅಥವಾ ನಾಜ಼ಿಗಳ ಸಾಮಾಜಿಕ ವ್ಯವಸ್ಥೆಗಳು ಇದಕ್ಕೆ ತದ್ವಿರುದ್ಧವಾದವುಗಳು. ಅವರು ಎಲ್ಲರಿಗೂ ಸಮಾನ ಅವಕಾಶಗಳನ್ನು ಕೊಡುತ್ತಾರೆ. ಜ್ಞಾನ ಪಡೆಯುವ ಹಕ್ಕನ್ನು ಕೊಡುತ್ತಾರೆ. ಶಸ್ತ್ರಾಸ್ತ್ರಗಳನ್ನು ಹೊಂದಿರುವ ಹಕ್ಕನ್ನು ಕೊಡುತ್ತಾರೆ. ಜನರು ದಂಗೆಯೆದ್ದರೆ ಅದನ್ನು ಹಿಂಸೆ-ಕ್ರೌರ್ಯಗಳಿಂದ ಹತ್ತಿಕ್ಕುವ ದ್ವೇಷ-ಅಸಮ್ಮತಿಯ ಹೊಣೆಯನ್ನೂ ಹೊಂದಿರುತ್ತಾರೆ.

ಅವಕಾಶಗಳ ಸ್ವಾತಂತ್ರ್ಯವನ್ನು ನಿರಾಕರಿಸುವುದು, ಜ್ಞಾನಸಂಪಾದನೆಯ ಸ್ವಾತಂತ್ರ್ಯವನ್ನು ನಿರಾಕರಿಸುವುದು, ಶಸ್ತ್ರಾಸ್ತ್ರಗಳ ಹಕ್ಕನ್ನು ನಿರಾಕರಿಸುವುದು ಅತ್ಯಂತ ಕ್ರೂರವಾದ ಅನ್ಯಾಯ. ಇದರಿಂದ ಫಲಿತವಾಗುವ ಸತ್ಯ: ಮನು ಮನುಷ್ಯರನ್ನು ವಿರೂಪಗೊಳಿಸುತ್ತಾನೆ, ನಿರ್ವೀರ್ಯರನ್ನಾಗಿ ಮಾಡುತ್ತಾನೆ. ಹಿಂದೂ ಸಾಮಾಜಿಕ ವ್ಯವಸ್ಥೆಯು ಹೀಗೆ ಮಾಡಲು ಹೇಸುವುದಿಲ್ಲ. ಇದರಿಂದ ಸಿಕ್ಕಿರುವ ಲಾಭಗಳು ಎರಡು. ಮೊದಲನೆಯದು: ಹೇಯ ರೀತಿಯದಾದರೂ ಅತ್ಯಂತ ಪರಿಣಾಮಕಾರಿಯಾಗಿ ವ್ಯವಸ್ಥೆಯನ್ನು ಸಂರಕ್ಷಿಸುವ ವಿಧಾನವನ್ನು ಅದು ಕಂಡುಕೊಂಡಿರುವುದು. 2. ಅತ್ಯಂತ ಅಮಾನುಷ ರೀತಿಯಲ್ಲಿ ಮನುಷ್ಯರನ್ನು ನಿರ್ವೀರ್ಯಗೊಳಿಸುವ ವಿಧಾನವನ್ನು ಅಳವಡಿಸಿಕೊಂಡರೂ ಸಹ ಹಿಂದೂಗಳು ಅತ್ಯಂತ ಮಾನವೀಯ ದೃಷ್ಟಿಯ ಜನರೆಂಬ ಗೌರವವನ್ನು ತಂದುಕೊಟ್ಟಿರುವುದು.

ನಾಜ಼ಿಗಳು ಹಿಂದುಗಳಿಂದ ಕಲಿಯುವುದು ಬಹಳಷ್ಟಿತ್ತು. ಜನಸಮುದಾಯವನ್ನು ಹತ್ತಿಕ್ಕಲು ಹಿಂದೂಗಳು ರೂಪಿಸಿರುವ ತಂತ್ರವನ್ನು ಅವರೇನಾದರೂ ಅಳವಡಿಸಿಕೊಂಡಿದ್ದಿದ್ದರೆ ಅವರು ಹಿಂಸೆ-ಕ್ರೌರ್ಯಗಳನ್ನು ಬಳಸದೆಯೂ ಯಹೂದಿಗಳನ್ನು ತುಳಿದು, ತಾವು ಮಾನವೀಯ ಒಡೆಯರೆಂದು ಜಗತ್ತಿಗೆ ತೋರಿಸಿಕೊಳ್ಳಬಹುದಿತ್ತು.

ಸಾಮಾಜಿಕ ದಿವ್ಯತೆ ಮತ್ತು ಪಾವಿತ್ರತೆ

ಹಿಂದೂ ಸಾಮಾಜಿಕ ವ್ಯವಸ್ಥೆಯ ಮೂರನೆಯ ವಿಶಿಷ್ಟ ಲಕ್ಷಣ: ಸಾಮಾಜಿಕ ದಿವ್ಯತೆ ಮತ್ತು ಪಾವಿತ್ರತೆ. ಭಗವದ್ಗೀತೆಯಲ್ಲಿ ಕೃಷ್ಣನೇ ಹೇಳುವಂತೆ ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ದೇವರೇ ಸೃಷ್ಟಿಸಿದ್ದಾನೆ. ಆದ್ದರಿಂದ ಅದು ಪವಿತ್ರವಾದದ್ದು. ಹೀಗಾಗಿ ಅದನ್ನು ಯಾರೂ ಬದಲಿಸುವಂತಿಲ್ಲ. ಸುಧಾರಿಸುವಂತಿಲ್ಲ. ಟೀಕಿಸುವಂತಿಲ್ಲ.

ಇದು ಕೇವಲ ವಿಶಿಷ್ಟ ಮಾತ್ರವಲ್ಲ ಅಸಾಧಾರಣವಾದ ವ್ಯವಸ್ಥೆ. ಏಕೆಂದರೆ ಪ್ರಪಂಚದ ಇತರ ಭಾಗದ ಜನರು ಸಹ ಪಾವಿತ್ರತೆಯನ್ನು ನಾನಾ ರೀತಿಗಳಲ್ಲಿ ತಮಗೆ ಅಂಟಿಸಿಕೊಂಡವರಾಗಿದ್ದಾರೆ. ಕಲ್ಲು, ಮಣ್ಣು, ಪ್ರಾಣಿ, ಹಕ್ಕಿ, ಬೆಟ್ಟ ಗುಡ್ಡ, ಮರ ಗಿಡ ಎಲ್ಲವನ್ನೂ ಪವಿತ್ರವೆಂದು ಪರಿಗಣಿಸಿದವರಿದ್ದಾರೆ.

ಪುಟ 10 ಕ್ಕೆ



ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧೆ ಯಾಕಾಗಿ?

ಒಬ್ಬ ದಲಿತ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಂಕೇತಿಕ ಕ್ರಮದಿಂದ ಹಿಂದೂತ್ವ ಮೇಲ್ಜಾತಿ ಅಜೆಂಡಾ ಕುರಿತು ದಲಿತ ಸಮುದಾಯದಲ್ಲಿ ಆಳವಾಗಿ ಬೇರೂರಿರುವ ಅನುಮಾನ ಮತ್ತು ಆಕ್ರೋಶವನ್ನು ಕಡಿಮೆ ಮಾಡಲಾಗುವುದಿಲ್ಲ.

ಅಲ್ಲದೆ ಆರ್‌ಎಸ್‌ಎಸ್ ನಿರ್ದೇಶನದಂತೆ ನಡೆಯುವ ಒಂದು ಸರಕಾರ ಇರುವಾಗ, ಈಗ 2017ರಲ್ಲಿ ರಾಷ್ಟ್ರಪತಿ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಬಿಜೆಪಿ–ಎನ್‌ಡಿಎ ಅಭ್ಯರ್ಥಿಯನ್ನು ವಿರೋಧಿಸುವುದು ಎಲ್ಲಕ್ಕಿಂತ ಅಗತ್ಯವಾಗಿದೆ.



ಪ್ರಕಾಶ್ ಕಾರಟ್


ಬಿಜೆಪಿ ಮೈತ್ರಿಕೂಟವು ರಾಷ್ಟ್ರಪತಿ ಅಭ್ಯರ್ಥಿಯಾಗಿ ರಾಮನಾಥ ಕೋವಿಂದ್ ಅವರನ್ನು ನೇಮಿಸಿರುವುದು, ಇದೇ ಮೊದಲ ಬಾರಿಗೆ ರಾಷ್ಟ್ರಪತಿ ಭವನದಲ್ಲಿ ತನ್ನ ಮನುಷ್ಯನನ್ನು ಪ್ರತಿಷ್ಠಾಪಿಸುವ ಅವಕಾಶ ಕೈತಪ್ಪಿ ಹೋಗುವುದನ್ನು ಆರ್‌ಎಸ್‌ಎಸ್ ಬಿಟ್ಟುಕೊಡಲಾರದು ಎಂಬ ನಿರೀಕ್ಷೆಯನ್ನು ದೃಢಪಡಿಸಿದೆ.

ಕೋವಿಂದ್ ಅವರ ಆಯ್ಕೆಯು ದಲಿತರು ಈ ನೆಲದ ಅತ್ಯುನ್ನತ ಸ್ಥಾನವನ್ನು ಅಲಂಕರಿಸುವ ಕುರಿತ ಬಿಜೆಪಿಯ ಕಾಳಜಿಯ ದ್ಯೋತಕವಾಗಿದೆ ಎಂದು ಬಿಂಬಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ದಲಿತರ ನಡುವೆ ವಿಶ್ವಾಸಾರ್ಹತೆಯನ್ನು ಮರಳಿ ಗಳಿಸುವ ಈ ಯತ್ನದ ಹಿಂದೆ ಬಿಜೆಪಿ ಆಯ್ಕೆ ಮಾಡಿರುವ ವ್ಯಕ್ತಿಯು ಆರ್‌ಎಸ್‌ಎಸ್‌ನ ಹಿಂಬಾಲಕ ಎನ್ನುವ ವಾಸ್ತವತೆಯಿದೆ.

ಒಬ್ಬ ದಲಿತ ವ್ಯಕ್ತಿಯನ್ನು ರಾಷ್ಟ್ರಪತಿ ಹುದ್ದೆಗೆ ಪ್ರಸ್ತಾವಿಸುವ ಮೂಲಕ ಕಳೆದ ಎರಡು ವರ್ಷಗಳಿಂದ ಕ್ಷತಿಗೊಂಡಿರುವ ತನ್ನ ದಲಿತ–ಪರ ಇಮೇಜನ್ನು ಪುನಃ ಕಟ್ಟಿಕೊಳ್ಳಬಹುದೆಂಬುದು ಬಿಜೆಪಿಯು ಆಶಯವಾಗಿದೆ. ಸಂಘ ಪರಿವಾರ ನಿರಂತರವಾಗಿ ದಲಿತರ ಮೇಲೆ ದಾಳಿಗಳನ್ನು ನಡೆಸುತ್ತಿದೆ. ರೋಹಿತ್ ವೇಮುಲ ಸಾವು, ಉನಾದಲ್ಲಿ ದಲಿತ ಯುವಕರ ಮೇಲಿನ ಹಲ್ಲೆ, ಸಹರಾನ್‌ಪುರದಲ್ಲಿ ದಲಿತರ ಮೇಲಿನ ದೌರ್ಜನ್ಯ ಮತ್ತು ಹಸುಗಳ ವ್ಯಾಪಾರ ಮತ್ತು ಚರ್ಮೋದ್ಯಮದಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ದಲಿತ ಸಮುದಾಯದವರನ್ನು ದಾಳಿಯ ಗುರಿ ಮಾಡುವುದು ಇನ್ನೂ ಮುಂದುವರಿದಿದೆ. ಒಬ್ಬ ದಲಿತ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಂಕೇತಿಕ ಕ್ರಮದಿಂದ ಹಿಂದೂತ್ವ ಮೇಲ್ಜಾತಿ ಅಜೆಂಡಾ ಕುರಿತು ದಲಿತ ಸಮುದಾಯದಲ್ಲಿ ಆಳವಾಗಿ ಬೇರೂರಿರುವ ಅನುಮಾನ ಮತ್ತು ಆಕ್ರೋಶವನ್ನು ಕಡಿಮೆ ಮಾಡಲಾಗುವುದಿಲ್ಲ.

ರಾಮನಾಥ ಕೋವಿಂದ್ ಅವರ ವೈಯಕ್ತಿಕ ಅಥವಾ ಸಾರ್ವಜನಿಕ ಜೀವನದ ಗುಣಗಳು ಇಲ್ಲಿನ ಪ್ರಶ್ನೆಯಲ್ಲ. ಬಿಜೆಪಿಯ ರಾಷ್ಟ್ರಪತಿ ಅಭ್ಯರ್ಥಿಯಲ್ಲಿ ವಿಶೇಷವೇನಾದರೂ ಇದ್ದಲ್ಲಿ ಅದು ಅವರು ಆರ್‌ಎಸ್‌ಎಸ್ ದೃಷ್ಟಿಕೋನ ಮತ್ತು ಮೌಲ್ಯಗಳಿಗೆ ದೃಢವಾಗಿ ಅಂಟಿಕೊಂಡಿರುವುದು. "ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಭಾರತಕ್ಕೆ ಹೊರಗಿನದು" ಎಂಬ ಆರ್‌ಎಸ್‌ಎಸ್ ಅಭಿಪ್ರಾಯವೇ ಕೋವಿಂದ್ ಅಭಿಪ್ರಾಯವಾಗಿದೆ. ಕ್ರೈಸ್ತರು ಅಥವಾ ಮುಸ್ಲಿಮರನ್ನು ದಲಿತ ವರ್ಗಕ್ಕೆ ಸೇರಿಸುವುದಕ್ಕೆ ವಿರೋಧ ವ್ಯಕ್ತಪಡಿಸುವ ಸಂದರ್ಭದಲ್ಲಿ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

1992ರ ಅಧ್ಯಕ್ಷೀಯ ಚುನಾವಣೆ ನಂತರದಿಂದ (ಅಂದರೆ ಬಿಜೆಪಿಯು ಸಂಸತ್ತಿನಲ್ಲಿ ಪ್ರಮುಖ ಪ್ರತಿಪಕ್ಷವಾಗಿ ಹೊರಹೊಮ್ಮಿದಾಗಿನಿಂದ) ಸಿಪಿಐ (ಎಂ) ಒಂದು ನಿಲವನ್ನು ತಳೆದಿದೆ. ಬಿಜೆಪಿ–ಆರ್‌ಎಸ್‌ಎಸ್ ಕೂಟಕ್ಕೆ ಸೇರಿದ ವ್ಯಕ್ತಿ ಅಥವಾ ಅವುಗಳಿಂದ ಪ್ರಭಾವಿತವಾಗುವ ಸಾಧ್ಯತೆಯಿರುವ ವ್ಯಕ್ತಿ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಬಾರದು ಎನ್ನುವುದೇ ಆ ನಿಲವು. ಅದರಾಚೆ ನಡೆದ ಎಲ್ಲಾ ರಾಷ್ಟ್ರಪತಿ ಚುನಾವಣೆಗಳಲ್ಲಿ ಪಕ್ಷ ಈ ನಿಲವಿಗೆ ದೃಢವಾಗಿ ಬದ್ಧವಾಗಿದೆ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಆರ್‌ಎಸ್‌ಎಸ್ ನಿರ್ದೇಶನದಂತೆ ನಡೆಯುವ ಒಂದು ಸರಕಾರ ಇರುವಾಗ, ಈಗ 2017ರಲ್ಲಿ ರಾಷ್ಟ್ರಪತಿ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಬಿಜೆಪಿ–ಎನ್‌ಡಿಎ ಅಭ್ಯರ್ಥಿಯನ್ನು ವಿರೋಧಿಸುವುದು ಎಲ್ಲಕ್ಕಿಂತ ಅಗತ್ಯವಾಗಿದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಹೋರಾಡಲು ಪ್ರತಿಪಕ್ಷಗಳು ಒಬ್ಬ ಜಂಟಿ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕಾಗಿದೆ. ರಾಷ್ಟ್ರಪತಿಯಾದವರು ಗಣ–ರಾಜ್ಯ ಮತ್ತು ಸಂವಿಧಾನದ ಸಂರಕ್ಷಕರಾಗಿರಬೇಕು ಎನ್ನುವುದನ್ನು ಈ ಸ್ಪರ್ಧೆ ಸಾರುತ್ತದೆ. ಬಿಜೆಪಿ–ಆರ್‌ಎಸ್‌ಎಸ್ ಈ ಎರಡನ್ನೂ ನಿರಾಕರಿಸ ಬಯಸುತ್ತದೆ.

ಪ್ರಕಾಶ ಕಾರಟ್ ಅವರು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಗೆ ಈ ಸಂಪಾದಕೀಯವನ್ನು ಬರೆದ ನಂತರ ಜೂನ್ 22 ರಂದು ಸಭೆ ಸೇರಿದ ಕಾಂಗ್ರೆಸ್, ಎಡಪಕ್ಷಗಳು, ಆರ್‌ಎಲ್‌ಡಿ, ಸಮಾಜವಾದಿ ಪಕ್ಷ, ಬಿಎಸ್‌ಪಿ, ಜೆಡಿ–ಎಸ್ ಮತ್ತಿತರ ಒಟ್ಟು 17 ಪ್ರತಿಪಕ್ಷಗಳ ಪ್ರತಿನಿಧಿಗಳು ಈ ಹಿಂದೆ ಲೋಕಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಮತ್ತು ಐದು ಬಾರಿ ಲೋಕಸಭೆಗೆ ಆರಿಸಿ ಬಂದಿರುವ ಮೀರಾ ಕುಮಾರ್ ಅವರನ್ನು ತಮ್ಮ ಜಂಟಿ ಅಭ್ಯರ್ಥಿಯಾಗಿ ಆರಿಸಿದ್ದಾರೆ.



ಡಾರ್ಜಿಲಿಂಗ್: ತ್ರಿಪಕ್ಷೀಯ ಮಾತುಕತೆಯೇ ಪರಿಹಾರ ಮಾರ್ಗ

ಟಿಎಂಸಿ ಮತ್ತು ಬಿಜೆಪಿ ಈ ಎರಡೂ ಪಕ್ಷಗಳ ಸಮಯಸಾಧಕ ರಾಜಕಾರಣವು ಡಾರ್ಜಿಲಿಂಗ್ ಗುಡ್ಡಗಾಡು ಪ್ರದೇಶದಲ್ಲಿ ಪ್ರತ್ಯೇಕತಾವಾದ ಜೀವಂತವಾಗಿರಲು ಕೊಡುಗೆ ನೀಡಿದೆ.

ರಾಜ್ಯ ಸರಕಾರ ದಬ್ಬಾಳಿಕೆಯಿಂದ ಚಳವಳಿಯನ್ನು ದಮನಿಸಲು ಪ್ರಯತ್ನಿಸುತ್ತಿದೆ. ಕೇಂದ್ರ ಪೋಲೀಸ್ ಪಡೆಗಳು ಮತ್ತು ಸೈನ್ಯವನ್ನು ಕೂಡ ನಿಯೋಜಿಸಲಾಗಿದೆ. ಆದರೆ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಜಿಜೆಎಂ ನಡುವೆ ತ್ರಿಪಕ್ಷೀಯ ಸಂಧಾನ ಮಾತುಕತೆಯ ಹೊರತಾಗಿ ಬೇರಾವುದರಿಂದಲೂ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಗುಡ್ಡಗಾಡು ಪ್ರದೇಶಗಳಲ್ಲಿ ಹಿಂಸಾಚಾರ ವ್ಯಾಪಕವಾಗಿದ್ದು ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿದೆ. ಗೂರ್ಖಾ ಜನಮುಕ್ತಿ ಮೋರ್ಚಾ (ಜಿಜೆಎಂ) ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರದ ಕರೆಯಿಂದಾಗಿ ಎಲ್ಲಾ ಚಟುವಟಿಕೆಗಳು ಸ್ತಬ್ಧಗೊಂಡಿವೆ. ಪೊಲೀಸ್ ಗೋಲಿಬಾರಿನಲ್ಲಿ ಮೂವರು ಜಿಜೆಎಂ ಬೆಂಬಲಿಗರು ಮೃತಪಟ್ಟಿದ್ದು ಹಿಂಸಾಚಾರದಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಕೂಡ ಮೃತಪಟ್ಟಿದ್ದಾರೆ.

ಪ್ರತ್ಯೇಕ ಗೂರ್ಖಾಲ್ಯಾಂಡ್ ರಾಜ್ಯ ಬೇಡಿಕೆಯನ್ನು ಜಿಜೆಎಂ ಮತ್ತೆ ಎತ್ತಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಬಂಗಾಳಿ ಭಾಷೆಯನ್ನು ಕಡ್ಡಾಯವಾಗಿ ಕಲಿಸಲಾಗುವುದು ಎಂಬ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಪ್ರಚೋದನಕಾರಿ ಹೇಳಿಕೆಯಿಂದಾಗಿ ಚಳವಳಿಯ ಕಿಡಿ ಹೊತ್ತಿಕೊಂಡಿದೆ. ಮುಖ್ಯಮಂತ್ರಿ ಹೇಳಿಕೆಯು, ನೇಪಾಳಿ ಭಾಷೆ ಶಿಕ್ಷಣ ಮಾಧ್ಯಮವಾಗಿರುವ ಗುಡ್ಡಗಾಡು ಪ್ರದೇಶದ ಜನರಲ್ಲಿ ಸಹಜವಾಗಿಯೇ ಆಕ್ರೋಶಕ್ಕೆ ಕಾರಣವಾಗಿದೆ. ಸರಕಾರದ ಆದೇಶ ಡಾರ್ಜಿಲಿಂಗ್‌ಗೆ ಅನ್ವಯವಾಗುವುದಿಲ್ಲ ಎಂದು ಮಮತಾ ಆನಂತರ ಸ್ಪಷ್ಟನೆ ನೀಡಿದರೂ ಅದಾಗಲೇ ಹಾನಿ ಆಗಿ ಹೋಗಿತ್ತು.

ವಾಸ್ತವವಾಗಿ ಮಮತಾ ಬ್ಯಾನರ್ಜಿ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) 2011ರ ವಿಧಾನಸಭೆ ಚುನಾವಣೆ ವೇಳೆ ಎಡರಂಗದ ವಿರುದ್ಧ ಹೋರಾಡಲಿಕ್ಕಾಗಿ ಜಿಜೆಎಂಗೆ ಉತ್ತೇಜನ ನೀಡಿತ್ತು ಹಾಗೂ ಅದರೊಂದಿಗೆ ಕೈಜೋಡಿಸಿತ್ತು. ಅದಾದ ನಂತರ, ಟಿಎಂಸಿ ಸರಕಾರ ಕೇಂದ್ರದೊಂದಿಗೆ ಸೇರಿ ಜಿಜೆಎಂ ಜೊತೆ ಒಪ್ಪಂದವೊಂದಕ್ಕೆ ಸಹಿಹಾಕಿತ್ತು. 1988ರಲ್ಲಿ ರಚಿತವಾದ ಡಾರ್ಜಿಲಿಂಗ್ ಗೂರ್ಖಾ ಗುಡ್ಡಗಾಡು ಮಂಡಳಿಯ ಬದಲಿಗೆ ಗೂರ್ಖಾಲ್ಯಾಂಡ್ ಪ್ರಾದೇಶಿಕ ಆಡಳಿತ (ಗೂರ್ಖಾಲ್ಯಾಂಡ್ ಟೆರಿಟೋರಿಯಲ್ ಅಡ್ಮಿನಿಸ್ಟ್ರೇಶನ್–ಜಿಟಿಎ) ಸ್ಥಾಪಿಸುವುದು ಈ ಒಪ್ಪಂದದ ಉದ್ದೇಶವಾಗಿತ್ತು.

ಆದರೆ, ಟಿಎಂಸಿ ಸರಕಾರ ಅನೇಕ ವಿಚಾರಗಳಲ್ಲಿ ಜಿಟಿಎ ಜೊತೆ ಸಂಘರ್ಷಕ್ಕಿಳಿಯಿತು. ಜಿಜೆಎಂ ಮತ್ತು ಟಿಎಂಸಿ ನಡುವೆ ಬಿರುಕು ಕಾಣಿಸಿಕೊಂಡಿತು. ಜಿಜೆಎಂ ಬಲಿಕೊಟ್ಟು ಅದರ ಲಾಭ ಪಡೆದು ಗುಡ್ಡಗಾಡು ಪ್ರದೇಶದಲ್ಲಿ ತನ್ನ ರಾಜಕೀಯ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಟಿಎಂಸಿ ಯತ್ನಿಸಿದ್ದೇ ಇದಕ್ಕೆ ಕಾರಣ. ಇತ್ತೀಚೆಗೆ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ, ದಿವಂಗತ ಸುಭಾಷ್ ಘೀಸಿಂಗ್ ನೇತೃತ್ವದ ಹಿಂದಿನ ಪ್ರಧಾನ ಸಂಘಟನೆ ಗೂರ್ಖಾ ರಾಷ್ಟ್ರೀಯ ವಿಮೋಚನಾ ರಂಗ (ಜಿಎನ್‌ಎಲ್‌ಎಫ್) ಜೊತೆ ಟಿಎಂಸಿ ಒಪ್ಪಂದ ಮಾಡಿಕೊಂಡಿತ್ತು. ಗುಡ್ಡಗಾಡು ಪ್ರದೇಶದ ನಾಲ್ಕು ಮುನಿಸಿಪಾಲಿಟಿಗಳ ಪೈಕಿ ಒಂದರಲ್ಲಿ (ಮಿರಿಕ್) ಟಿಎಂಸಿ ಗೆಲವು ಸಾಧಿಸಿತ್ತು. ಈ ಹಿನ್ನೆಲೆಯಲ್ಲಿ ಟಿಎಂಸಿಗೆ ಗುದ್ದು ಕೊಡಲು ಜಿಜೆಎಂ ಸಮಯ ಕಾಯುತ್ತಿತ್ತು. ಭಾಷೆ ಕುರಿತ ಸರಕಾರದ ಘೋಷಣೆ ಅದಕ್ಕೆ ಒಂದು ಅಸ್ತ್ರವನ್ನು ಒದಗಿಸಿತು.


ಗುಡ್ಡಗಾಡು ಪ್ರದೇಶಗಳ ಪ್ರಗತಿ ಮತ್ತು ಕಲ್ಯಾಣಕ್ಕಾಗಿ ಅರ್ಥಪೂರ್ಣ ಅಧಿಕಾರದೊಂದಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕೆಂದು ಸಿಪಿಐ (ಎಂ) ಸತತವಾಗಿ ಒತ್ತಾಯಿಸುತ್ತಾ ಬಂದಿದೆ. ಆ ಕಾರಣದಿಂದಲೇ 2005ರಲ್ಲಿ ಎಡರಂಗ ಸರಕಾರ ಸಂವಿಧಾನದ ಆರನೇ ಷೆಡ್ಯೂಲ್ ಅನ್ವಯ ಗುಡ್ಡಗಾಡು ಮಂಡಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಕುರಿತು ಜಿಎನ್‌ಎಲ್‌ಎಫ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿತ್ತು. ಆದರೆ ಜಿಜೆಎಂ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರಿಂದ ಅದನ್ನು ಅನುಷ್ಠಾನ ಮಾಡಲು ಆಗಿರಲಿಲ್ಲ.

ಡಾರ್ಜಿಲಿಂಗ್‌ನಲ್ಲಿ ಪ್ರತ್ಯೇಕತಾವಾದಿ ರಾಜಕೀಯ ಬೆಳೆಯಲು ಬಿಜೆಪಿಯ ಕೊಡುಗೆಯೂ ಇದೆ. 2004 ಮತ್ತು 2014ರಲ್ಲಿ ಜಿಜೆಎಂ ಜೊತೆ ಬಿಜೆಪಿ ಕೈಜೋಡಿಸಿ ಡಾರ್ಜಿಲಿಂಗ್ ಲೋಕಸಭೆ ಕ್ಷೇತ್ರದಿಂದ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡಿತ್ತು. ಗೂರ್ಖಾಲ್ಯಾಂಡ್ ಬೇಡಿಕೆಯನ್ನು ಪರಿಶೀಲಿಸುವುದಾಗಿ ಬಿಜೆಪಿ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಹೀಗಾಗಿ, ಟಿಎಂಸಿ ಮತ್ತು ಬಿಜೆಪಿ ಈ ಎರಡೂ ಪಕ್ಷಗಳ ಸಮಯಸಾಧಕ ರಾಜಕಾರಣವು ಡಾರ್ಜಿಲಿಂಗ್ ಗುಡ್ಡಗಾಡು ಪ್ರದೇಶದಲ್ಲಿ ಪ್ರತ್ಯೇಕತಾವಾದ ಜೀವಂತವಾಗಿರಲು ಕೊಡುಗೆ ನೀಡಿದೆ.


ರಾಜ್ಯ ಸರಕಾರವು ದಬ್ಬಾಳಿಕೆಯಿಂದ ಚಳವಳಿಯನ್ನು ದಮನಿಸಲು ಪ್ರಯತ್ನಿಸುತ್ತಿದೆ. ಕೇಂದ್ರ ಪೊಲೀಸ್ ಪಡೆಗಳು ಮತ್ತು ಸೈನ್ಯವನ್ನು ಕೂಡ ನಿಯೋಜಿಸಲಾಗಿದೆ. ಆದರೆ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಜಿಜೆಎಂ ನಡುವೆ ತ್ರಿಪಕ್ಷೀಯ ಸಂಧಾನ ಮಾತುಕತೆಯ ಹೊರತಾಗಿ ಬೇರಾವುದರಿಂದಲೂ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ರಾಜ್ಯ ಸರಕಾರ ದಬ್ಬಾಳಿಕೆಯನ್ನು ನಿಲ್ಲಿಸಿ ಮಾತುಕತೆಗೆ ಮುಂದಾಗಬೇಕು. ತ್ರಿಪಕ್ಷೀಯ ಮಾತುಕತೆ ನಡೆಸಲು ಕೇಂದ್ರ ಸರಕಾರ ಉಪಕ್ರಮಿಸಬೇಕು ಹಾಗೂ ಜಿಜೆಎಂ ಚಳವಳಿಯನ್ನು ವಾಪಸ್ ಪಡೆದು ಮಾತುಕತೆಯಲ್ಲಿ ಭಾಗವಹಿಸಬೇಕು.

ಅನು: ವಿಶ್ವ

ಈ ನಡುವೆ ಡಾರ್ಜಿಲಿಂಗ್‌ನಲ್ಲಿ



ವ್ಯಂಗ್ಯಚಿತ್ರ: ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ




ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

1 ರಿಂದ 2 ಲಕ್ಷ ಐಟಿ ಉದ್ಯೋಗಿಗಳ ವಜಾ? ಮುಂದೇನು?

ವಸಂತರಾಜ ಎನ್.ಕೆ.

ಕಳೆದ ಕೆಲವು ತಿಂಗಳುಗಳಿಂದ ಭಾರತದ ಹೆಮ್ಮೆಯ ಐಟಿ ಉದ್ಯಮದಲ್ಲಿ ಬೆಂಗಳೂರು ಸೇರಿದಂತೆ ದೇಶಾಧ್ಯಂತ ಹತ್ತಾರು ಸಾವಿರಾರು ಉದ್ಯೋಗಿಗಳ ಸಾಮೂಹಿಕ ವಜಾ ನಡೆಯುತ್ತಿರುವ ವರದಿಗಳು ಬರುತ್ತಿವೆ. ಹಲವು ಮೂಲಗಳಿಂದ ಈ ವರ್ಷ ಇನ್ನಷ್ಟು ಉದ್ಯೋಗಿಗಳ ಸಾಮೂಹಿಕ ವಜಾ ನಡೆಯಲಿದೆ ಎಂಬ ವರದಿಗಳು ಬರುತ್ತಿವೆ. ಈ ವರ್ಷ 50 ಸಾವಿರದಿಂದ 2 ಲಕ್ಷ ಐಟಿ ಉದ್ಯೋಗಿಗಳು ವಜಾ ಆಗಬಹುದು ಎಂದು ವಿವಿಧ ವರದಿಗಳು ಹೇಳುತ್ತಿವೆ. ಇದು ಹಲವು ಪ್ರಶ್ನೆಗಳನ್ನು ಎತ್ತುತ್ತಿದೆ. ನಿಜವಾಗಿಯೂ ಎಷ್ಟು ಐಟಿ ಉದ್ಯೋಗಿಗಳು ವಜಾ ಆಗಿದ್ದಾರೆ? ಆಗಲಿದ್ದಾರೆ? ಇದರರ್ಥ ಐಟಿ ಉದ್ಯಮ ತೀವ್ರ ಬಿಕ್ಕಟ್ಟಿನಲ್ಲಿದೆ ಎಂದರ್ಥವೇ? ಕೆಲವು ಐಟಿ ಉದ್ಯಮಿಗಳು ಹೇಳುತ್ತಿರುವಂತೆ ಐಟಿ ಬಿಕ್ಕಟ್ಟಿಗೆ ಉದ್ಯೋಗಿಗಳು ಕಾರಣವೇ? ಅಥವಾ ಇನ್ನಿತರ ಐಟಿ ಉದ್ಯಮಿಗಳು ಪರಿಣತರು ಹೇಳುತ್ತಿರುವಂತೆ ಐಟಿ ಬಿಕ್ಕಟ್ಟಿಗೆ ಅಟೋಮೇಶನ್, ತಂತ್ರಜ್ಞಾನ ಬದಲಾವಣೆಗಳ ಕಾರಣವೇ? ಈ ಬಿಕ್ಕಟ್ಟಿನಲ್ಲಿ ಐಟಿ ಉದ್ಯಮಿಗಳ ಉದ್ಯಮದ ಪಾತ್ರ ಏನೂ ಇಲ್ಲವೆ? ಯಾವ ಜಾಗತಿಕ ಬೆಳವಣಿಗೆಗಳಿಗೂ ಬಿಕ್ಕಟ್ಟಿಗೆ ಜಗ್ಗದ ಜಗತ್ತಿನ ಐಟಿ ಸೂಪರ್ ಪವರ್ ಆದ ಭಾರತದ ಹೆಮ್ಮೆಯ ಐಟಿ ಉದ್ಯಮದ ಹೆಗ್ಗಳಿಕೆ ಏನಾಯಿತು? ಬರಿಯ ಹೊರಗಣ ಬದಲಾವಣೆಗಳ ಕಾರಣ ಮಾತ್ರವೇ ಈ ಬಿಕ್ಕಟ್ಟಿಗೆ ಕಾರಣವೇ? ಐಟಿ ಉದ್ಯಮದ ಆಂತರಿಕ ನ್ಯೂನತೆಗಳು ಇಲ್ಲವೇ? ಭಾರತದ ಕರ್ನಾಟಕದ ಆರ್ಥಿಕದ ಮೇಲೆ ಇದರ ಪರಿಣಾಮಗಳೇನು? ಐಟಿ ಉದ್ಯಮ ಏನು ಮಾಡಬಹುದು? ಕೇಂದ್ರ ರಾಜ್ಯ ಸರಕಾರಗಳು ಏನು ಮಾಡಬಹುದು? ಐಟಿ ಉದ್ಯೋಗಿಗಳು ಏನು ಮಾಡಬಹುದು? ಈ ಪ್ರಶ್ನೆಗಳನ್ನು ಉತ್ತರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.





ಎಷ್ಟು ಐಟಿ ಉದ್ಯೋಗಿಗಳು ವಜಾ ಆಗಿದ್ದಾರೆ? ಆಗಲಿದ್ದಾರೆ?

ಹತ್ತಾರು ಸಾವಿರಾರು ಎಂಬುದಷ್ಟೇ ಪತ್ರಿಕಾ ವರದಿಗಳ ಮತ್ತು ಐಟಿ ಉದ್ಯೋಗಿಗಳು ಮತ್ತು ಅವರ ಕೆಲವು ಸಂಘಟನೆಗಳ ಮಾಹಿತಿಯ ಆಧಾರದ ಮೇಲೆ ಸಿಗುವ ಉತ್ತರ. ಅತಿ ದೊಡ್ಡ 10 ಕಂಪನಿಗಳು ಸರಾಸರಿ 5 ಸಾವಿರ ಉದ್ಯೋಗಿಗಳನ್ನು ವಜಾ ಮಾಡಿವೆ ಎಂಬುದು ಒಂದು ಅಂದಾಜು. ಐಟಿ ಕಂಪನಿಗಳು ಮತ್ತು ನಾಸ್ಕಾಂ ನಂತಹ ಐಟಿ ಉದ್ಯಮದ ಸಂಘಟನೆಗಳು ಉದ್ಯೋಗಿಗಳ ಸಾಮೂಹಿಕ ವಜಾ ಆಗುತ್ತಿದೆ ಎಂಬುದನ್ನೇ ನಿರಾಕರಿಸುತ್ತಿವೆ. ಇದು ವದಂತಿಗಳ ಮೇಲೆ ಆಧಾರಿತ ಅತಿಶಯೋಕ್ತಿಗಳು. ಅವನ್ನು ನಂಬಬೇಡಿ ಎನ್ನುತ್ತಿವೆ. ಸರಕಾರದ ಬಳಿಯೂ, ಬೆರಳೆಣಿಕೆಯ ದೂರು ದಾಖಲಾದ ಪ್ರಕರಣಗಳ ಬಗ್ಗೆ ಬಿಟ್ಟರೆ ಯಾವುದೇ ಮಾಹಿತಿ ಇಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಐಟಿ ಕಂಪನಿಗಳನ್ನು ಕೇಳಿ ಮಾಹಿತಿ ಪಡೆಯಬಹುದು. ಆದರೆ ಅದನ್ನು ಮಾಡುವ ಬದಲು ಹಲವು ಕೇಂದ್ರ ಮತ್ತು ರಾಜ್ಯ ಸರಕಾರದ ಮಂತ್ರಿಗಳೂ ಅಧಿಕಾರಿಗಳೂ "ಅವು ವದಂತಿಗಳ ಮೇಲೆ ಆಧಾರಿತ ಅತಿಶಯೋಕ್ತಿಗಳು. ಅವನ್ನು ನಂಬಬೇಡಿ" ಎನ್ನುತ್ತಾ ಐಟಿ ಕಂಪನಿಗಳ ವಕ್ತಾರರಂತೆ ಮಾತನಾಡುತ್ತಿವೆ. ಈ ಬಗ್ಗೆ ನಿಖರವಾದ ಮಾಹಿತಿ ಇಲ್ಲ ಎಂಬುದೇ ಅತಿ ದೊಡ್ಡ ಸಮಸ್ಯೆ.

ಐಟಿ ಬಿಕ್ಕಟ್ಟುಗಳು ಹೊಸದೇನಲ್ಲ. ಹಿಂದೆ 2001–01, 2007–8ರಲ್ಲೂ ಸಾವಿರಾರು ಐಟಿ ಉದ್ಯೋಗಿಗಳು ವಜಾ ಆಗಿದ್ದರು. ಆದರೆ ಹಿಂದಿನ ಬಿಕ್ಕಟ್ಟುಗಳಲ್ಲಿ ಹೆಚ್ಚು ಅನುಭವ, ಪರಿಣತಿ ಇಲ್ಲದ ಹೊಸ (1–3 ವರ್ಷ) ಮತ್ತು ಕೆಲವು ಬಿಕ್ಕಟ್ಟು-ಗ್ರಸ್ತ ನಿರ್ದಿಷ್ಟ ಕ್ಷೇತ್ರಗಳಲ್ಲಿ (ಉದಾ: ಟೆಲಿಕಾಂ, ಬ್ಯಾಂಕಿಂಗ್/ಇನ್ಶುರೆನ್ಸ್) ಕೆಲಸ ಮಾಡುವವರು ಉದ್ಯೋಗಗಳನ್ನು ಕಳದುಕೊಂಡಿದ್ದರೆ, ಈ ಬಾರಿ ಕಂಪನಿಯ ಮಧ್ಯಮ ಹಂತದ (7–15 ವರ್ಷಗಳ ಅನುಭವ ಇರುವ) ಮ್ಯಾನೇಜರುಗಳನ್ನು ದೊಡ್ಡ ಸಂಖ್ಯೆಯಲ್ಲಿ ವಜಾ ಮಾಡುತ್ತಿರುವುದು ಆಶ್ಚರ್ಯಕರ ಮತ್ತು ಭಿನ್ನ ವಿದ್ಯಮಾನ. ಸಾಮೂಹಿಕ ವಜಾದ ಹಲವು ನಿರ್ದಿಷ್ಟ ಪ್ರಕರಣಗಳು ವರದಿಯಾಗುತ್ತಿವೆ. ರಜಾದಲ್ಲಿ ಹೋಗಿರುವವರಿಗೆ ಹಲವು ವರ್ಷಗಳ ಕಾಲ ಕಂಪನಿಯ ವಿಭಾಗದ ಪ್ರಾಜೆಕ್ಟಿನ ಬೆನ್ನೆಲುಬಾಗಿದ್ದ ಇಂಜಿನೀಯರುಗಳು, ಮ್ಯಾನೇಜರುಗಳನ್ನು ಎಚ್.ಆರ್. ಅಧಿಕಾರಿ ಕರೆದು 'ರಾಜಿನಾಮೆ ಕೊಡಿ, ಇಲ್ಲವೆ ನಿಮ್ಮನ್ನು ವಜಾ ಮಾಡಲಾಗುವುದು, ನಿಮಗೆ ಅನುಭವದ ಮತ್ತು ರಿಲೀವಿಂಗ್ ಸರ್ಟಿಫಿಕೇಟು ಕೊಡಲಾಗುವುದಿಲ್ಲ' ಎಂದು ನೇರವಾಗಿ ಬ್ಲಾಕ್ ಮೇಲ್ ಮಾಡುವ ರೀತಿಯಲ್ಲಿ ಹೇಳಿರುವ ವರದಿಗಳು ಬರುತ್ತಿವೆ. ರಜಾ ಹೋಗಿರುವವರಿಗೆ, ದೀರ್ಘ ಕಾಲ ಗ್ರಾಹಕ ಕಂಪನಿಗಳಲ್ಲಿ (ಹೆಚ್ಚಾಗಿ ವಿದೇಶಗಳಲ್ಲಿ) ಕೆಲಸ ಮಾಡಿ ವಾಪಸಾದವರಿಗೆ ಎಚ್.ಆರ್. ಅಧಿಕಾರಿ ಫೋನ್ ಕರೆ ಮಾಡಿ ಇದೇ ರೀತಿಯ ಮಾತುಗಳನ್ನು ಹೇಳಿರುವ ವರದಿಗಳು ಬಂದಿವೆ. ಹೆಚ್ಚಿನವರು ತಮಗೆ ಮುಂದೆ ಕೆಲಸ ಸಿಗುವುದು ಕಷ್ಟವಾದೀತು ಎಂದು ತಮ್ಮ ಭವಿಷ್ಯದ ಬಗ್ಗೆ ಹೆದರಿ ರಾಜೀನಾಮೆ ಕೊಟ್ಟಿದ್ದಾರೆ. ಬೆರಳೆಣಿಕೆಯ ಕೆಲವರು ಮಾತ್ರ ಈ ಬ್ಲಾಕ್ ಮೇಲ್ ತಂತ್ರಕ್ಕೆ ಸವಾಲು ಹಾಕಿ ಐಟಿ ಅಸೋಸಿಯೇಶನ್/ಯೂನಿಯನುಗಳನ್ನು ಸಂಪರ್ಕಿಸಿದ್ದಾರೆ. ಲೇಬರ್ ಇಲಾಖೆಗೆ ಅಧಿಕೃತ ದೂರು ಕೊಟ್ಟಿದ್ದಾರೆ.

ಐಟಿ ಕಂಪನಿಗಳ ವಕ್ತಾರರು "ಸಾಮೂಹಿಕ ವಜಾ ನಡೆಯುತ್ತಿಲ್ಲ. ಕೆಲಸದಲ್ಲಿ ಅತೃಪ್ತಿಕರ ಪ್ರಗತಿಯ ಪ್ರಕರಣಗಳಲ್ಲಿ ಮಾತ್ರ ಅವರ ಭವಿಷ್ಯಕ್ಕೆ ತೊಂದರೆ ಆಗದಂತೆ ರಾಜಿನಾಮೆ ಕೊಡಲು ಅವಕಾಶ ಕೊಡಲಾಗುತ್ತಿದೆ. ಇದು ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಹೊಸದೇನಲ್ಲ" ಎನ್ನುತ್ತಿದ್ದಾರೆ. ಒಂದರ್ಥದಲ್ಲಿ ಇದು ನಿಜ. ಐಟಿ ಕಂಪನಿಗಳು ಹಿಂದಿನಿಂದಲೂ ತಮ್ಮ ವಹಿವಾಟಿನ ಏರುಪೇರು ಸಮಸ್ಯೆಯನ್ನು ನಿಭಾಯಿಸಲು ಉದ್ಯೋಗಿಗಳನ್ನು "ಅತೃಪ್ತಿಕರ ಕೆಲಸದ ಗುಣಮಟ್ಟ"ದ ನೆಪದಲ್ಲಿ ವಜಾ ಮಾಡುತ್ತಾ ಬಂದಿವೆ. ಇಂತಹ ವಜಾಗಳನ್ನು ತಮ್ಮ ವಾರ್ಷಿಕ ವರದಿಯಲ್ಲಿ ವರದಿ ಮಾಡುತ್ತಲೂ ಇವೆ. ಇದು ಇಂಡಿಯನ್ ಕಂಪನಿಗಳಲ್ಲಿ ಶೇ. 1–1.5% ಇದ್ದರೆ, ಬಹುರಾಷ್ಟ್ರೀಯ ವಿದೇಶಿ ಕಂಪನಿಗಳಲ್ಲಿ (ಉದಾ: ಐ.ಬಿ.ಎಂ., ಎಚ್.ಪಿ., ಕ್ಯಾಪ್ ಜೆಮಿನಿ, ಎಕ್ಸೆಂಚುರ್) ಶೇ. 3 ರಷ್ಟು ಇರುತ್ತದೆ. ನಾಸ್ಕಾಂ ಈ ವರ್ಷವೂ ಇಂತಹ ವಜಾಗಳು ಶೇ. 1–3 ರಷ್ಟಿರುತ್ತದೆ ಎಂದು ಹೇಳಿದೆ. ನಾಸ್ಕಾಂ ನ ಗರಿಷ್ಟ ಪ್ರಮಾಣ (ಶೇ. 3) ವನ್ನು 40 ಲಕ್ಷ ಉದ್ಯೋಗಿಗಳು ಇರುವ ಇಡೀ ಐಟಿ ಉದ್ಯಮಕ್ಕೆ ಅನ್ವಯಿಸಿದರೆ, 1.2 ಲಕ್ಷ ಉದ್ಯೋಗಿಗಳು ಈ ವರ್ಷ ಕೆಲಸ ಕಳೆದುಕೊಳ್ಳಲಿದ್ದಾರೆ ಎಂದಾಗುತ್ತದೆ.





ಆದರೆ ಹಲವು ಉದ್ಯಮದ ಪ್ರಗತಿಯನ್ನು ಅಧ್ಯಯನ/ವೀಕ್ಷಣೆ ಮಾಡುವ ಮತ್ತು ಈ ಕಂಪನಿಗಳ ಒಳಗಣ ಗುಟ್ಟು ತಿಳಿಯಬಲ್ಲ ಹಲವು ಸ್ವತಂತ್ರ ಸಂಶೋಧನಾ ಸಂಸ್ಥೆಗಳು ಸಾಮಾಹಿಕ ವಜಾಗಳು ಇನ್ನೂ ದೊಡ್ಡ ಪ್ರಮಾಣದಲ್ಲಿ ಬರಬಹುದು ಎಂದು ಹೇಳುತ್ತಿವೆ. 12 ಲಕ್ಷ ಉದ್ಯೋಗಿಗಳನ್ನು ಹೊಂದಿರುವ ಏಳು ಅತಿ ದೊಡ್ಡ ಐಟಿ ಕಂಪನಿಗಳು (ವಿಪ್ರೊ, ಇನ್ಫೊಸಿಸ್, ಟಿ.ಸಿ.ಎಸ್., ಎಚ್.ಸಿ.ಎಲ್., ಟೆಕ್ ಮಹೀಂದ್ರ, ಕಾಗ್ನಿಝೆಂಟ್, ಕಾ ಜೆಮಿನಿ, ಡಿ.ಎಕ್ಸ್.ಸಿ.) ಸುಮಾರು ಶೇ. 5 ರಷ್ಟು ಉದ್ಯೋಗಿಗಳನ್ನು (ಅಂದರೆ ಸುಮಾರು 60 ಸಾವಿರ) ವಜಾ ಮಾಡಲಿವೆ ಎಂದು ಒಂದು ಇಂತಹ ವರದಿ ಹೇಳಿದೆ. ಈ ಪ್ರಮಾಣವನ್ನು 40 ಲಕ್ಷ ಉದ್ಯೋಗಿಗಳು ಇರುವ ಇಡೀ ಐಟಿ ಉದ್ಯಮಕ್ಕೆ ಅನ್ವಯಿಸಿದರೆ ಸುಮಾರು 2 ಲಕ್ಷ ಉದ್ಯೋಗಿಗಳು ಈ ವರ್ಷ ಕೆಲಸ ಕಳೆದುಕೊಳ್ಳಲಿದ್ದಾರೆ

ಎಂದು ಪರಿಣತರ ಅಂದಾಜು. ನಾಸ್ಕಾಂ–ಮೆಕೆನ್ಸಿ ವರದಿ ಸಹ ಮುಂದಿನ 3 ವರ್ಷಗಳಲ್ಲಿ 2 ಲಕ್ಷ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎನ್ನುತ್ತಿದೆ.


ಇದರರ್ಥ ಐಟಿ ಉದ್ಯಮ ತೀವ್ರ ಬಿಕ್ಕಟ್ಟಿನಲ್ಲಿದೆ ಎಂದರ್ಥವೇ?


ಹೌದು. 2000–01, 2007–08 ರಂತೆ ಬಹುಶಃ ಅದಕ್ಕಿಂತಲೂ ತೀವ್ರವಾದ ಬಿಕ್ಕಟಿನತ್ತ ಭಾರತದ ಐಟಿ ಉದ್ಯಮ ಹೋಗುತ್ತಿದೆ ಎಂಬ ಬಗ್ಗೆ ಹಲವು ಸೂಚನೆಗಳು ಕಾಣುತ್ತಿವೆ. ಇದು ಬರಿಯ ಟ್ರಂಪ್ ಅಧ್ಯಕ್ಷಗಿರಿಯೊಂದಿಗೆ ಧುತ್ತೆಂದು ಎದ್ದು ಬಂದ ಬಿಕ್ಕಟ್ಟು ಅಲ್ಲ. ಬರಿಯ ಎಚ್.1ಬಿ ವೀಸಾ ನೀಡಿಕೆಯ ಬದಲಾವಣೆಗಳಿಂದ ಉಂಟಾದ ಬಿಕ್ಕಟ್ಟು ಸಹ ಅಲ್ಲ. ಕಳೆದ ಹಲವು ವರ್ಷಗಳಿಂದ ಈ ಬಿಕ್ಕಟ್ಟಿನ ಹಲವು ಸೂಚನೆಗಳು ಇದ್ದವು. 2001, 2008 ಬಿಕ್ಕಟುಗಳ ನಂತರವೂ ಭಾರತದ ಐಟಿ ಉದ್ಯಮದ ರಫ್ತು ಮೌಲ್ಯ, ಉದ್ಯೋಗಿಗಳ ಸಂಖ್ಯೆ ಮತ್ತು ಒಟ್ಟು ವಹಿವಾಟು ಮೌಲ್ಯಗಳು ಸತತವಾಗಿ ಏರುತ್ತಾ ಬಂದಿದ್ದರೂ 2007–08 ಬಿಕ್ಕಟ್ಟಿನ ನಂತರ ಇವುಗಳ ಏರಿಕೆಯ (ಶೇಕಡವಾರು) ಪ್ರಮಾಣ ಸತತವಾಗಿ ಇಳಿಯುತ್ತಾ ಬಂದಿದೆ. ಇದು ಜತೆಯಲ್ಲಿರುವ ಗ್ರಾಫ್ ಗಳಿಂದ ಸ್ಪಷ್ಟವಾಗುತ್ತದೆ.


ಐಟಿ ಉದ್ಯಮದ ರಫ್ತು ಮೌಲ್ಯ 2006ರಲ್ಲಿ 2400 ಕೋಟಿ ಡಾಲರುಗಳಿಂದ 2011 ರಲ್ಲಿ 5950 ಕೋಟಿ ಡಾಲರುಗಳಿಗೆ ಏರಿ, 2016ರ ಹೊತ್ತಿಗೆ 10,800 ಕೋಟಿ ಡಾಲರುಗಳನ್ನು ಮುಟ್ಟಿದೆ. ಆದರೆ ರಫ್ತು ಮೌಲ್ಯದ ವಾರ್ಷಿಕ ಏರಿಕೆಯ ದರ 2007ರಲ್ಲಿ ಶೇ. 31 ಇದ್ದಿದ್ದು 2016ರಲ್ಲಿ ಶೇ. 10.3ಕ್ಕೆ ಇಳಿದಿದೆ. 2010 ರಲ್ಲಿ (ಶೇ. 5.9) ಬಿಟ್ಟರೆ 2016ರದ್ದು ಅತ್ಯಂತ ಕನಿಷ್ಟ ವಾರ್ಷಿಕ ಏರಿಕೆಯ ದರ. ಇದೇ ರೀತಿ ಟ್ರೆಂಡ್ ಉದ್ಯೋಗಿಗಳ ಸಂಖ್ಯೆ ಏರಿಕೆಯಲ್ಲೂ ಕಂಡಿದೆ. 2001ರಲ್ಲಿ 4.3 ಲಕ್ಷ ಇದ್ದಿದ್ದು, 2008ರಲ್ಲಿ 19.62 ಲಕ್ಷಕ್ಕೆ ಏರಿ, 2016ರ ಹೊತ್ತಿಗೆ 36.9 ಲಕ್ಷ ಮುಟ್ಟಿದೆ. ಈಗ ಅದು 40 ಲಕ್ಷದ ಹತ್ತಿರ ಇದೆ ಎಂದು ಅಂದಾಜಿಸಲಾಗಿದೆ. ಆದರೆ ಉದ್ಯೋಗಿಗಳ ಸಂಖ್ಯೆ ಏರಿಕೆಯ ದರ 2001–08 ಅವಧಿಯಲ್ಲಿ ಸರಾಸರಿ ಶೇ. 25 ಇದ್ದಿದ್ದು 2007ರ ನಂತರ ತೀವ್ರವಾಗಿ ಇಳಿದು 2016ರಲ್ಲಿ ಶೇ. 5.9 ತಲುಪಿದೆ.


ಇದೇ ರೀತಿ ಒಟ್ಟು ಐಟಿ ವಹಿವಾಟು ಮೌಲ್ಯ ಸಹ. ಒಟ್ಟು ಐಟಿ ವಹಿವಾಟು ಮೌಲ್ಯ 2009ರಲ್ಲಿ 6790 ಕೋಟಿ ಡಾಲರುಗಳು ಇದ್ದು, 2016ರಲ್ಲಿ 14,340 ಕೋಟಿ ಡಾಲರುಗಳಿಗೆ ಏರಿದೆ. ಆದರೆ ಒಟ್ಟು ಐಟಿ ವಹಿವಾಟು ಮೌಲ್ಯದ ಏರಿಕೆಯ ದರ 2011ರಲ್ಲಿ ಶೇ. 20.3 ಇದ್ದಿದ್ದು ನಂತರ ಸತತವಾಗಿ ಇಳಿಯುತ್ತಾ 2016ರಲ್ಲಿ ಶೇ. 8.5 ಮುಟ್ಟಿದೆ. 2014 ರ ದರ (ಶೇ. 1.4) ಬಿಟ್ಟರೆ ಇದು ಕನಿಷ್ಟ ವಾರ್ಷಿಕ ಏರಿಕೆಯ ದರ.

→









→
ಇದೇ ರೀತಿ ಲಾಭದ ಪ್ರಮಾಣ ಏರುತ್ತಿದ್ದರೂ ಲಾಭದ ದರ ಸತತವಾಗಿ ಕಡಿಮೆಯಾಗುತ್ತಾ ನಡೆದಿದೆ. ಐಟಿ ಕಂಪನಿಗಳಲ್ಲಿ ಸಾಮೂಹಿಕ ವಜಾದ ಮುಖ್ಯ ಕಾರಣ ಲಾಭದ ದರ ಉಳಿಸಿಕೊಳ್ಳುವುದು. ಬಿಕ್ಕಟ್ಟಿನ ಪರಿಣಾಮಗಳನ್ನು ಲಕ್ಷಾಂತರ ಐಟಿ ಉದ್ಯೋಗಿಗಳಿಗೆ ದಾಟಿಸುವುದು. ಉದ್ಯೋಗಿಗಳ ಸಾಮೂಹಿಕ ವಜಾ ಮತ್ತು ಹೊಸ ಸೇರ್ಪಡೆಯಲ್ಲಿ ತೀವ್ರ ಕಡಿತಗಳು ಬಿಕ್ಕಟ್ಟಿನ ಸಂಕೇತ.

ಅಭಿವೃದ್ಧ ದೇಶಗಳಲ್ಲಿ (ಪ್ರಮುಖವಾಗಿ ಅಮೆರಿಕ) ಮುಂದುವರೆಯುತ್ತಿರುವ ಆರ್ಥಿಕ ಬಿಕ್ಕಟ್ಟು, ಅದನ್ನು ಪರಿಹರಿಸಲು ಈ ದೇಶಗಳಲ್ಲಿ “ಜಾಗತೀಕರಣ–ವಿರೋಧಿ” ರಕ್ಷಣಾತ್ಮಕ ಕ್ರಮಗಳು, ಇದ–ರಿಂದ ಹುಟ್ಟಿರುವ ವಲಸೆಗಾರ ಕಾರ್ಮಿಕ–ವಿರೋಧಿ ಭಾವನೆ, ಹಲವು ದೇಶಗಳಲ್ಲಿ ಉಗ್ರ ಬಲಪಂಥೀಯ ರಾಜಕಾರಣದ ಮೇಲುಗೈ–ಇವೆಲ್ಲಾ ಸೇರಿ ಐಟಿ ಕಂಪನಿಗಳು ಗಾಬರಿಗೊಂಡಿವೆ. ಬಿಕ್ಕಟ್ಟಿನ ಲಕ್ಷಣಗಳು ಕಾಣಲಾರಂಭಿಸಿವೆ.

ಐಟಿ ಬಿಕ್ಕಟ್ಟಿಗೆ ಉದ್ಯೋಗಿಗಳು ಕಾರಣವೇ?

ಹಲವು ಐಟಿ ಉದ್ಯಮಿಗಳು, ಐಟಿ ಕಂಪನಿಗಳ ಹಿರಿಯ ಅಧಿಕಾರಿಗಳು, ಕೆಲವು ಪರಿಣತರು, ರಾಜಕೀಯ ನಾಯಕರೂ ಐಟಿ ಬಿಕ್ಕಟ್ಟಿಗೆ ಉದ್ಯೋಗಿಗಳ ಧೋರಣೆ ಕಾರಣ ಎಂದು ಆರೋಪಿಸುತ್ತಿದ್ದಾರೆ. ಅವರ ಪ್ರಕಾರ ಐಟಿ ತಂತ್ರಜ್ಞಾನ ನಾಗಾಲೋಟದಿಂದ ಸಾಗಿದ್ದು ಉದ್ಯೋಗಿಗಳು ತಮ್ಮ ತಂತ್ರಜ್ಞಾನದ ಅರಿವು, ಸಂಬಂಧಿಸಿದ ಕೌಶಲ್ಯಗಳನ್ನೂ ಅದೇ ವೇಗದಲ್ಲಿ ಕರಗತ ಮಾಡಿಕೊಳ್ಳದಿದ್ದರೆ ಅವರು ಕಂಪನಿಗಳಿಗೆ ಅಪ್ರಯೋಜಕರಾಗುತ್ತಾರೆ. ಆದ್ದರಿಂದ ಅಂತಹವರನ್ನು ಗುರುತಿಸಿ ತರಬೇತಿ ನೀಡಿ ಕೌಶಲ್ಯ ಅಭಿವೃದ್ಧಿಗೆ ಪ್ರಯತ್ನಿಸಲಾಗುತ್ತದೆ. ಇದರಿಂದಲೂ ಪ್ರಯೋಜನವಾಗದಿದ್ದಾಗ ಅವರನ್ನು ಕಳಿಸಬೇಕಾಗುತ್ತದೆ ಎಂಬುದು ಅವರ ಸಮಜಾಯಿಷಿ. ಇದು ಅರ್ಧ ಸತ್ಯ. ಐಟಿ ತಂತ್ರಜ್ಞಾನ ನಾಗಾಲೋಟದ ವೇಗಕ್ಕೆ ಉದ್ಯೋಗಿಗಳು ತಮ್ಮ ತಂತ್ರಜ್ಞಾನದ ಅರಿವು, ಸಂಬಂಧಿಸಿದ ಕೌಶಲ್ಯಗಳನ್ನೂ ಹೊಂದಿಸಿಕೊಳ್ಳಲಾಗುತ್ತಿಲ್ಲ ಎಂಬುದು ಸ್ವಲ್ಪ ಮಟ್ಟಿಗೆ ನಿಜ. ಆದರೆ ಇದು ಉದ್ಯೋಗಿಯ ಜವಾಬ್ದಾರಿಯೇ? ಒಬ್ಬ ಪೂರ್ಣ ಕಾಲದ ಉದ್ಯೋಗಿಗೆ ಇದಕ್ಕೆ ಸಮಯ ಕೊಡಲಾಗುತ್ತಿಲ್ಲ. ಯಾವ ಹೊಸ ಕ್ಷೇತ್ರ, ಹೊಸ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಗೆ ನಿರ್ಧರಿಸುವುದು? ಎಂಬುದು ಉದ್ಯೋಗಿಗಳ ಸರಿಯಾದ ಪ್ರಶ್ನೆ. ಮುಂಬರುವ ಪ್ರಾಜೆಕ್ಟುಗಳ ಅಥವಾ ಯೋಜನೆಯ ಆಧಾರದ ಮೇಲೆ ಯಾವ ಹೊಸ ಕ್ಷೇತ್ರ, ಹೊಸ ಕೌಶಲ್ಯಗಳು ಬೇಕು ಎಂದು ಕಂಪನಿ ನಿರ್ಧರಿಸಿ, ಆ ಕ್ಷೇತ್ರಗಳಲ್ಲಿ ತರಬೇತಿ ಅಥವಾ ಸ್ವಯಂ–ಅಧ್ಯಯನಕ್ಕೆ ಕಾಲಾವಕಾಶ ಕೊಡಬೇಕು. ಇದು ಕಂಪನಿಗಳ ಜವಾಬ್ದಾರಿ. ಬರಿಯ ಪ್ರಾಜೆಕ್ಟುಗಳ, ಲಾಭದ, ವಹಿವಾಟಿನ ಮೌಲ್ಯದ ಹಿಂದೆ ಕುರುಡಾಗಿ ಓಡುತ್ತಾ, ಯಾವುದೇ ರೀತಿಯ ತಂತ್ರಜ್ಞಾನ ಕೌಶಲ್ಯ ಯೋಜನೆ ಬೆಳವಣಿಗೆಗಳಲ್ಲಿ ಹೂಡಿಕೆ ಮಾಡದೆ ಇದ್ದದ್ದರ ಪರಿಣಾಮ ಇದು. ಕಂಪನಿಗಳ ದೂರದರ್ಶಿತ್ವದ ಅಭಾವ, ಸಮೀಪಗಾಮಿ ಲಾಭ–ವಹಿವಾಟು ಶೇರ ಮಾರುಕಟ್ಟೆ ಬೆಲೆ ಮಾತ್ರ ಪ್ರಧಾನವಾಗಿರುವುದರ ಫಲ, ಎಂದು ಉದ್ಯೋಗಿಗಳು ಸರಿಯಾಗಿಯೇ ಆಪಾದಿಸುತ್ತಾರೆ.

ಹಲವು ಬಾರಿ ವಜಾಕ್ಕೆ ಕಾರಣವಾಗಿರುವುದು ಉದ್ಯೋಗಿಗಳ ತಂತ್ರಜ್ಞಾನ ಕೌಶಲ್ಯದ ಕಾರಣಕ್ಕೂ ಅಲ್ಲವೇ ಅಲ್ಲ. ಲಾಭದ ಪ್ರಮಾಣ ಉಳಿಸಿಕೊಳ್ಳಲು ಇಷ್ಟು ಜನರನ್ನು ಈ ಹಂತಗಳಲ್ಲಿ ತೆಗೆಯಬೇಕು ಎಂದು ಕಂಪನಿ ಬೋರ್ಡು ಆಜ್ಞೆ ಮಾಡುತ್ತದೆ. ಪ್ರತಿ ವಿಭಾಗ ಇಲಾಖೆ ಗಳಿಗೆ ಗುರಿಗಳನ್ನು ನೀಡಲಾಗುತ್ತದೆ. ಹಲವು ಬಾರಿ ಮ್ಯಾನೇಜರ್ ಯಾವುದೇ ನಿರ್ದಿಷ್ಟ ಮಾನದಂಡವಿಲ್ಲದೆ ಬೇಕಾಬಿಟ್ಟಿಯಾಗಿ ವಜಾ ಮಾಡುತ್ತಾರೆ ಎಂದು ಹಲವು ಉದಾಹರಣೆಗಳ ಸಮೇತ ಉದ್ಯೋಗಿಗಳು ಹೇಳುತ್ತಾರೆ. ವಜಾ ಮಾಡಬೇಕಾದವರನ್ನು “ಅತೃಪ್ತಿಕರ ಕೆಲಸದ ಗುಣಮಟ್ಟ”ದ ರೇಟಿಂಗ್(ಅಂಕ) ಕೊಡಲಾಗುತ್ತದೆ. ಇಲ್ಲದಿದ್ದರೆ 5–10 ವರ್ಷಗಳಿಂದ ಟಾಪ್ ರೇಟಿಂಗ್ ಇದ್ದವರು, ಕೆಲವೊಮ್ಮೆ ವಿಶೇಷ ಪ್ರಶಸ್ತಿ ಪಡೆದವರು ಹೇಗೆ ಇದ್ದಕ್ಕಿದ್ದ ಹಾಗೆ “ಅತೃಪ್ತಿಕರ ಕೆಲಸದ ಗುಣಮಟ್ಟ”ದ ರೇಟಿಂಗ್ ಪಡೆಯುತ್ತಾರೆ ಎಂದು ಅವರು ಪ್ರಶ್ನಿಸುತ್ತಾರೆ. ಪರಿಸ್ಥಿತಿ ಸಾಮಾನ್ಯವಿದ್ದಾಗಲೇ ಉದ್ಯೋಗಿಯ “ಕೆಲಸದ ಗುಣಮಟ್ಟ” ವ್ಯವಸ್ಥೆ ವಸ್ತುನಿಷ್ಠವಾಗಿರುವುದಿಲ್ಲ. ಬಿಕ್ಕಟ್ಟಿನ ಸಂದರ್ಭದಲ್ಲಿ ಅದು ಪೂರ್ತಿ ವ್ಯಕ್ತಿನಿಷ್ಠವಾಗುತ್ತದೆ, ಎಂದು ಅವರು ಆಪಾದಿಸುತ್ತಾರೆ.

ಐಟಿ ಬಿಕ್ಕಟ್ಟಿಗೆ ಅಟೋಮೇಶನ್, ತಂತ್ರಜ್ಞಾನ ಬದಲಾವಣೆಗಳು ಕಾರಣವೇ?

ಐಟಿ ಬಿಕ್ಕಟ್ಟಿಗೆ ಸಾಫ್ಟವೇರ್ ಕ್ಷೇತ್ರಕ್ಕೂ ಲಗ್ಗೆಯಿಟ್ಟಿರುವ “ಕೃತಕ ಬುದ್ಧಿಮತ್ತೆ” (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಆಧಾರಿತ ಸಾಫ್ಟ್ ವೇರ್ ರೊಬೊಟ್ ಮುಂತಾದ ಅಟೋಮೇಶನ್ ತಂತ್ರಜ್ಞಾನಗಳು ಒಂದು ಕಡೆ ಮತ್ತು ಸಾಫ್ಟ್ ವೇರ್ ತಂತ್ರಜ್ಞಾನದಲ್ಲಿ ಆಗುತ್ತಿರುವ ಬದಲಾವಣೆಗಳು ಕೆಲವು ಸಾಫ್ಟವೇರ್ ಕ್ಷೇತ್ರವನ್ನೇ ಆಮೂಲಾಗ್ರವಾಗಿ ಬದಲಾಯಿಸುವುದು ಅಥವಾ ಇಲ್ಲವಾಗಿಸುವುದು ನಡೆದಿದೆ. ಇದ–ರಿಂದ ಹಿಂದಿನಷ್ಟು ಉದ್ಯೋಗಿಗಳ ಅಗತ್ಯ ಇಲ್ಲ ಎಂದೂ ಇದೇ ಈಗಿನ ಸಾಮೂಹಿಕ ವಜಾಕ್ಕೆ ಕಾರಣವೆಂದು ಕೆಲವು ಹೆಚ್ಚಾಗಿ ಮಾಜಿ ಐಟಿ ಉದ್ಯಮಿಗಳು (ಉದಾ: ಮಾಜಿ ಇನ್ಫೋಸಿಸ್ ಪ್ರವರ್ತಕರಲ್ಲಿ ಒಬ್ಬರಾದ ಮೋಹನದಾಸ ಪೈ) ಮತ್ತು ಐಟಿ ಪರಿಣತರು ಹೇಳುತ್ತಾ ಬರುತ್ತಿದ್ದಾರೆ. ಇದಕ್ಕೆ ಐಟಿ ಉದ್ಯಮ ಅಥವಾ ಕಂಪನಿಗಳು ಹೊಣೆಯಲ್ಲ ಎಂಬುದು ಅವರ ವಾದ.



ಸಾಫ್ಟ್ ವೇರ್ ಅಭಿವೃದ್ಧಿ ಪ್ರಕ್ರಿಯೆಯ ಕೆಲವು ಕೆಳ ಮತ್ತು ಸರಳ ಭಾಗಗಳ ಆಂಶಿಕ ಮತ್ತು ಬಿ.ಪಿ.ಒ.ದ ಕೆಲವು ಕೆಲಸಗಳ ಅಟೊಮೇಶನ್ ಆಗಿರುವುದು ನಿಜ. ಉದಾಹರಣೆಗೆ ವೆಬ್ ಸಪೋರ್ಟ್ ನಲ್ಲಿ ಬರೆದ ಮತ್ತು ಧ್ವನಿ–ಆಧಾರಿತ ಪ್ರಶ್ನೆಗಳಿಗೆ ಮರು–ಪ್ರಶ್ನೆ ಹಾಕಿ ಹೆಚ್ಚಿನ ಮಾಹಿತಿ ಸಂಗ್ರಹಿಸುವ, ಉತ್ತರಿಸುವ ರೊಬೊಟ್ ಸಾಫ್ಟ್ ವೇರ್ ಗಳು ಲಭ್ಯ ಇವೆ. ಇನ್ನು ಕೇಂದ್ರೀಕೃತ ದೈತ್ಯ ಸರ್ವರ್/ಸಾಫ್ಟ್ ವೇರ್ ನಿಂದ ನೆಟ್ ಮೇಲೆ ಹಂಚಿ ಹೋದ ವಿಕೇಂದ್ರೀಕೃತ “ಕ್ಲೌಡ್ ಕಂಪ್ಯೂಟಿಂಗ್” ಬಂದಿದ್ದರಿಂದ ಕೆಲವು ಕ್ಷೇತ್ರಗಳಲ್ಲಿ ಕೆಲವು ಕೆಲಸಗಳು ಮಾಯವಾಗಿವೆ ಅಥವಾ ಗುರುತಿಸಲಾಗದಷ್ಟು ಬದಲಾಗಿವೆ. ಉದಾಹರಣೆಗೆ ಪ್ರತಿ ಕಂಪನಿಯಲ್ಲಿದ್ದ ದೈತ್ಯ ಇ–ಮೈಲ್ ಸರ್ವರುಗಳು ಮುಂತಾದ ಕೇಂದ್ರೀಕೃತ ವ್ಯವಸ್ಥೆಗಳು ಮಾಯವಾಗಿವೆ, ಎಂಬುದು ನಿಜ. ಆದರೆ ಇವು ಇಷ್ಟು ದೊಡ್ಡ ಪ್ರಮಾಣದ ಉದ್ಯೋಗ ನಾಶ ಆಗುವ ಮಟ್ಟಕ್ಕೆ ಬೆಳೆದಿಲ್ಲ. ಮಾತ್ರವಲ್ಲ, ಇಲ್ಲೂ ದೈತ್ಯ ಐಟಿ ಉದ್ಯಮ ಮತ್ತು ಕಂಪನಿಗಳು ಈ ಅಟೊಮೇಶನ್ ಮತ್ತಿತರ ತಂತ್ರಜ್ಞಾನ ಬೆಳವಣಿಗೆಗಳ ಬಗ್ಗೆ ಎಚ್ಚರವಾಗಿದ್ದು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಉದಾಹರಣೆಗೆ ಕೆಲವು ಅಟೊಮೇಶನ್ ಮತ್ತು ತಂತ್ರಜ್ಞಾನದ ಬೆಳವಣಿಗೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅದನ್ನು ಪ್ರಾಜೆಕ್ಟಿನಲ್ಲಿ ಬಳಸಬಹುದಿತ್ತು. ಒಟ್ಟಾರೆಯಾಗಿ ಹೇಳುವುದಾದರೆ ಇಲ್ಲೂ ಐಟಿ ಉದ್ಯಮ ಮತ್ತು ಕಂಪನಿಗಳು ತನ್ನ ಕರ್ತವ್ಯದಲ್ಲಿ ಎಡವಿವೆ. ಉದ್ಯೋಗಿಗಳನ್ನು ಅದಕ್ಕಾಗಿ ದೂರುತ್ತಿದೆ, ಬಲಿಪಶು ಮಾಡುತ್ತಿದೆ.

ಈ ಬಿಕ್ಕಟ್ಟಿನಲ್ಲಿ ಐಟಿ ಉದ್ಯಮಿಗಳ ಉದ್ಯಮದ ಪಾತ್ರ ಏನೂ ಇಲ್ಲವೇ?

ಈಗಾಗಲೇ ಹೇಳಿದ ಹಾಗೆ ಅಟೊಮೇಶನ್ ಮತ್ತಿತರ ತಂತ್ರಜ್ಞಾನ ಬೆಳವಣಿಗೆಗಳ ಬಗ್ಗೆ ಎಚ್ಚರವಾಗಿದ್ದು, ಆ ಬಗ್ಗೆ ಸ್ಪಷ್ಟ ಯೋಜನೆ ರೂಪಿಸಿ ಉದ್ಯೋಗಿಗಳು ಹೊಸ ತಂತ್ರಜ್ಞಾನ ಕರಗತ ಮಾಡುವಂತೆ ಮತ್ತು ಅಗತ್ಯ ಕೌಶಲ್ಯ ಬೆಳೆಸುವಂತೆ ಮರು–ತರಬೇತಿ ಮಾಡುವುದರಲ್ಲಿ ಐಟಿ ಉದ್ಯಮ ಮತ್ತು ಕಂಪನಿಗಳು ವಿಫಲವಾಗಿವೆ. ಈ ಬಿಕ್ಕಟ್ಟು ಮನಗಂಡ ಮೇಲೂ ಉದ್ಯಮವನ್ನು ರಕ್ಷಿಸಿ ಬೆಳೆಸಲು ಅದಕ್ಕೆ ತಕ್ಕ ದೂರಗಾಮಿ ಕ್ರಮಗಳನ್ನು ಕೈಗೊಳ್ಳುವ ಬದಲು, ಆ ಹೊತ್ತಿನ ಲಾಭ–ವಹಿವಾಟು ಶೇರು ಬೆಲೆ ಮಾತ್ರ ಪ್ರಧಾನವಾಗಿಸಿಕೊಂಡಿವೆ. ಹಲವು ಬಾರಿ ಬಿಕ್ಕಟ್ಟಿನ ನಿಜವಾದ ಕಾರಣಗಳನ್ನು ವಸ್ತುನಿಷ್ಠ ಕಾರಣಗಳ ಸರಿಯಾದ ಅನ್ವೇಷಣೆಯನ್ನೂ ಮಾಡುತ್ತಿಲ್ಲ. ವೆಚ್ಚ ಕಡಿತ ಮಾಡುವ ಬೇಕಾಬಿಟ್ಟಿ ಕುರುಡು ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

ಉದಾಹರಣೆಗೆ ಮಧ್ಯಮ ಹಂತದ (7–15 ವರ್ಷ ಅನುಭವದ) ತಂತ್ರಜ್ಞರು ಮತ್ತು ಮ್ಯಾನೇಜರುಗಳನ್ನು ವಜಾ ಮಾಡುತ್ತಿರುವುದನ್ನೇ ತೆಗೆದುಕೊಳ್ಳೋಣ. ಇವರನ್ನು ವಜಾ ಮಾಡುತ್ತಿರುವುದು ಏಕೆಂದರೆ ಅವರು ಸಾಕಷ್ಟು ಸಂಖ್ಯೆಯಲ್ಲಿದ್ದು ಸಾಕಷ್ಟು ಹೆಚ್ಚಿನ ಸಂಬಳ ಪಡೆ–ಯುತ್ತಿದ್ದಾರೆ ಅಷ್ಟೇ. ಇದು ಸರಿಯಲ್ಲ. ಏಕೆಂದರೆ ಈ ವಿಭಾಗದ ಹತ್ತಿರವೇ ಐಟಿ ಉದ್ಯಮಕ್ಕೆ ಅಗತ್ಯವಾದ “ಕ್ಷೇತ್ರ ಜ್ಞಾನ” (ಡೊಮೈನ್ ಎಕ್ಸ್ ಪರ್ಟೈಸ್) ಇರುವುದು. ಇಲ್ಲಿ “ಕ್ಷೇತ್ರ”(ಡೊಮೈನ್) ಎಂದ–ರೆ ಹಣಕಾಸು(ಬ್ಯಾಂಕಿಂಗ್/ಇನ್ಶುರೆನ್ಸ್), ಟ್ರಾನ್ಸಪೋರ್ಟ್(ಸಾರಿಗೆ), ಟೆಲಿಕಾಂ ಇತ್ಯಾದಿ. ಈ ಕ್ಷೇತ್ರಗಳಲ್ಲಿ ‘ಅಟೋಮೇಶನ್’ ಅಥವಾ ಇದ–ಕ್ಕೆ ಬೇಕಾದ ಹಾರ್ಡ್ ವೇರ್/ಸಾಫ್ಟ್ ವೇರ್ ಅಭಿವೃದ್ಧಿ ಪಡಿಸುವುದೇ ಐಟಿ ಉತ್ಪನ್ನ ಸೇವೆಗಳ ಮೂಲ ಉದ್ದೇಶ. ತಂತ್ರಜ್ಞಾನ ಮತ್ತು ಕೌಶಲ್ಯಗಳು ಬದಲಾದರೂ “ಕ್ಷೇತ್ರ ಜ್ಞಾನ” ಯಾವಾಗಲೂ ಪ್ರಸ್ತುತವಾಗಿ ಉಳಿಯುವಂತಹುದು. “ಕ್ಷೇತ್ರ”ದಲ್ಲಿ ಬದಲಾವಣೆಗಳು ಆದರೂ ಅದನ್ನು ಹಿಂದಿನ “ಕ್ಷೇತ್ರ ಜ್ಞಾನ” ಇದ್ದವರು ಅದನ್ನು ಬೇಗ ಗ್ರಹಿಸಬಲ್ಲರು. ಈ ಕಾರಣಕ್ಕಾಗಿ ಸದ್ಯಕ್ಕೆ ವೆಚ್ಚ ಕಡಿಮೆ ಮಾಡಲು ಮಧ್ಯಮ ಹಂತದ ತಂತ್ರಜ್ಞರು ಮತ್ತು ಮ್ಯಾನೇಜರುಗಳನ್ನು ವಜಾ ಮಾಡುತ್ತಿರುವುದು ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸಲಿದೆ.

ಐಟಿ ಉದ್ಯಮಿಗಳ ಮತ್ತು ಕಂಪನಿ ಮ್ಯಾನೇಜ್ ಮೆಂಟ್ ಗಳ ಈ ಕುರುಡು ಧೋರಣೆ ಹಿಂದೆ ಅವರ ಸ್ವಾರ್ಥವೂ ಅಡಗಿದೆ. ಉದ್ಯಮಿಗಳ ಮತ್ತು ಕಂಪನಿ ಉನ್ನತ ಮ್ಯಾನೇಜ್ ಮೆಂಟ್ ಸಿಬ್ಬಂದಿಗೆ (ಇವರಿಗೂ ದೊಡ್ಡ ಪ್ರಮಾಣದಲ್ಲಿ ಶೇರು ಕೊಡಲಾಗುತ್ತದೆ) ಶೇರು ಬೆಲೆಯ ಬಗ್ಗೆ ಹೆಚ್ಚು ಒಲವು. ಶೇರು ಬೆಲೆ ಹೆಚ್ಚಾಗುವುದು ಬೀಳದಿರುವುದು ಅವರ ಹಿತಾಸಕ್ತಿಯನ್ನು ಕಾಪಾಡುವ ಕ್ರಮ. ಲಾಭದ ಪ್ರಮಾಣ ಕಡಿಮೆಯಾಗದಂತೆ ಮತ್ತು ಆ ಮೂಲಕ ಶೇರು ಬೆಲೆ ಹೆಚ್ಚಾಗುವಂತೆ ಬೀಳದಿರುವಂತೆ ಮಾಡಲು ಉದ್ಯೋಗಿಗಳ ಕಡಿತ ಸೇರಿದಂತೆ ವೆಚ್ಚ ಕಡಿತ ಮಾಡುವುದು ಶೇರು ಮಾರುಕಟ್ಟೆಗೆ ಸುಲಭವಾಗಿ ಅರ್ಥವಾಗುವ ‘ಜನಪ್ರಿಯ’ ಕ್ರಮ. ಉದ್ಯೋಗಿಗಳ ಕೌಶಲ್ಯದ ಅಭಾವ, ತಂತ್ರಜ್ಞಾನ ಮತ್ತು ಅಟೋಮೇಶನ್ ಗಳ ಪರಿಣಾಮಗಳ ಬಗ್ಗೆ ಅತಿಶಯೋಕ್ತಿ ಇತ್ಯಾದಿ ಸಹ ಒಂದು ಕಡೆ ಉದ್ಯೋಗಿಗಳ ಕಡಿತ ಅಗತ್ಯವೆಂಬುದನ್ನು ಶೇರುದಾರರಿಗೂ, ಸಾರ್ವಜನಿಕರಿಗೂ, ಉದ್ಯೋಗಿಗಳಿಗೂ ಮನಗಾಣಿಸುವ ಪ್ರಯತ್ನ. ಇನ್ನೊಂದು ಕಡೆ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳುವ, ಆಂತರಿಕ ನ್ಯೂನತೆಗಳೂ ಏನೂ ಇಲ್ಲ. ಎಲ್ಲಾ ಬಾಹ್ಯ ಕಾರಣಗಳು ಎಂದು ಒಪ್ಪಿಸುವ ಪ್ರಯತ್ನ.

ಐಟಿ ಉದ್ಯಮಿಗಳ ಮತ್ತು ಕಂಪನಿ ಮ್ಯಾನೇಜ್ ಮೆಂಟ್ ಗಳ ಈ ಸ್ವಾರ್ಥ ಇನ್ನೂ ಹಲವು ರೂಪಗಳಲ್ಲಿ ಬಯಲಾಗಿದೆ. ಇತ್ತೀಚೆಗೆ ಬಿಕ್ಕಟ್ಟು ತೀವ್ರವಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತಿದ್ದಂತೆ ಒಂದು ಕಡೆ ಹೆಚ್ಚಿನ ಎಲ್ಲಾ ದೊಡ್ಡ ಐಟಿ ಕಂಪನಿಗಳು (ಇನ್ಫೊಸಿಸ್ ಬಿಟ್ಟು) ಶೇರು

ಪುಟ 10 ಕ್ಕೆ

1 ರಿಂದ 2 ಲಕ್ಷ ಐಟಿ ಉದ್ಯೋಗಿಗಳ ವಜಾ, ಮುಂದೇನು?..........

ಪುಟ 9 ರಿಂದ

'ಮರು–ಕೊಳ್ಳುವಿಕೆ' ಪ್ರಕ್ರಿಯೆ ಆರಂಭಿಸಿವೆ. ಇದಕ್ಕೆ ತಮ್ಮ ಅಪಾರ "ನಗದು ರಾಶಿ" (ಕ್ಯಾಶ್ ರಿಸರ್ವ್) ಬಳಸುತ್ತಿವೆ. ಇನ್ನೊಂದು ಕಡೆ ದೊಡ್ಡ ಪ್ರಮಾಣದ ಶೇರು ಇರುವ ಇನ್ಫೋಸಿಸ್ ಮೂಲ ಪ್ರವರ್ತಕರು ತಮ್ಮ ಶೇರುಗಳನ್ನು ಮಾರುತ್ತಿದ್ದಾರೆ ಎಂಬ ವದಂತಿ ಹರಡಿದೆ. ಇವೆರಡೂ ಕ್ರಮಗಳು ಉದ್ಯಮಿಗಳ ಮತ್ತು ಉನ್ನತ ಕಂಪನಿ ಮ್ಯಾನೇಜ್ ಮೆಂಟ್ ಸದಸ್ಯರ ಶೇರಗಳ ದೊಡ್ಡ ಭಾಗವನ್ನು ನಗದೀಕರಣಗೊಳಿಸಿದಂತೆ. ಮಾತ್ರವಲ್ಲ, ಬಿಕ್ಕಟ್ಟು ಗೋಚರಿಸುವಾಗ ಸಾಮಾನ್ಯವಾಗಿ "ನಗದು ರಾಶಿ" (ಕ್ಯಾಶ್ ರಿಸರ್ವ್)ಯನ್ನು ಅಪಾಯಕಾರಿ ನಷ್ಟದ ಪರಿಸ್ಥಿತಿಯಿಂದ ಕಂಪನಿಯನ್ನು ಕಾಪಾಡಲು ಕಾಪಿಡಬೇಕು. ಬದಲಾಗಿ ತಮ್ಮ ಶೇರುಗಳ ಅಪಮೌಲ್ಯದ ರಿಸ್ಕ್ ಕಮ್ಮಿ ಮಾಡಿಕೊಳ್ಳಲು ಬಯಸುವುದು, ಸ್ವಾರ್ಥದ ಪರಮಾವಧಿ. ತಮ್ಮ ಹಿತಾಸಕ್ತಿಯನ್ನು ಉದ್ಯೋಗಿಗಳ ಮತ್ತು ಕಂಪನಿಯ ಹಿತಾಸಕ್ತಿಗಿಂತ ಹೆಚ್ಚಾಗಿ ಕಾಣುವ ಇವರು ಐಟಿ ಕ್ಷೇತ್ರದ ಸಮಸ್ಯೆಗಳನ್ನು ಬಿಕ್ಕಟ್ಟಾಗಿಸಿ ಉದ್ಯೋಗಿಗಳ ಸಾರ್ವಜನಿಕರ ಸರಕಾರಕ್ಕೆ ದಾಟಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಐಟಿ ಉದ್ಯಮದ ಆಂತರಿಕ ನ್ಯೂನತೆಗಳು ಇಲ್ಲವೇ?

ಯಾವ ಜಾಗತಿಕ ಬೆಳವಣಿಗೆಗಳಿಗೂ ಬಿಕ್ಕಟ್ಟಿಗೆ ಜಗ್ಗದ ಜಗತ್ತಿನ ಐಟಿ ಸೂಪರ್ ಪವರ್ ಆದ ಭಾರತದ ಹೆಮ್ಮೆಯ ಐಟಿ ಉದ್ಯಮದ ಹೆಗ್ಗಳಿಕೆ ಏನಾಯಿತು? ಯಾಕೆ ಈ ಬಿಕ್ಕಟ್ಟು ಐಟಿ ಉದ್ಯಮವನ್ನು ನಡುಗಿಸಿದೆ? ಬರಿಯ ಹೊರಗಣ ಬದಲಾವಣೆಗಳ ಕಾರಣ ಮಾತ್ರವೇ ಈ ಬಿಕ್ಕಟ್ಟಿಗೆ ಕಾರಣವೇ? ಐಟಿ ಉದ್ಯಮದ ಆಂತರಿಕ ನ್ಯೂನತೆಗಳು ಇಲ್ಲವೇ? 2001 ಮತ್ತು 2008ರ ಬಿಕ್ಕಟ್ಟನ್ನು ನಿಭಾಯಿಸಿದ್ದು ಮಾತ್ರವಲ್ಲ ಅದರ ನಂತರವೂ ಬೆಳೆಯುತ್ತಾ ಹೋದ ಭಾರತದ ಐಟಿ ಉದ್ಯಮ ಒಂದು ಹೆಗ್ಗಳಿಕೆಯನ್ನು ಗಳಿಸಿತ್ತು. ಆದರೆ ಅದು ಜಾಗತಿಕರಣದ ಆ ಅವಧಿಯಲ್ಲಿರುವ ಅವಕಾಶಗಳ ಉಪಯೋಗಕ್ಕೆ ಮಾತ್ರ ಸಾಕಾಗುವ ಸೀಮಿತ ಶಕ್ತಿಯನ್ನು ಹೊಂದಿತ್ತು. ಆ ಅವಕಾಶಗಳನ್ನು ಪೂರ್ಣವಾಗಿ ಉಪಯೋಗಿಸಿದೆ. ಏನದು ಅವಕಾಶಗಳು ಅಮೆರಿಕನ್ ಮತ್ತಿತರ ದೇಶದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಸಾಫ್ಟ್ ವೇರ್ ಅಗತ್ಯಗಳು ಆಸ್ಫೋಟಗೊಂಡಂತೆ ಸಾಫ್ಟ್ ವೇರ್ ತಯಾರಿಗೆ ಅವರ ಬಳಿ ಸಾಕಷ್ಟು ಇಂಜಿನಿಯರುಗಳು ಇರಲಿಲ್ಲ. ಆದ್ದರಿಂದ ಸಾಫ್ಟ್ ವೇರ್ ತಯಾರಿಯ ಕೆಲಸದ ಭಾಗಗಳನ್ನು ಕಡಿಮೆ ವೆಚ್ಚದಲ್ಲಿ ಮಾಡುವ ದೊಡ್ಡ ಪ್ರಮಾಣದ ಇಂಗ್ಲಿಷ್ ಬಲ್ಲ ಇಂಜಿನಿಯರ್ ಸಿಬ್ಬಂದಿ ಬೇಕಾಗಿತ್ತು. ಆ ಅಗತ್ಯಗಳನ್ನು ಭಾರತದ ಐಟಿ ಉದ್ಯಮ ಪೂರೈಸಿತು.

ಆದರೆ ಭಾರತದ ಐಟಿ ಉದ್ಯಮ ನಿಜವಾಗಿಯೂ ಎಂದೂ ಸೂಪರ್ ಪವರ್ ಆಗಿರಲಿಲ್ಲ. ಐಸಿಟಿ (ಇನ್ ಫರ್ಮೇಶನ್–ಕಮ್ಯುನಿಕೇಶನ್ ಟೆಕ್ನಾಲಜೀಸ್) ಒಟ್ಟಾಗಿ ತೆಗೆದುಕೊಂಡರೆ ಅದರ ಪವರ್ ಬಹಳ ಸೀಮಿತವಾಗಿತ್ತು. ಉದಾಹರಣೆಗೆ ಜಾಗತಿಕ ಐಸಿಟಿ ಕ್ಷೇತ್ರದ ಒಟ್ಟು ವಹಿವಾಟಿನಲ್ಲಿ ದೊಡ್ಡ ಪಾತ್ರ ವಹಿಸುವ ಹಾರ್ಡ್ ವೇರ್ ನಲ್ಲಿ ಭಾರತದ ಐಟಿ ಉದ್ಯಮದ ಪಾತ್ರ ಜೀರೋ ಆಗಿ–ತ್ತು. ಅದೇ ರೀತಿ ಸಾಫ್ಟ್ ವೇರ್ ಉತ್ಪನ್ನಗಳಲ್ಲೂ ಭಾರತದ ಐಟಿ ಉದ್ಯಮ ಬೋರ್ಡಿನಲ್ಲೇ ಇರಲಿಲ್ಲ. ಸಾಫ್ಟ್ ವೇರ್ ಉತ್ಪನ್ನದ ಉದಾಹರಣೆಗಳೆಂದರೆ "ಮೈಕ್ರೋಸಾಫ್ಟ್ ವರ್ಡ್". ಇಡೀ ಕಂಪನಿಯ ವಹಿವಾಟು ನಿರ್ವಹಣೆಗೆ ಬೇಕಾದ ಇ.ಆರ್.ಪಿ. ಸಾಫ್ಟ್ ವೇರ್. ಇಂತಹ ಇಡೀ ಉತ್ಪನ್ನಗಳನ್ನು ಭಾಖತದ ಐಟಿ ಉದ್ಯಮ ತಯಾರಿಸಲೇ ಇಲ್ಲ. ಉತ್ಪನ್ನಗಳಲ್ಲಿ ಒಂದು ಕಡೆ ಸಂಕೀರ್ಣತೆ ಹೆಚ್ಚಿದ್ದರೆ, ಇನ್ನೊಂದು ಕಡೆ ಉತ್ಪಾದಕತೆನೂ ಲಾಭನೂ ಹೆಚ್ಚಿರುತ್ತದೆ. ಏಕೆಂದರೆ ಉತ್ಪನ್ನದ ಹಲವು ಕಾಪಿಗಳ ಉತ್ಪಾದನೆಗೆ ಹೆಚ್ಚಿನ ಖರ್ಚು ಇಲ್ಲ. ಭಾರತದ ಐಟಿ ಉದ್ಯಮ ಸಾಫ್ಟ್ ವೇರ್ ಸೇವೆಗಳಿಗೆ ಮಾತ್ರ ಸೀಮಿತವಾಗಿತ್ತು. ರಫ್ತು–ಆಧಾರಿತ ಐಟಿ ಉದ್ಯಮದ ಬೆಳವಣಿಗೆ ಆಗಿನ್ನೂ ಬೆಳೆಯಲಾರಂಭಿಸಿದ್ದ ಹಾರ್ಡ್ ವೇರ್ ಮತ್ತು ಸಾಫ್ಟ್ ವೇರ್ ಉತ್ಪನ್ನಗಳ ಉದ್ಯಮಕ್ಕೆ ಏಟು ಕೊಟ್ಟಿತು. ಬಂಡವಾಳ, ಉದ್ಯೋಗಿಗಳನ್ನು ಸಾಫ್ಟ್ ವೇರ್ ಸೇವಾ ಉದ್ಯಮ ಕಸಿದುಕೊಂಡಿತು. ಟೆಲಿಕಾಂ ಮುಂತಾದ ಇತರ ಇಂಜಿನಿಯರಿಂಗ್ ಉದ್ಯಮಗಳಿಗೂ ಉದ್ಯೋಗಿಗಳನ್ನು ಕಸಿದುಕೊಳ್ಳುವ ಮೂಲಕ ಏಟು ಕೊಟ್ಟಿತು.

ಅದು ರಫ್ತು ಮತ್ತು ಉದ್ಯೋಗ ಸೃಷ್ಟಿ ಮಾಡಿತು. ಹಣ, ವಿದೇಶಿ ವಿನಿಮಯ ಗಳಿಸಿತು ನಿಜ. ಆದರೆ ಒಟ್ಟಾರೆ ದೇಶದ ದೃಷ್ಟಿಯಿಂದ ಹೋಗಲಿ, ತನ್ನ ಅಗತ್ಯಗಳಿಗೆ ಬೇಕಾದ ಹಾರ್ಡ್‌ವೇರ್ ಆಮದಿಗೆ ಬೇಕಾದಷ್ಟು ವಿದೇಶ ವಿನಿಮಯವನ್ನೂ ಸಂಘಾದಿಸಲಿಲ್ಲ. ಇನ್ನು ಭಾರತದ ಇಡೀ ಐಸಿಟಿ ಅಗತ್ಯಗಳನ್ನು ಪೂರೈಸುವುದು ದೂರವೇ ಉಳಿಯಿತು. ಭಾರತದ ಒಟ್ಟು ಐಸಿಟಿ ಹಾರ್ಡ್ ವೇರ್ ಆಮದಿಗೆ ಬೇಕಾದ ವಿದೇಶಿ ವಿನಿಮಯದ ಶೇ. 3–4 ಸಹ ಐಟಿ ಉದ್ಯಮ ಸಂಪಾದಿಸುತ್ತಿಲ್ಲ. ಭಾರತದ ದೊಡ್ಡ ಐಸಿಟಿ ಅಗತ್ಯಗಳನ್ನು ಪೂರೈಸಲು ಆಮದಿನ ಮೇಲೆನೇ ಅವಲಂಬಿಸಬೇಕಾಗಿತ್ತು. ದೊಡ್ಡ ಐಸಿಟಿ ಅಗತ್ಯಗಳನ್ನು ಪೂರೈಸುವ ಮೂಲಕ ಸಾಫ್ಟ್ ವೇರ್ ಉತ್ಪನ್ನಗಳ ಅನುಭವ ಪಡೆಯುವ ತಂತ್ರಜ್ಞಾನ ಬೆಳೆಸುವ ಅವಕಾಶಗಳನ್ನು ಬಳಸಲೇ ಇಲ್ಲ.

ಎಚ್.1 ಬಿ ವೀಸಾಗಳು ಭಾರತೀಯ ಐಟಿ ಉದ್ಯಮದ ವಹಿವಾಟಿನ ಮಾದರಿಯಲ್ಲಿ ದೊಡ್ಡ ಪಾತ್ರ ವಹಿಸುತ್ತವೆ. ಅವುಗಳ ಸಂಖ್ಯೆ ಮತ್ತು ಇಂತಹ ಉದ್ಯೋಗಿಗಳ ವೆಚ್ಚ ಇಮ್ಮಡಿಯಾಗುವುದು ಐಟಿ ಉದ್ಯಮವನ್ನು ನಡುಗಿಸಿದೆ. ಅಮೆರಿಕನ್ ಸರಕಾರವನ್ನು ಸಂಪ್ರೀತಗೊಳಿಸಲು ಅಮೆರಿಕದಲ್ಲಿ ಇರುವ ಕೆಲಸಗಳಿಗೆ ಅಮೆರಿಕನ್ನರನ್ನು ತೆಗೆದುಕೊಳ್ಳಲು ಆರಂಭಿಸಿದೆ.

ಬಿಕ್ಕಟ್ಟಿನ ಪರಿಣಾಮ ಏನು? ಏನು ಮಾಡಬಹುದು?

ಈಗ ಎಲ್ಲಾ ಕ್ಷೇತ್ರಗಳಲ್ಲಿ ಬೆಳವಣಿಗೆ ಸ್ಥಗಿತವಾಗಿದ್ದು ಉದ್ಯೋಗ ಸೃಷ್ಟಿ ಕುಂಠಿತವಗಿರುವ ಈಗಿನ ಸಂದರ್ಭದಲ್ಲಿ ಸ್ವಲ್ಪವಾದರೂ ಉದ್ಯೋಗ ಸೃಷ್ಟಿ ಮಾಡುತ್ತಿದ್ದ ಐಟಿ ಕ್ಷೇತ್ರದಲ್ಲಿ ಕಡಿತ ಗಂಭೀರ ಆಕ್ರೋಶ ಉಂಟು ಮಾಡುತ್ತದೆ. ಐಟಿ ಕ್ಷೇತ್ರದ ಉತ್ಕರ್ಷದ ಮೇಲೆ ಆಧಾರಿತವಾಗಿದ್ದ ಬೆಂಬಲ ಸೇವೆಗಳಾದ ಸಾರಿಗೆ, ರೀಯಲ್ ಎಸ್ಟೇಟ್, ಹೊಟೆಲು, ವಾಹನ ಇತ್ಯಾದಿ ಕ್ಷೇತ್ರಗಳ ಮೇಲೆ ದುಷ್ಪರಿಣಾಮ ಆಗಬಹುದು. ಐಟಿ ಕ್ಷೇತ್ರದ ಮೇಲೆ ಆಧಾರಿತವಾಗಿದ್ದ ಇಂಜಿನೀಯರಿಂಗ್ ಕಾಲೇಜುಗಳ ಜಾಲ ಮತ್ತು ಅದರ ಮೇಲೆ ಆಧಾರಿತವಾಗಿದ್ದ ಉದ್ಯೋಗ ಸೇವೆಗಳ ಮೇಲೆ ಪರಿಣಾಮ ಬೀರಬಹುದು. ಐಟಿ ಕ್ಷೇತ್ರ ಕೆಳ ಮಧ್ಯಮ ವರ್ಗದವರಿಗೆ ಇಂಜಿನೀಯರಿಂಗ್ ಶಿಕ್ಷಣದ ಮೂಲಕ ಸಾಮಾಜಿಕ–ಆರ್ಥಿಕವಾಗಿ ಮೇಲೇಳಲು ಸಹಾಯಕವಾಗಿತ್ತು. ಅದರ ಮೇಲೆ ಪರೀಣಾಮವಂತೂ ಆಗಲಿದೆ.

ಐಟಿ ಉದ್ಯಮ ಎರಡುವರೆ ದಶಕಗಳ ಕಾಲ ಉತ್ಕರ್ಷದಲ್ಲಿ ಕೈಜೋಡಿಸಿದ ಉದ್ಯೋಗಿಗಳನ್ನು ಕೈಬಿಡಬಾರದು. ಮೇಲೆ ಹೇಳಿದ ಆಂತರಿಕ ನ್ಯೂನತೆಗಳನ್ನು ಸರಿಪಡಿಸಿಕೊಂಡು ಬಿಕ್ಕಟ್ಟು ಎದುರಿಸಲು ಸಜ್ಜಾಗಬೇಕು. ಸರಕಾರ ಉದ್ಯೋಗಿಗಳ ಸಾಮೂಹಿಕ ವಜಾಕ್ಕೆ ಅವಕಾಶ ಕೊಡಬಾರದು. ಹಾರ್ಡ್ ವೇರ್ ಮತ್ತು ಸಾಫ್ಟ್ ವೇರ್ ಉತ್ಪನ್ನಗಳ ಉದ್ಯಮಕ್ಕೆ ಉತ್ತೇಜನ ಕೊಡುವ ನೀತಿಗಳನ್ನು ರೂಪಿಸಬೇಕು. ದೇಶದ ದೊಡ್ಡ ಐಸಿಟಿ ಅಗತ್ಯಗಳನ್ನು ನಮ್ಮ ಐಟಿ ಉದ್ಯಮ ಪೂರೈಸಿ ಆಮದು ಅಗತ್ಯ ಬೀಳದಿರುವ ಪರಿಸ್ಥಿತಿ ಸರಕಾರ ನಿರ್ಮಿಸಬೇಕು.

ಐಟಿ ಉದ್ಯೋಗಿಗಳು ಸಾಮೂಹಿಕ ವಜಾದ ವಿರುದ್ಧ ವ್ಯಾಪಕ ಸಂಘಟಿತ ಪ್ರತಿರೋಧ ತೋರಬೇಕು. ಈಗಾಗಲೇ ಬೆಂಗಳೂರಿನಲ್ಲಿ ಐಟಿಇಸಿ, ಚೆನ್ನೈ ಹೈದರಾಬಾದ್ ದೆಹಲಿಗಳಲ್ಲಿ ಇಂತಹುದೇ ಸಂಘಟನೆಗಳು ಐಟಿ ಉದ್ಯೋಗಿಗಳ ಯೂನಿಯನ್ ಮಾಡಲು ಹೊರಟಿವೆ. ತಾವು ಕಾರ್ಮಿಕರಲ್ಲ. ತಮಗೆ ಯೂನಿಯನ್ ಅಗತ್ಯ ಇಲ್ಲ ಎಂಬ ಧೋರಣೆ ಬಿಟ್ಟು ಸಾಮೂಹಿಕ ಮತ್ತು ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಐಟಿ ಉದ್ಯಮದ ಸಮಸ್ಯೆಗಳು, ಬಿಕ್ಕಟ್ಟಿನ ಸ್ವರೂಪದ ಬಗ್ಗೆ ಅವರು ಅಧ್ಯಯನ ಮಾಡಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಬಿಕ್ಕಟ್ಟಿನ ಬಗ್ಗೆ ಐಟಿ ಉದ್ಯಮದ ಸರಕಾರದ ತಪ್ಪು ಮಾಹಿತಿ ಸುಳ್ಳುಗಳನ್ನು ಬಯಲಿಗೆಳೆಯಬೇಕು. ಐಟಿ ಉದ್ಯೋಗಿಗಳಿಗೆ ಸಂಘಟಿತರಾಗಲು ಕೇಂದ್ರೀಯ ಟ್ರೇಡ್ ಯೂನಿಯನುಗಳು ಸಹಾಯ ಮಾಡಲು ಮುಂದಾಗಬೇಕು. ಕೇಂದ್ರೀಯ ಟ್ರೇಡ್ ಯೂನಿಯನುಗಳು ಐಟಿ ಬಿಕ್ಕಟ್ಟಿನ ದುಷ್ಪರಿಣಾಮಗಳನ್ನು ಐಟಿ ಉದ್ಯೋಗಿಗಳ ಮೇಲೆ ವರ್ಗಾಯಿಸದಂತೆ ಸರಕಾರ ಮತ್ತು ಐಟಿ ಉದ್ಯಮದ ಮೇಲೆ ಸಾರ್ವಜನಿಕ ಒತ್ತಡ ತರಬೇಕು. ■

ಹಿಂದೂ ಸಾಮಾಜಿಕ ವ್ಯವಸ್ಥೆಯ ವಿಶಿಷ್ಟ.............

ಪುಟ 6 ರಿಂದ

ಆದರೆ ಒಂದು ಸಾಮಾಜಿಕ ವ್ಯವಸ್ಥೆಯನ್ನೇ ಧರ್ಮದ ಮೂಲಕ ಪವಿತ್ರವೆಂದು ನಿರ್ಧರಿಸುವ ನಿದರ್ಶನ ಬೇರೆಲ್ಲೂ ಕಾಣಸಿಗುವುದಿಲ್ಲ. ಬೇರೆ ಬೇರೆ ದೇಶಗಳಲ್ಲಿ ಇರುವ ಪ್ರಜಾಪ್ರಭುತ್ವವಾಗಲಿ, ನಾಜಿ ಸಮಾಜವಾಗಲಿ, ಬೋಲ್ಶೆವಿಸ್ಟಾಗಲಿ ಎಲ್ಲವೂ ಸಾಮಾಜಿಕವಾಗಿ ಸಂಘಟಿತವಾದವುಗಳು. ಯಾವುವೂ ಧಾರ್ಮಿಕವಾಗಿ ಪವಿತ್ರವೆಂದು ಪರಿಗಣಿತವಾಗಿಲ್ಲ. ಆದರೆ ಇಂಡಿಯಾದಲ್ಲಿ ಮಾತ್ರ ಹಿಂದೂ ಸಾಮಾಜಿಕ ವ್ಯವಸ್ಥೆಗೆ ಮಾತ್ರ ಧಾರ್ಮಿಕ ಪಾವಿತ್ರ್ಯತೆ ಅಂಟಿಕೊಂಡಿದೆ. ಪ್ರಾಚೀನ ಈಜಿಪ್ಟ್, ಪರ್ಷಿಯಾ, ರೋಮ್, ಗ್ರೀಸ್ ಮುಂತಾದ ದೇಶಗಳಲ್ಲಿನ ಅವರದೇ ಆದ ಸಾಮಾಜಿಕ ವ್ಯವಸ್ಥೆಗಳಲ್ಲಿ ವಿವಿಧ ಸಾಮಾಜಿಕ ಅಂತಸ್ತುಗಳಿಗೆ ಸೇರಿದ ಜನರಿದ್ದರು.

ಆದರೆ ಯಾರ ವೃತ್ತಿಗೂ ಧಾರ್ಮಿಕ ಪಾವಿತ್ರತೆ ಇರಲಿಲ್ಲ. ಅವೆಲ್ಲಾ ಸಾಮಾಜಿಕವಾಗಿದ್ದವು. ಯಾವ ದೇಶದಲ್ಲೂ ವೃತ್ತಿ, ಅಂದರೆ ಜೀವನಯಾಪನೆಗಾಗಿ ಜನರು ಕೈಗೊಳ್ಳುವ ಉದ್ಯೋಗಕ್ಕೆ ಪಾವಿತ್ರ್ಯತೆಯ ಸೋಂಕು ಇಲ್ಲ. ಆರ್ಥಿಕ ಚಟುವಟಿಕೆಗಳು ಧರ್ಮದ ಪರಿಧಿಯ ಆಚೆಗೇ ಇರುವಂಥವು. ಬೇಟೆಗಾರಿಕೆಯಾಗಲಿ, ಪಶುಸಂಗೋಪನೆಯಾಗಲಿ, ವ್ಯವಸಾಯವಾಗಲಿ ಧರ್ಮವಿಲ್ಲದೆ ಇಲ್ಲ. ಆದರೆ ಅವು ಯಾವುವೂ ಧಾರ್ಮಿಕ ಪಾವಿತ್ರ್ಯತೆಯನ್ನು ಹೊಂದಿಲ್ಲ. ಊಳಿಗಮಾನ್ಯ ಪದ್ಧತಿಯಲ್ಲಿ ಅದರದೇ ಆದ ಪದವಿ, ಅಧಿಕಾರ, ಅಂತಸ್ತುಗಳಿದ್ದರೂ, ಯಜಮಾನ, ಆಳು, ಯೋಧ, ನಾಯಕ, ಖಳನಾಯಕರಿದ್ದರೂ ಅವರ್ಯಾರೂ ಮತ್ತು ಅವರು ಮಾಡುವ ಯಾವ ಕೆಲಸವೂ ಧಾರ್ಮಿಕವಾಗಿ ಪವಿತ್ರ ಅಥವಾ ಅಪವಿತ್ರವಾಗಿರಲಿಲ್ಲ. ಕೇವಲ ಸಾಮಾಜಿಕವಾಗಿದ್ದವು. ಆರ್ಥಿಕವಾಗಿದ್ದವು.

ಇಡೀ ಪ್ರಪಂಚದಲ್ಲಿ ಹಿಂದೂಗಳು ಮಾತ್ರ ತಮ್ಮ ಸಾಮಾಜಿಕ ವ್ಯವಸ್ಥೆಗೆ–ಮನುಷ್ಯ ಮನುಷ್ಯರ ನಡುವಿನ ಸಂಬಂಧಕ್ಕೆ ಧಾರ್ಮಿಕತೆಯನ್ನು ಅಂಟಿಸಿ ಪವಿತ್ರ, ಅನಂತ ಮತ್ತು ಬದಲಾವಣೆಗೆ ಒಳಪಡದಂಥ ವ್ಯವಸ್ಥೆಯನ್ನಾಗಿಸಿದ್ದಾರೆ. ಇಡೀ ಪ್ರಪಂಚದಲ್ಲಿ ಹಿಂದೂಗಳು ಮಾತ್ರ ತಮ್ಮ ಆರ್ಥಿಕ ವ್ಯವಸ್ಥೆಗೆ–ವಿವಿಧ ಕೆಲಸಗಳನ್ನು ಮಾಡುವ ಜನರ ನಡುವಿನ ಸಂಬಂಧಗಳಿಗೆ ಧರ್ಮವನ್ನು ಜೋಡಿಸಿ ಕೆಲಸವನ್ನು ಪವಿತ್ರ, ಅನಂತ ಮತ್ತು ಬದಲಾವಣೆಗೆ ಒಳಪಡದಂಥ ವ್ಯವಸ್ಥೆಯನ್ನಾಗಿಸಿದ್ದಾರೆ.

ಹೀಗಾಗಿ, ಹಿಂದೂಗಳು ಒಂದು ಪವಿತ್ರ ಧಾರ್ಮಿಕ ಸಂಕೇತ ವ್ಯವಸ್ಥೆಯನ್ನು ಹೊಂದಿದ ಜನ ಎಂದು ಮಾತ್ರ ಹೇಳಿದರೆ ಸಾಲದು. ಹಾಗೆ ನೋಡಿದರೆ, ಕ್ರೈಸ್ತ, ಯಹೂದಿ, ಮುಸಲ್ಮಾನ ಮುಂತಾದ ಎಲ್ಲ ಧರ್ಮಗಳ ಜನರಿಗೂ ಅವರವರದೇ ಆದ ದಾರ್ಮಿಕ ಸಂಕೇತಗಳ ವ್ಯವಸ್ಥೆ ಇದೆ. ಆದರೆ ಅವರು ತಮ್ಮ ಧಾರ್ಮಿಕ ನಂಬಿಕೆಯನ್ನು ಮಾತ್ರ ಪವಿತ್ರವೆಂದು ಪರಿಗಣಿಸುತ್ತಾರೆಯೇ ಹೊರತು ಹಿಂದೂಗಳು ಮಾಡುವಂತೆ ಅವರ ಇಡೀ ಸಾಮಾಜಿಕ ವ್ಯವಸ್ಥೆಗೇ, ಮನುಷ್ಯ–ಮನುಷ್ಯರ ನಡುವಿನ ಸಂಬಂಧ, ವ್ಯವಹಾರಕ್ಕೇ ಪಾವಿತ್ರತೆಯನ್ನು ಅಂಟಿಸುವುದಿಲ್ಲ. ಈ ವಿಷಯದಲ್ಲಿ ಹಿಂದೂಗಳಂಥ ಜನ ಇಡೀ ಪ್ರಪಂಚದಲ್ಲೇ ಯಾರೂ ಇಲ್ಲ. ಹಿಂದೂಗಳ ಈ ಅಸಾಧಾರಣ ವಿಶಿಷ್ಟತೆಯೇ ಹಿಂದೂ ಧರ್ಮವು ಕಾಲದ ಹೊಡೆತಗಳನ್ನು, ವಿವಿಧ ಆಕ್ರಮಣಕಾರರ ದಾಳಿಗಳನ್ನು ಮೀರಿ ಉಳಿದುಕೊಳ್ಳುವಂತೆ ಮಾಡಿದೆ.

ಹಿಂದೂ ಧರ್ಮದ ಈ ವಿವರಣೆಯನ್ನು ಒಬ್ಬ ಕಟ್ಟಾ ಹಿಂದೂ ಸಂಪ್ರದಾಯವಾದಿಯು ಸರಿಯಾದ ವಿವರಣೆಯೆಂದು ಒಪ್ಪಿಕೊಳ್ಳುತ್ತಾನೆ. ಸುಧಾರಣಾವಾದಿ ಮಾತ್ರ ಒಪ್ಪಿಕೊಳ್ಳಲು ಹಿಂಜರಿಯಬಹುದು. ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಇದೆಲ್ಲಾ ಗತಕಾಲದ ವಿವರಣೆಯಾಗಿಬಿಡುತ್ತದೆ ಎಂದು ಆತ ಹೇಳಬಹುದು. ಆದರೆ ಅದು ನಿಜವಲ್ಲ. ಇಲ್ಲಿ ಮರೆಯಬಾರದ ಸಂಗತಿ ಏನೆಂದರೆ ಎಷ್ಟೋ ಧಾರ್ಮಿಕ ಸಂಸ್ಥೆಗಳು ನಂಬಿಕೆಗಳ ಸ್ಥಿತಿಗೆ ಇಳಿದು ಅವನತಿ ಹೊಂದಿದಮೇಲೂ ಅನೇಕ ವೇಳೆ ಮುಂದುವರೆಯುತ್ತವೆ. ಹಾಗೆ ಮುಂದುವರೆಯಲಿ, ಇಲ್ಲದಿರಲಿ, ಹಳೆಯ ಚಾಳಿಗಳಾಗಿ ಜೀವಂತವಾಗಿರುತ್ತವೆ. ಹಿಂದೂ ಸಾಮಾಜಿಕ ವ್ಯವಸ್ಥೆಯು ಹಿಂದೂಗಳ ಚಾಳಿಯಾಗಿಬಿಟ್ಟಿದೆ. ಹೀಗಾಗಿ ಈಗಲೂ ಜೀವಂತವಾಗಿದೆ. ಇದನ್ನು ಯಾರೂ ಅಲ್ಲಗೆಳೆಯಲಾರರು. ●



ಭಾರತದ ಕಟ್ಟಡ ಮತ್ತು ನಿರ್ಮಾಣ ಉದ್ಯಮ ಮತ್ತು ಕಾರ್ಮಿಕ ಪರಿಸ್ಥಿತಿ

ಜುಲೈ 2–3ರಂದು ಕುಂದಾಪುರದಲ್ಲಿ ನಡೆಯಲಿರುವ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಫೆಡರೇಶನಿನ 3ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ, ಭಾರತದ ಕಟ್ಟಡ ಮತ್ತು ನಿರ್ಮಾಣ ಉದ್ಯಮ ಮತ್ತು ಕಾರ್ಮಿಕ ಪರಿಸ್ಥಿತಿ ಬಗ್ಗೆ ವಿಶೇಷ ಲೇಖನ

ಮಹಾಂತೇಶ್ ಕೆ.

ಕಟ್ಟಡ ಮತ್ತು ನಿರ್ಮಾಣ ಉದ್ಯಮವು ನಮ್ಮ ದೇಶದ ಕೃಷಿ ರಂಗವನ್ನು ಬಿಟ್ಟರೇ ಅತಿ ಹೆಚ್ಚು ಉದ್ಯೋಗವಕಾಶ ಸೃಷ್ಟಿಸುವ ಎರಡನೇ ಅತಿ ದೊಡ್ಡ ಕ್ಷೇತ್ರವಾಗಿದೆ. ಭಾರತದಲ್ಲಿ ಸದ್ಯ 3.2 ಕೋಟಿ ಜನರಿಗೆ ಈ ಉದ್ಯಮವು ಕೆಲಸ ನೀಡುತ್ತಿದೆ ಎಂದು ಹೇಳಲಾಗುತ್ತಿತ್ತು. ಆದರೆ ಬಹುಶಃ ಇತ್ತೀಚಿನ ವರ್ಷಗಳಲ್ಲಿ ಅಂದರೆ 2000 ನೇ ಇಸ್ವಿಯ ನಂತರ ನಮ್ಮ ದೇಶದ ಕೃಷಿ ಕ್ಷೇತ್ರದಲ್ಲುಂಟಾದ ಬಿಕ್ಕಟ್ಟು ಈ ಕ್ಷೇತ್ರಕ್ಕೆ ಮತ್ತಷ್ಟು ಜನರನ್ನು ಕರೆ ತಂದಿದೆ. 2012–13 ಸಾಲಿನ ಅಧ್ಯಯನದ ಪ್ರಕಾರ ಒಟ್ಟು ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಜನರು 53.45 ದಶಲಕ್ಷಗಳೆಂದು ಹೇಳುತ್ತಿವೆಯಾದರೂ, ಇದಕ್ಕೆ ನಿಖರ ಮಾಹಿತಿ ಇಲ್ಲ. ದೇಶದ ಮಾರುಕಟ್ಟೆಯಲ್ಲಿ ವಾರ್ಷಿಕವಾಗಿ ಒಟ್ಟು 2.48 ಲಕ್ಷ ಕೋಟಿಯಷ್ಟು ವ್ಯವಹಾರ ಈ ಉದ್ಯಮದಿಂದ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. (2014 ರ ಅಂಕಿ–ಅಂಶ) ದೇಶದ ಅಂತರಿಕ ಉತ್ಪನ್ನಕ್ಕೆ(ಜಿಡಿಪಿ)ಗೆ ಕಟ್ಟಡ ನಿರ್ಮಾಣ ಕ್ಷೇತ್ರ ಪಾಲು ಶೇ 11 ರಷ್ಟಿದೆ. ವಿಶೇಷವೆಂದರೆ ಇಲ್ಲಿ ಹೂಡಿಕೆಯಾಗುವ ಬಂಡವಾಳದಲ್ಲಿ ಶೇ 65 ರಷ್ಟು ಮೂಲಭೂತ ಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆಯಾಗುತ್ತಿದೆ. ರಿಯಲ್ ಎಸ್ಟೇಟ್ ನೊಂದಿಗೆ ನಡೆಯುತ್ತಿರುವ ಈ ಉದ್ಯಮಕ್ಕೆ ಪೂರಕವಾಗಿ ಈ ಉದ್ಯಮದ ಹಿಂದೆ ಮುಂದೆ ಸುಮಾರು 250 ಕ್ಕಿಂತ ಹೆಚ್ಚಿನ ಸಿಮೆಂಟ್, ಕಬ್ಬಿಣ, ಇಟ್ಟಿಗೆ, ಕೈಗಾರಿಕೆಗಳು ಸಹಾಯಕವಾಗಿ ಕಾರ್ಯನಿರ್ವಹಿಸುತ್ತವೆ.

ಭಾರತದಲ್ಲಿ ಕಟ್ಟಡ ನಿರ್ಮಾಣ ಉದ್ಯಮವು ಮುಖ್ಯವಾಗಿ

- ವಸತಿ, ವಸತಿ ಸಂಕೀರ್ಣ, ಕೈಗಾರಿಕೆ, ವಾಣಿಜ್ಯ ಮತ್ತಿತರೆ ಸ್ವರೂಪದಲ್ಲಿ
- ಒಳಚರಂಡಿ, ರಸ್ತೆ, ರೈಲು, ಹೆದ್ದಾರಿ ಸೇತುವೆಗಳು,ಸುರಂಗ ಮಾರ್ಗ ಯೋಜನೆಗಳು
- ಮರಕೆಲಸ, ಪೇಟಿಂಗ್, ಪಬ್ಲಿಂಗ್ ಮತ್ತು ಎಲೆಕ್ಟ್ರಿಕಲ್ ಮೊದಲಾದ ಪರಿಣತ ವಲಯಗಳಲ್ಲಿ ಕಟ್ಟಡ ಉದ್ಯಮದಲ್ಲಿ ಕೆಲಸಗಳು ನಡೆಯುತ್ತಿವೆ.

ಭಾರತದಲ್ಲಿ ಕಟ್ಟಡ ಕಾರ್ಮಿಕರ ಸ್ಥಿತಿ–ಗತಿಗಳು

ದೇಶದಲ್ಲೇ ಅತ್ಯಂತ ಶೋಷಣೆಗೆ ಒಳಗಾದ ಕಾರ್ಮಿಕ ವಿಭಾಗದಲ್ಲಿ ಕಟ್ಟಡ ಕಾರ್ಮಿಕರು ಸೇರಿದ್ದಾರೆ. ಕಟ್ಟಡ ನಿರ್ಮಾಣವಾಗುವ ಸ್ಥಳಗಳಲ್ಲಿ ದುಡಿಯುತ್ತಿರುವ ಈ ಕಾರ್ಮಿಕರಲ್ಲಿ ಶೇ 95 ಕ್ಕಿಂತಲೂ ಹೆಚ್ಚು ಜನರು ಗುತ್ತಿಗೆ ಹಾಗೂ ದಿನಗೂಲಿಗಳ ಆಧಾರದಲ್ಲೇ ದುಡಿಯುತ್ತಿದ್ದಾರೆ. ಅದರ ಅಂಕಿ ಅಂಶಗಳು ಹೀಗಿವೆ.

ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕೆಲಸಗಾರರ ವಿಂಗಡನೆ (ಪಾಕ್ಷಿಕಲ್ಲಿ)

ಕಟ್ಟಡ ಕಾರ್ಮಿಕರಿಗಾಗಿ ಸುಮಾರು ನಮ್ಮ ದೇಶದಲ್ಲಿ 27 ಕ್ಕಿಂತ ಅಧಿಕ ಆರ್ಥಿಕ/ಸಾಮಾಜಿಕ ಹಾಗೂ ಭದ್ರತೆಗೆ ಸಂಬಂಧಿಸಿದ ಕಾನೂನುಗಳನ್ನು ಭಾರತ ಸರಕಾರ ಅಂಗೀಕರಿಸಿದೆ. ಪ್ರಸ್ತುತ ಜಾರಿಯಲ್ಲಿರುವ ಸುಮಾರು 27 ಕಾರ್ಮಿಕ ಕಾನೂನುಗಳು ಕಟ್ಟಡ ಕಾರ್ಮಿಕರಿಗೆ ಅನ್ವಯವಾಗುತ್ತವೆ.

ಆದರೆ ನಮ್ಮ ದೇಶಕ್ಕೆ ಸ್ವಾತಂತ್ರ ಬಂದು 70 ವರ್ಷಗಳಾದರೂ ನಮ್ಮ ದೇಶದ ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಿ ಜಾರಿಯಾಗಿರುವ ಮೇಲ್ಕಂಡ ಕಾನೂನುಗಳು ಶೇ 90 ರಷ್ಟು ಕಟ್ಟಡ ಕಾರ್ಮಿಕರಿಗೆ ಜಾರಿಯಾಗಿಲ್ಲ. ಇದಕ್ಕೆ ಪ್ರಮುಖವಾದ ಕಾರಣ ಈಗಲೂ ಬಹುಸಂಖ್ಯಾತ ಕಟ್ಟಡ ಕಾರ್ಮಿಕರು ಯಾವೊಂದು ಕಾರ್ಮಿಕ ಸಂಘಗಳಿಗೂ ಸೇರದಿರುವುದು ಮತ್ತು ಕಾರ್ಮಿಕ ಸಂಘಗಳ ಕುರಿತಾಗಿ ಅವರಲ್ಲಿ ತಿಳುವಳಿಕೆ ಇಲ್ಲದಿರುವುದು. ಹೀಗಾಗಿ ಈ ನೆಲದ ಕಾನೂನುಗಳ ನಮ್ಮ ಪರವಾಗಿ ಇದ್ದರೂ ಅವುಗಳು ನಮ್ಮ ಬದುಕನ್ನು ಉತ್ತಮಪಡಿಸಲು ಜಾರಿಯಾಗಬೇಕೆಂದು ಆ ವಿಭಾಗದ ಕಾರ್ಮಿಕರಿಂದ ಬರುತ್ತಿಲ್ಲ. ಇದರ ಪರಿಣಾಮ ಕೇವಲ ಕಾರ್ಮಿಕ ಸಂಘಗಳ ವ್ಯಾಪ್ತಿಗೆ ಒಳಪಟ್ಟಿರುವ ಕೆಲವೇ ಕೆಲವು ಒಂದು ಸಣ್ಣ ವಿಭಾಗ ಮಾತ್ರವೇ ಇದರ ಫಲವನ್ನು ಪಡೆಯುವಂತಾಗಿರುವುದು ಇವತ್ತಿನ ವಾಸ್ತವ. ಅದು ಅಲ್ಲದೆ 2014 ರಿಂದ ಅಧಿಕಾರದಲ್ಲಿರುವ ನರೇಂದ್ರ ಮೋದಿ ಸರಕಾರ ಮೆಲ್ಕಂಡ ಕಾರ್ಮಿಕ ಕಾನೂನುಗಳನ್ನು ಮಾಲೀಕರು ಮತ್ತು ದೊಡ್ಡ ಬಂಡವಾಳಿಗರ ಪರವಾಗಿ ಬದಲಾಯಿಸಲು ಹಲವಾರು ತಿದ್ದುಪಡಿಗಳನ್ನು ತರಲು ಪ್ರಯತ್ನಿಸುತ್ತಿರುವುದರಿಂದ ಇರುವ ಕಾನೂನುಗಳು ಮತ್ತಷ್ಟು ಕಟ್ಟಡ ಕಾರ್ಮಿಕರಿಂದ ದೂರವಾಗಲಿವೆ.

ವಲಸೆ ಕಟ್ಟಡ ಕಾರ್ಮಿಕರು

ಲಕ್ಷಾಂತರ ಕಾರ್ಮಿಕರು ಈ ಕ್ಷೇತ್ರದಲ್ಲಿ ವಲಸೆ ಕಾರ್ಮಿಕರಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ, ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹಾಗೂ ಒಂದೇ ರಾಜ್ಯ ಹಾಗೂ ಜಿಲ್ಲೆಗಳೊಳಗೆ ವಲಸೆ ಹೋಗುತ್ತಾ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ಇವರು ಒಂದು ರೀತಿಯ ಜೀತದ ದುಡಿಮೆಯಂತಾಗಿದೆ. ಬಹುಪಾಲು ಅಸಂಘಟಿತರಾಗಿರುವ ಇವರಿಗೆ ಯಾವುದೇ ಕಾನೂನುಬದ್ಧ ಸೌಲಭ್ಯಗಳು ಸಿಗುತ್ತಿಲ್ಲ. ಕೇವಲ ಹಿಮಾಚಲ ಪ್ರದೇಶ, ಕೇರಳ, ಪಂಜಾಬ್, ಮೊದಲಾದ ಕೆಲವು ರಾಜ್ಯಗಳಲ್ಲಿ ಮಾತ್ರ ಕಟ್ಟಡ ಕಾರ್ಮಿಕ ಫೆಡರೇಷನ್ ನೇತೃತ್ವದಲ್ಲಿ ವಲಸೆ ಕಾರ್ಮಿಕರು ಸಂಘಟಿತರಾಗಿದ್ದಾರೆ.

ಸುರಕ್ಷತೆ ಎನ್ನುವುದು ಮರೀಚಿಕೆ ಮತ್ತು ಅತಿ ಹೆಚ್ಚಿನ ಸಾವುಗಳು

ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕನಿಗೆ/ಳಿಗೆ ಸುರಕ್ಷತೆ ಎಂಬುದು ಇಲ್ಲವೇ ಇಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಕಟ್ಟಡ ನಿರ್ಮಾಣಕ್ಕಾಗಿ ವಿನಿಯೋಗಿಸುವ ಸರಕಾರ ಮತ್ತು ಖಾಸಗಿ ಮಾಲಿಕರು ಕಾರ್ಮಿಕರ ಸುರಕ್ಷತೆ ಮಾತ್ರ ಯಾವುದೇ ಗಮನ ನೀಡುವುದಿಲ್ಲ. ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಶಬ್ದ ಮಾಲಿನ್ಯ, ವಾಯು ಮಾಲಿನ್ಯ ಮೊದಲಾದವುಗಳನ್ನು ತಡೆಯುವ ಯಾವ ಪರಿಸರ ಹಾಗೂ ಆರೋಗ್ಯ ಸ್ನೇಹಿ ಮತ್ತು ರಕ್ಷಣಾ ಕ್ರಮಗಳು ಇಲ್ಲವೇ ಇಲ್ಲ. ದೇಶದಲ್ಲಿ ಇತ್ತೀಚಿಗೆ ಲಭ್ಯವಿರುವ ಮಾಹಿತಿಯಂತೆ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಈ ರೀತಿಯ ಸುರಕ್ಷತಾ ಕ್ರಮಗಳ ಕೊರತೆಯಿಂದಾಗಿ ಸಂಭವಿಸುವ ಅವಘಡದಲ್ಲಿ ಪ್ರತಿ ಅರ್ಧ ಗಂಟೆಗೊಬ್ಬ ಕಾರ್ಮಿಕ ಸಾವನಪ್ಪುತ್ತಿದ್ದಾನೆ. ಇಂತಹ ಸಾವು ನೋವುಗಳು ಕಟ್ಟಡ ಕಾರ್ಮಿಕ ಕ್ಷೇತ್ರದಲ್ಲೇ ಹೆಚ್ಚು ಘಟಿಸುತ್ತಿವೆ ಎನ್ನುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಆದಾಗ್ಯೂ ಬೇರೆ ದೇಶಗಳಂತೆ ಇಲ್ಲಿ ಸಂಭವಿಸುವ ವೃತ್ತಿ ಸಂಬಂಧಿ ಅಪಘಾತಗಳು ವರದಿಗಳು ಕಾಲಕಾಲಕ್ಕೆ ಪ್ರಕಟಿಸುವ ವ್ಯವಸ್ಥೆ ಇಲ್ಲ ಎನ್ನುತ್ತಿವೆ ಅಧ್ಯಯನ ವರದಿಗಳು.

Labour stastistics ಹೊರಗೆಡಹಿದ ಅಂಕಿ ಅಂಶದ 2012–13 ಸಾಲಿನ ವರದಿ ಪ್ರಕಾರ ಭಾರತದ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ಮಾಡುವ ಜನರ ಸಂಖ್ಯೆ 53.45 ದಶಲಕ್ಷ ಆದರೂ ಕುಶಲ ಕೆಲಸಗಾರರ ಕೊರತೆಯನ್ನು ಉದ್ಯಮ ಎದುರಿಸುತ್ತಿದೆ ಎಂದು ಹೇಳಿದೆ. ಈ ವರದಿ ನೀಡುವ ವಿಶ್ಲೇಷಣೆಯಂತೆ ಭಾರತದಲ್ಲಿ ವೃತ್ತಿಆಧಾರಿತವಾಗಿ ಸಂಭವಿಸುವ ಅಪಘಾತಗಳಲ್ಲಿ ಸಾವನಪ್ಪುವವರ ಸಂಖ್ಯೆ ವಾರ್ಷಿಕವಾಗಿ 48000 ಸಾವಿರವಿದ್ದರೆ ಅದರಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರ ಒಂದರಲ್ಲೇ ಕನಿಷ್ಠ 11614 ರಿಂದ 22,080 ರಷ್ಟಿದೆ ಅದರಂತೆ ವೃತ್ತಿಆಧಾರಿತವಾಗಿ ಸಂಭವಿಸುವ ಅಪಘಾತಗಳಲ್ಲಿ ಸಾವನಪ್ಪುವವರ ಸಂಖ್ಯೆ ಇತರೆ ದುಡಿಯುವ ಜನರಲ್ಲಿ ಕಟ್ಟಡ ಕಾರ್ಮಿಕರ ಸಾವಿನ ಪ್ರಮಾಣ ಶೇ24.20 ಎನ್ನಲಾಗುತ್ತಿದೆ. ಇತರೆ ದಕ್ಷಿಣ ಏಷ್ಯಾ ದೇಶಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಈ ಸಾವುಗಳು ಜಾಸ್ತಿ. ವಿಶೇಷವಾಗಿ ಸಿಮೆಂಟ್ ಧೂಳು(ಗಾಳಿ) ಸೇವಿಸಿ, ಕಟ್ಟಡ ಕುಸಿತ, ಇತರೆ ಕಾಮಗಾರಿಕೆಲಸಗಳಲ್ಲಿ ಸಾಯುವವರು ಇದರಲ್ಲಿ ಅತಿ ಹೆಚ್ಚಿದ್ದಾರೆ.

ಕಟ್ಟಡ ಕಾರ್ಮಿಕರ ಬದುಕಿಗೆ ಮಾರಕವಾದ ನೀತಿಗಳು:

ಕಟ್ಟಡ ಉದ್ಯಮವು ಇತ್ತೀಚಿನ ವರ್ಷಗಳಲ್ಲಿ ಪರಿಸರ ಮತ್ತು ಹವಾಮಾನ ವೈಪರೀತ್ಯಕ್ಕೆ ಮಾರಕವಾಗುತ್ತಿದೆ ಎಂಬ ಕಾರಣಕ್ಕೆ ಸರ್ವೋಚ್ಛ ನ್ಯಾಯಾಲಯ ಮರಳು ಗಣಿಗಾರಿಕೆ, ಕಲ್ಲುಗಣಿಗಾರಿಕೆ ಮತ್ತು ಇಟ್ಟಿಗೆ ಉದ್ಯಮದ ಮೇಲೆ ಹೇರಿರುವ ನಿಷೇಧದ ಪರಿಣಾಮವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಪರಿಸರವನ್ನು ಸರಂಕ್ಷಣೆ ಮಾಡುತ್ತಲೇ ಕಾರ್ಮಿಕರ ನಿತ್ಯ ಬದುಕಿನ ದುಡಿಮೆಯ ಮೇಲೆ ದುಷ್ಪರಿಣಾಮ ಬೀರುವ ನೀತಿಗಳನ್ನು ರೂಪಿಸುವತ್ತಾ ಕೇಂದ್ರ ಮತ್ತು ರಾಜ್ಯ ಸರಕಾರಗಳು ನೀತಿಗಳನ್ನು ರೂಪಿಸುವಂತೆ ಆಗ್ರಹಪಡಿಸಬೇಕಿದೆ. ಇತ್ತೀಚಿಗೆ ಮೋದಿ ಸರಕಾರ 2016 ನವೆಂಬರ್ 8 ರಿಂದ ಜಾರಿ ಮಾಡಿದ 500–1000 ನೋಟು ರದ್ದತಿ ಕ್ರಮದಿಂದಾಗಿ ಕಟ್ಟಡ ನಿರ್ಮಾಣ ಕ್ಷೇತ್ರ ಒಟ್ಟಾರೆ ತತ್ತರಿಸಿ ಹೋಗಿದೆ. ಬಿಜೆಪಿ ಬೆಂಬಲಿತ ಭಾರತೀಯ ಮಜ್ದೂರ್ ಸಂಘವೇ ನೀಡಿರುವ ಹೇಳಿಕೆಯಂತೆ ದೇಶದಲ್ಲಿ ನೋಟು ರದ್ದತಿಯಿಂದಾಗಿ ಸುಮಾರು 4 ಕೋಟಿ ಉದ್ಯೋಗಗಳು ನಾಶವಾಗಿವೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲೂ ಉದ್ಯೋಗಗಳು ನಾಶವಾಗಿ ಲಕ್ಷಾಂತರ ಜನರು ಕೆಲಸವಿಲ್ಲದಂತಾಗಿದ್ದಾರೆ.

ಮಹಿಳಾ ಕಟ್ಟಡ ಕಾರ್ಮಿಕರು

ಕಟ್ಟಡ ಉದ್ಯಮದ ವಿವಿಧ ವಿಭಾಗಗಳಲ್ಲಿ ಶೇ. 51 ರಷ್ಟು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎನ್ನುತ್ತವೆ ಅಂಕಿ ಅಂಶಗಳು ಆಕುಶಲ ಕಾರ್ಮಿಕರಾದ ಇವರನ್ನು ಒಂದೆಡೆ ಮಾಲೀಕರು, ಗುತ್ತಿಗೆದಾರರು ಮತ್ತು ನಮ್ಮ ಸಾಮಾಜಿಕ ವ್ಯವಸ್ಥೆ ತುಂಬಾ ಅಸಮಾನತೆ ಮತ್ತು ಶೋಷಣೆ ಕಣ್ಣೋಟದಿಂದಲೇ ನೋಡುತ್ತಾ ಬಂದಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದರೂ ಹಲವು ಕುಶಲತೆ ಹೊಂದಿದ ಕೆಲಸಗಳಿಂದ ಅವರನ್ನು ಈ ಉದ್ಯಮದಲ್ಲಿ ದೂರವಿಟ್ಟು ಇಲ್ಲೆಲ್ಲಾ ಗಂಡಸರ ಪಾರುಪತ್ಯವೇ ಹೆಚ್ಚಾಗಿದೆ. ಮನೆಯೊಳಹೂ ಮತ್ತು ಕೆಲಸ ಮಾಡುವ ಸ್ಥಳದಲ್ಲಿ ಮಹಿಳಾ ಕಾರ್ಮಿಕರಿಗೆ ಸಮಾನ ಅವಕಾಶ ಮತ್ತು ಸಮಾನ ವೇತನಗಳನ್ನು ನೀಡುತ್ತಿಲ್ಲ. ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ಕೂಡ ನೀಡುತ್ತಿಲ್ಲ. ಇದರ ಜೊತೆ ಗುತ್ತಿಗೆದಾರರು ಮತ್ತು ಮಾಲೀಕರ ಲೈಂಗಿಕಾ ಕಿರುಕುಳಗಳಿಗೂ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ಬಲಿಯಾಗುತ್ತಿದ್ದಾರೆ. ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಮಕ್ಕಳ ಹಾರೈಕೆಗೆ ವಿಶ್ರಾಂತಿಗೃಹ ಇತ್ಯಾದಿಗಳು ಬಹುಪಾಲು ಇಲ್ಲವೇ ಇಲ್ಲ.

ಬಾಲಕಾರ್ಮಿಕರು

ಗಣನೀಯ ಸಂಖ್ಯೆಯ ಮಕ್ಕಳು ಕೆಲಸ ಮಾಡುತ್ತಿರುವ ಕ್ಷೇತ್ರ ಇದಾಗಿದೆ. ಸಾಮಾನ್ಯವಾಗಿ ಇತರೆ ರಾಜ್ಯ ಮತ್ತು ಜಿಲ್ಲೆಗಳಿಂದ ವಲಸೆ ಕಾರ್ಮಿಕರಾಗಿ ಬರುವ ತಮ್ಮ ಪೋಷಕರ ಜೊತೆಯಲ್ಲೇ ಈ ಮಕ್ಕಳು ಆಗಮಿಸುತ್ತಾರೆ. ಈ ಹೀಗೆ ಬರುವ ಮಕ್ಕಳನ್ನು ಗುತ್ತಿಗೆದಾರರು ಮತ್ತು ಅವರನ್ನು ಕರ ತರುವ ಮಧ್ಯವರ್ತಿಗಳು ಅತ್ಯಂತ ಅಮಾನವೀಯವಾಗಿ ಶೋಷಿಸುತ್ತಾರೆ. ಕೆಲಸ ಮಾಡುವ ಸ್ಥಳಗಳಲ್ಲಿ ಈ ಮಕ್ಕಳಿಗೆ ಯಾವುದೇ ಶಿಕ್ಷಣ ನೀಡುವ ಸೌಲಭ್ಯಗಳನ್ನು ಒದಗಿಸಲಾಗುವುದಿಲ್ಲ.

ಕಟ್ಟಡ ಕಾರ್ಮಿಕರಾಗಿ ದುಡಿಯುವ ಬಹುಪಾಲು ಕಾರ್ಮಿಕರು ಶ್ವಾಸಕೋಸ ಕ್ಯಾನ್ಸರ್, ಕಿವುಡುತನ, ಹೊಟ್ಟೆ, ಮೂಳೆ, ನರ ಸಂಬಂಧಿ, ಹೊಟ್ಟೆ ಮತ್ತು ಕರುಳಿನ ಹಾಗೂ ಬಹುಪಾಲು ಮಹಿಳಾ ಕಾರ್ಮಿಕರು ಗರ್ಭಕೋಶ, ರಕ್ತಹೀನತೆ ಮೊದಲಾದ ಸಮಸ್ಯೆಗಳನ್ನು ನಿತ್ಯ ಎದುರಿಸುತ್ತಿದ್ದಾರೆ. ಆದಾಗ್ಯೂ ಇವರಲ್ಲರೂ ಯಾವುದೇ ವಿಮಾ ಸೌಲಭ್ಯಗಳ ರಕ್ಷಣೆ ಇಲ್ಲಂತಹವರು.

ಇಂತಹ ಅಸಂಖ್ಯ ಸಮಸ್ಯೆಗಳನ್ನು ತಮ್ಮ ಒಡಲಲ್ಲಿ ಇಟ್ಟುಕೊಂಡು ತೀವ್ರ ಶೋಷಣೆಗೆ ಒಳಗಾಗಿ ಬದುಕು ಸಾಗಿಸುತ್ತಿರುವವ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ನಡೆಸಲು 1976 ರಲ್ಲಿ ಕಟ್ಟಡ ಕಾರ್ಮಿಕರ ಅಖಿಲ ಭಾರತ ಫೆಡರೇಷನ್ ಸ್ಥಾಪನೆಯಾಗಿ ಹೋರಾಟ ನಡೆಸುತ್ತಿದೆ. ಆ ಹೋರಾಟ ಪರಿಣಾಮವಾಗಿ ಸುಮಾರು 12 ಲಕ್ಷಕ್ಕಿಂತ ಅಧಿಕ ಕಟ್ಟಡ ಕಾರ್ಮಿಕರು constrction workers federation of india (cwfi) ಸೇರ್ಪಡೆಗೊಂಡಿದ್ದಾರೆ. ಮತ್ತು ಅದರ ನೇತೃತ್ವದಲ್ಲಿ ಹಲವು ಹಂತದ ಹೋರಾಟಗಳನ್ನು ನಡೆಸುತ್ತಿದ್ದಾರೆ. ಸಿಐಟಿಯು ಮಾತ್ರವಲ್ಲದೆ ಇತರೆ ಕೇಂದ್ರ ಕಾರ್ಮಿಕ ಸಂಘಟನೆಗಳು ಕೂಡ ಈ ಕಾರ್ಮಿಕರನ್ನು ಸಂಘಟಿಸುತ್ತಾ ಹಲವು ಹೋರಾಗಳನ್ನು ಸಂಘಟಿಸುತ್ತಿವೆ. ಇದರ ಪರಿಣಾಮವಾಗಿ 1996 ರಲ್ಲಿ ಸಂಯುಕ್ತ ರಂಗ ಸರಕಾರ ಇದ್ದಂತ ಸಂದರ್ಭದಲ್ಲಿ ದೇಶದ ಕಟ್ಟಡ ಕಾರ್ಮಿಕ ಕಲ್ಯಾಣಕ್ಕಾಗಿಯೇ "The building and other construction workers act(regulation of employment and conditions of service) 1996" ಹಾಗೂ "The building and other construction workers walfare cess act 1996" ಕಾನೂನು ಜಾರಿ ಮಾಡಿಸಲು ಸಾಧ್ಯವಾಯಿತು. ಇದು ದೇಶದ ಕಾರ್ಮಿಕ ಚಳವಳಿಗೆ ಸಿಕ್ಕ ಮಹತ್ವದ ವಿಜಯವಾಯಿತು. ●

ಕ್ರ.ಸ	ಉದ್ಯೋಗಿಗಳ ಸಂಖ್ಯೆ	ಗುತ್ತಿಗೆ ಏಜೆನ್ಸಿಗಳ ಸಂಖ್ಯೆ	ಶೇ.	ವಿಭಾಗ
1	1 ರಿಂದ 200 ಜನರು	27.000	96.4	ಸಣ್ಣ
2	200 ರಿಂದ 500 ಜನರು	800	2.86	ಮಧ್ಯಮ
3	500 ಜನರಿಗಿಂತ ಅಧಿಕ	200	0.74	ಘನ

ಮತ್ತೆ ಉತ್ಪಾದನಾ ಖರ್ಚಿಗಿಂತಲೂ ಕಡಿಮೆ ಬೆಂಬಲ ಬೆಲೆ ಪ್ರಕಟಣೆ



ಈಗ ರೈತರ ಅಪಹಾಸ್ಯಕ್ಕೀಡಾದ 56" ಎದೆಗಾರಿಕೆ ಪ್ರದರ್ಶನ?

ರೈತರ ಸಾಗುವಳಿಯ ಖರ್ಚು+50% ಸೂತ್ರದ ಮೇಲೆ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಪಡಿಸಬೇಕೆಂಬ ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಜಾರಿ ಮಾಡುವುದಾಗಿ 2014ರಲ್ಲಿ ಮತ್ತೆ–ಮತ್ತೆ ಹೇಳಿದ ಪ್ರಧಾನ ಮಂತ್ರಿಗಳ ಸರಕಾರ, ಈಗ ಅದು ಸಾಧ್ಯವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯಕ್ಕೆ ಹೇಳಿರುವುದು ಮಹಾ ವಿಶ್ವಾಸಘಾತ ಎಂದು ದೇಶಾದ್ಯಂತ ರೈತರು ಬೀದಿಗಿಳಿದು ಬಿಜೆಪಿ ಸರಕಾರಗಳನ್ನು ನಡುಗಿಸಿದರೂ, ಈ ಹೋರಾಟದಲ್ಲಿ ಆರು ಜನ ರೈತರು ಹುತಾತ್ಮರಾದರೂ ಲೆಕ್ಕಿಸದೆ ಬಿಜೆಪಿ ಸರಕಾರ 2017–18ರ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಉತ್ಪಾದನಾ ಖರ್ಚಿಗಿಂತಲೂ ಕೆಳಮಟ್ಟದಲ್ಲಿ ನಿಗದಿ ಮಾಡಿದೆ ಎಂದು ವರದಿಯಾಗಿದೆ. ಇದನ್ನು 'ಅಚ್ಛೇದಿನ್' ಸರ್ವೋಚ್ಚ ನಾಯಕರ ನೋಟುರದ್ಧತಿಯಂತಹ ಎದೆಗಾರಿಕೆ ಎನ್ನಬೇಕೋ ಅಥವ.....

ಅಲ್ಲ, ಇದು ದೇಶದ ರೈತಾಪಿ ಜನಗಳ ಶೋಚನೀಯ ಪರಿಸ್ಥಿತಿಯ ಬಗ್ಗೆ ಈ ಸರಕಾರ ಎಷ್ಟು ಸಂವೇದನಾಶೂನ್ಯವಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ. ಇದು ರೈತಾಪಿ ಜನಗಳನ್ನು ಅಪಹಾಸ್ಯ ಮಾಡುವ ಕ್ರಮ ಎಂದು ಅದು ಬಲವಾಗಿ ಖಂಡಿಸಿದೆ.

ಈ ವಿಷಯದಲ್ಲಿ ಅದು ಕೆಲವು ಸಂಗತಿಗಳತ್ತ ಗಮನ ಸೆಳೆದಿದೆ:

* **ಮೊತ್ತ ಮೊದಲನೆಯದಾಗಿ,** ದೇಶಾದ್ಯಂತ ಖರೀದಿ ಕೇಂದ್ರಗಳ ಒಂದು ಜಾಲದ ಮೂಲಕ ನಿಗದಿತ ಬೆಲೆಗಳಲ್ಲಿ ಖರೀದಿಯ ಆಶ್ವಾಸನೆಯಿಲ್ಲದಿದ್ದರೆ ಈ ಎಂಎಸ್‌ಪಿ ಪ್ರಕಟಣೆ ಕೇವಲ ತೋರಿಕೆಯಾಗುತ್ತದೆ. ಖರೀದಿಗಳನ್ನು ಕೆಲವೇ ದಿನಗಳಿಗೆ ಸೀಮಿತಗೊಳಿಸಲಾಗುತ್ತದೆ, ಆಗಲೂ ಗುಣಮಟ್ಟ, ಗ್ರೇಡ್‌ಗಳು ಇತ್ಯಾದಿಗಳ ಮೇಲೆ ಅಲಿಖಿತ ಗರಿಷ್ಟ ಮಿತಿಗಳಿರುತ್ತವೆ. ಅಥವ ಬೇರೆ ರೀತಿಗಳಲ್ಲಿ ರೈತರು ಹತಾಶೆಯಿಂದ ವ್ಯಾಪಾರಿಗಳಿಗೆ ಅಗ್ಗದಲ್ಲಿ ಮಾರುವ ಪರಿಸ್ಥಿತಿಯನ್ನು ನಿರ್ಮಿಸಲಾಗುತ್ತದೆ. ವ್ಯಾಪಾರಿಗಳು ರೈತರ ಶ್ರಮವನ್ನು ಬಲಿಗೊಟ್ಟು ಲಾಭ ಮಾಡಿಕೊಳ್ಳುತ್ತಾರೆ.ಬಿಜೆಪಿ ಸರಕಾರ ಖರೀದಿಗಳನ್ನು ಹೊಸ ಪ್ರದೇಶಗಳಿಗೆ ವಿಸ್ತರಿಸಿ ಎಂಎಸ್‌ಪಿಯಲ್ಲಿ ಖರೀದಿಯ ಭರವಸೆಯ ಬದಲು ಸಾರ್ವಜನಿಕ ಖರೀದಿಯನ್ನು ವ್ಯವಸ್ಥಿತವಾಗಿ ಕಳಚಿ ಹಾಕುತ್ತಿದೆ.

* **ಎರಡನೆಯದಾಗಿ,** ಉತ್ಪಾದನಾ ಖರ್ಚುಗಳ ಲೆಕ್ಕಾಚಾರವೇ ವಿವಾದಾತ್ಮಕವಾಗಿದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮೂರು ವರ್ಷಗಳ ಹಿಂದಿನ ಮಾಹಿತಿಯ ಮೇಲೆ ಲೆಕ್ಕಾಚಾರ ನಡೆಸಲಾಗುತ್ತದೆ. ಅಂದರೆ ಮೂರು ವರ್ಷಗಳ ಹಿಂದಿನ ಉತ್ಪಾದನಾ ಖರ್ಚುಗಳ ಆಧಾರದಲ್ಲಿ ಎಂಎಸ್‌ಪಿ ನಿಗದಿ ಮಾಡಲಾಗುತ್ತದೆ. ಈಗ 2017–18ರ ಮುಂಗಾರಿಗೆ ಪ್ರಕಟಿಸಿರುವ ಎಂಎಸ್‌ಪಿಗಳು 2012–13 ರಿಂದ 2014–15ರ ವಾಸ್ತವಿಕ ಅಂದಾಜಿನ ಮೇಲೆ ಆಧರಿಸಿರುವಂತದ್ದು. ರಾಜ್ಯಸರಕಾರಗಳು ಮಾಡಿರುವ ಲೆಕ್ಕಾಚಾರ ಸಿಎಸಿಪಿ(ಕೃಷಿ ವೆಚ್ಚಗಳು ಮತ್ತು ಬೆಲೆಗಳ ಸಮಿತಿ) ಮಾಡಿರುವ ಲೆಕಕಾಚಾರಗಳಿಗಿಂತ ಹೆಚ್ಚಿದ್ದು, ರೈತರ ಲೆಕ್ಕಾಚಾರಗಳಿಗೆ ಹತ್ತಿರ ಬರುತ್ತವೆ.

* ಬಹುಪಾಲು ಬೆಳೆಗಳಿಗೆ ನಿಗದಿ ಮಾಡಿರುವ ಎಂಎಸ್‌ಪಿಗಳು ಸಿಎಸಿಪಿ ಯ ಈ ರೀತಿಯ ಕಡಿಮೆ ಲೆಕ್ಕಾಚಾರಗಳಿಗಿಂತ ಕೂಡ ಕಡಿಮೆ ಇವೆ. ಮಧ್ಯಮ ಎಳೆಯ ಹತ್ತಿಗೆ ತಗಲುವ ವೆಚ್ಚ ಕ್ವಿಂಟಾಲ್‌ಗೆ 4376 ರೂ. ಆದರೆ ನಿಗದಿ ಮಾಡಿರುವ ಕನಿಷ್ಟ ಬೆಂಬಲ ಬೆಲೆ ಕೇವಲ 4020. ಇತರ ಬೆಳೆಗಳ ಬಗ್ಗೆ ನೋಡಿ:

ಕ್ವಿಂಟಾಲ್	ವೆಚ್ಚ	ಎಂಎಸ್‌ಪಿ
ಹೆಸರು ಬೇಳೆ	5700	5575
ರಾಗಿ	2351	1900
ಹೈಬ್ರಿಡ್ ನವಣೆ	2089	1700
ಸಾಸಿವೆ	5706	5300
ಸೂರ್ಯಕಾಂತಿ	4526	4100

ರಾಜ್ಯಗಳು ಲೆಕ್ಕ ಹಾಕಿರುವ ವೆಚ್ಚಗಳು ಇದಕ್ಕಿಂತ ಹೆಚ್ಚಿವೆ ಎಂಬುದನ್ನು ಗಮನಿಸಬೇಕು. **ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಹೇಳುತ್ತಿರುವ ನರೇಂದ್ರ ಮೋದಿ ಸರಕಾರ ವಾಸ್ತವವಾಗಿ ಅವರ ಆದಾಯವನ್ನು ಇಳಿಸುತ್ತಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಎಐಕೆಎಸ್ ಟಿಪ್ಪಣಿ ಮಾಡಿದೆ.**

* ತೊಗರಿ ಬೇಳೆಯ ಬೆಂಬಲ ಬೆಲೆಯನ್ನು ಕ್ವಿಂಟಾಲಿಗೆ 5050ರಿಂದ 5450 ರೂ.ಗೆ ಏರಿಸಲಾಗಿದೆ, ಇದರಲ್ಲಿ 200 ರೂ. ಬೋನಸ್ ಕೂಡ ಇದೆ ಎನ್ನಲಾಗಿದೆ. 2016–17 ರ ಮುಂಗಾರು ಸೀಜನ್ನಿಗೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯ ಕೃಷಿ ಇಲಾಖೆಗಳು ಲೆಕ್ಕ ಹಾಕಿದ ವೆಚ್ಚಗಳು ಕ್ವಿಂಟಾಲಿಗೆ ಅನುಕ್ರಮವಾಗಿ 5722, 6841 ಮತ್ತು 5100ರೂ.

ಈ ರಾಜ್ಯಗಳು ಕಳೆದ ವರ್ಷ ಸೂಚಿಸಿದ್ದ ಕನಿಷ್ಟ ಬೆಂಬಲ ಬೆಲೆಗಳು ಅನುಕ್ರಮವಾಗಿ 8583, 10,261 ಮತ್ತು 6500ರೂ.


ಆದರೆ ಈಗ ಪೂರ್ಣ ಒಂದು ವರ್ಷದ ನಂತರ ಬಿಜೆಪಿ ಸರಕಾರ ಪ್ರಕಟಿಸಿರುವುದು ಕೇವಲ 5450ರೂ. ಇದು ಅರವಿಂದ ಸುಬ್ರಮಣ್ಯಂ ಶಿಫಾರಸು ಮಾಡಿದ ತೊಗರಿ ಬೇಳೆ ಮತ್ತು ಉದ್ದಿನ ಬೇಳೆಗೆ 2016–17ರಲ್ಲಿ 6000ರೂ., 2017–18ರಲ್ಲಿ 7000ರೂ.ಗಿಂತ ಕೂಡ ಕಡಿಮೆ.

* ಭತ್ತ , ಮೆಕ್ಕೆ ಜೋಳ ಮತ್ತು ಜೋಳಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಒಂದು ಸರಿಯಾದ ಲೆಕ್ಕಾಚಾರವನ್ನೂ ಮಾಡದೆ ಅಲ್ಪಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಭತ್ತದ ಉತ್ಪಾದನಾ ವೆಚ್ಚ ಕ್ವಿಂಟಾಲಿಗೆ ರೂ.1484 ಎಂದು ಪರಿಗಣಿಸಲಾಗಿದೆ. ಆದರೆ ಅತಿ ಹೆಚ್ಚು ಭತ್ತ ಬೆಳೆಯುವ ಬಂಗಾಲದಲ್ಲಿ ಈ ವೆಚ್ಚ ರೂ.1725.

ಸೋಯಾಬೀನ್ ವೆಚ್ಚ 2921ರೂ, ಎಂಎಸ್‌ಪಿ ರೂ. 3050, ಕೇವಲ 129ರೂ. ಹೆಚ್ಚು.

* ಹೈಬ್ರಿಡ್ ಬೀಜಗಳ ಬೆಲೆಗಳಲ್ಲಿ 10% ಕಡಿತ ಮಾಡುವಂತೆ ಬೀಜ ಅಸೋಸಿಯೇಶನ್‌ಗಳಿಗೆ ಮನವರಿಕೆ ಮಾಡಿರುವುದಾಗಿ ಸರಕಾರ ಹೇಳಿಕೊಂಡಿದೆ. ಆದರೆ ಲಾಗುವಾಡುಗಳ ಬೆಲೆಗಳ ಮೇಲೆ ನಿಯಂತ್ರಣಗಳನ್ನೆಲ್ಲ ತೆಗೆದು ಹಾಕಿ ಕಂಪನಿಗಳಿಗೆ ಮುಕ್ತ ಅವಕಾಶ ಕೊಟ್ಟಿರುವ ಸರಕಾರದ ಈ ದಾವೆಗಳಲ್ಲಿ ರೈತರಿಗೆ ನಂಬಿಕೆ ಮೂಡಿಲ್ಲ. ಬೀಜ ಕಂಪನಿಗಳು ಬೆಲೆಯೇರಿಸಿ ರೈತರನ್ನು ಸುಲಿಯುತ್ತಿವೆ.

ಈ ಎಲ್ಲ ವಿವರಗಳನ್ನು ನೀಡುತ್ತ ಎಐಕೆಎಸ್ ಕೃಷಿ ಸಂಕಟದ ಎದುರು ಕೂಡ ಬಿಜೆಪಿ ಸರಕಾರ ಇಂತಹ ಸಂವೇದನಾಶೂನ್ಯ, ರೈತ–ವಿರೋದಿ ನಿಲುವನ್ನು ಪ್ರದರ್ಶಿಸಿರುವುದನ್ನು ಪ್ರತಿಭಟಿಸಬೇಕು, ಬಯಲಿಗೆಳೆಯಬೇಕು ಎಂದು ತನ್ನ ಕಾರ್ಯಕರ್ತರಿಗೆ ಮತ್ತು ರೈತರಿಗೆ ಕರೆ ನೀಡಿದೆ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

ಗೋವಾದ ಬಿಜೆಪಿ ನೇತೃತ್ವದ ಸರಕಾರದಿಂದಲೂ ಜಾನುವಾರು ವ್ಯಾಪಾರ ನಿಷೇಧ ಅಧಿಸೂಚನೆಗೆ ಆಕ್ಷೇಪಣೆ

ಅಚ್ಚೇ ದಿನ್ ಸರಕಾರದ ಮೂರನೇ ವಾಷಿಕೋತ್ಸವದ ಮುನ್ನಾದಿನ ದಿಲ್ಲಿಯಿಂದ ಹೊರಡಿಸಿದ ಜಾನುವಾರು ವ್ಯಾಪಾರದ ಮೇಲೆ ನಿರ್ಬಂಧಗಳನ್ನು ಹಾಕುವ ನಿಯಮಗಳ ಕುರಿತ ಅಧಿಸೂಚನೆಗೆ ದೇಶಾದ್ಯಂತ ರೈತರಿಂದ ಭಾರೀ ಪ್ರತಿಭಟನೆಗಳು ಬಂದಾಗ ಕೇಂದ್ರ ಮುಖಂಡರುಗಳು ಇದು ಜಾನುವಾರ ಮಾರಾಟವನ್ನು ನಿರ್ಬಂಧಿಸುವದಿಲ್ಲ ಎಂದು ಸಮಜಾಯಿಷಿ ನೀಡಿದರು. ಆದರೆ ಹೆಚ್ಚಿನವರು ಇದನ್ನು ಒಪ್ಪಿಲ್ಲ. ಕೇರಳ ವಿಧಾನ ಸಭೆ ಮತ್ತು ನಂತರ ಮೇಘಾಲಯ ವಿಧಾನಸಭೆ ಅದನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿ ಠರಾವುಗಳನ್ನು ಅಂಗೀಕರಿಸಿತು.

ಈಗ ಗೋವಾದ ಬಿಜೆಪಿ ನೇತೃತ್ವದ ಸರಕಾರವೂ ಈ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕೆಂದು ನೇರವಾಗಿ ಹೇಳದಿದ್ದರೂ, ತಮಗೆ ಈ ಬಗ್ಗೆ ಕೆಲವು ಆಕ್ಷೇಪಣೆಗಳಿವೆ ಎಂದು ಕೃಷಿಮಂತ್ರಿಗಳು(ಇವರು ಗೋವ ಫಾರ್ವರ್ಡ್ ಪಾರ್ಟಿಯ ಮುಖಂಡರು) ಹೇಳಿದ್ದಾರೆ. ಇದನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದು, ಮುಖ್ಯಮಂತ್ರಿಗಳು ಈ ಬಗ್ಗೆ ಕೇಂದ್ರಕ್ಕೆ ಬರೆಯುವುದಾಗಿ ಹೇಳಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರಕಾರ ಎಲ್ಲರನ್ನೂ ಶಾಕಾಹಾರಿಗಳಾಗಿ ಮಾಡಬೇಕೆಂದಿದೆ, ಈ ರಾಜ್ಯದಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಗೋಮಾಂಸ ಸೇವಿಸುವವರಿದ್ದಾರೆ, ಅವರಲ್ಲಿ ಎದ್ದಿರುವ ಸಂದೇಹಗಳನ್ನು ಹೋಗಲಾಡಿಸಬೇಕಾಗಿದೆ ಎಂಬ ಈ ಗೋವಾ ಕೃಷಿಮಂತ್ರಿಗಳ ಮಾತು ಪರೋಕ್ಷವಾಗಿ ಕೇಂದ್ರ ಮುಖಂಡರ ಸಮಜಾಯಿಷಿಗಳು ಜನ ಒಪ್ಪುವ ಹಾಗೆ ಇಲ್ಲ ಎಂದಂತೆ–ಯೇ ಆಗಿದೆ.

ಮಧ್ಯಪ್ರದೇಶದಲ್ಲಿ ಮತ್ತೆ 3 ರೈತರ ಆತ್ಮಹತ್ಯೆ

ಮಧ್ಯಪ್ರದೇಶದಲ್ಲಿ ಜೂನ್21–22 ರಲ್ಲಿ ಮತ್ತೆ ಮೂವರು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ವರದಿಯಾಗಿದೆ. ಈ ಮೂಲಕ ತಮ್ಮ ಪೋಲೀಸರೇ ನಡೆಸಿದ ಗೋಲೀಬಾರಿನ ನಂತರ ಶಾಂತಿ ತರಲೆಂದು **ಮುಖ್ಯಮಂತ್ರಿಗಳು 26 ಗಂಟೆಗಳ 'ಆಮರಣ ಉಪವಾಸ'ವನ್ನು ಮುಗಿಸಿದ ಮೇಲೆ ಈ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ 20ಕ್ಕೇರಿದೆ, ಇದರಲ್ಲಿ 6 ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ನಡೆದಿದೆ ಎಂದು ಪಿಟಿಐ ವರದಿ ಮಾಡಿದೆ(ಜೂನ್22).**

ಜೂನ್21–22ರಂದು ಸಾವಿಗೀಡಾದ 50ವರ್ಷದ ಗುಲಾಯಿ ಕುರ್ಮಿ 1ಲಕ್ಷ ರೂ.ಸಾಲ ತೀರಿಸಲಾಗದೆ, ಲೇವಾದೇವಿಗಾರರ ಕಿರುಕುಳ ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 75 ವರ್ಷದ ಗುತ್ತಿಗೆ ರೈತ 90,000 ರೂ. ತೀರಿಸಲಾಗದೆ ಸಾವು ತಂದುಕೊಂಡಿದ್ದಾರೆ. ಮತ್ತೊಬ್ಬ ರೈತ ಶತ್ರುಘನ್ ಮೀನ ವಿಷ ಷಸೇವಿಸಿ ಸತ್ತಿದ್ದು ಸಾಲಬಾಧೆಯಿಂದಲೇ ಹಾಗೆ ಮಾಡಿದ್ದಾರೆ ಎಂದು ಅವರ ಕುಟುಂಬದವರು ಹೇಳಿದರೆ, ಪೋಲೀಸರು ಹಾಗೆಂದು ಈಗಲೇ ಹೇಳಲಾಗದು ಎಂದಿದ್ದಾರಂತೆ.

ಈ ಮೂವರು ರೈತರು ಸಾಲ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗಲೇ 'ಅಚ್ಚೇದಿನ್' ಸರಕಾರದ ಇನ್ನೊಬ್ಬ ಹಿರಿಯ ಮಂತ್ರಿಗಳು, ಹಿಂದೆ ಬಿಜೆಪಿ ಅಧ್ಯಕ್ಷರೂ ಆಗಿದ್ದವರು ಸಾಲಮನ್ನಾ ಒಂದು ಫ್ಯಾಶನ್ ಆಗಿದೆ ಎಂದು ಹೇಳಿರುವುದಾಗಿ ವರದಿಯಾಗಿದೆ.

ಸಾಲಗಳನ್ನು ಅತಿ ಉಗ್ರ ಸನ್ನಿವೇಶದಲ್ಲಿ ಮಾತ್ರ ಮನ್ನಾ ಮಾಡಬೇಕು ಎಂದು ಅವರು ಹೇಳಿದ್ದಾರೆ. ಆತ್ಮಹತ್ಯೆ ಉಗ್ರ ಸನ್ನಿವೇಶ ಅಲ್ಲವೇ? ಬಹುಶಃ ಇನ್ನೆರಡು ಆತ್ಮತ್ಯೆಗಳ ವರದಿ ಬಂದಾಗ, ಸೀತಾರಾಮ್ ಯೆಚುರಿಯವರು ಟಿಪ್ಪಣಿ ಮಾಡಿರುವಂತೆ, ದೇಶದ ರೈತರಿಗೆ ಆತ್ಮಹತ್ಯೆ ಮಾಡಿಕೊಳ್ಳುವುದೂ ಒಂದು ಫ್ಯಾಷನ್ ಆಗಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲವೇನೋ.

ಅದೊಂದು ಅಂತಿಮ ಪರಿಹಾರ ಅಲ್ಲ ಎಂಬ ಅವರ ಮಾತು ಹೊಸ ವಿಚಾರವೇನೂ ಅಲ್ಲ. ಆದ್ದರಿಂದಲೇ ತಾನೇ ಸ್ವಾಮಿನಾಥನ್ ಆಯೋಗದ ಕನಿಷ್ಟ ಬೆಂಬಲ ಬೆಲೆ ಕುರಿತ ಶಿಫಾರಸನ್ನು ಜಾರಿ ಮಾಡಿ ಎಂದು ರೈತರು ಬೀದಿಗಿಳಿದಿರುವುದು? **ಆದರೂ ಈಗಲೂ ಉತ್ಪಾದನಾ ಖರ್ಚಿಗಿಂತಲೂ ಕಡಿಮೆ ಕನಿಷ್ಟ ಬೆಂಬಲ ಬೆಲೆ ಪ್ರಕಟಿಸಿರುವುದಕ್ಕೆ ಏನೆನ್ನಬೇಕು? ಎಐಕೆಎಸ್ ಹೇಳಿರುವಂತೆ ಸಂವೇದನಾಶೂನ್ಯತೆ, ಮತ್ತು ಆರ್ಥಿಕತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಹೇಳಿರುವಂತೆ ವಿಚಾರಹೀನ ಗಂಡಸ್ತನ ಎಂದು ತಾನೇ?**

ರಾಜದ್ರೋಹದ ಮೇಲೆ ಬಂಧನ, ಕೋಮು ಉದ್ರೇಕದ ಆಪಾದನೆ

ಇದು ಕೂಡ ಅದೇ ಮಧ್ಯಪ್ರದೇಶದ ಸುದ್ದಿ. ಭಾರತ–ಪಾಕಿಸ್ತಾನ ಕ್ರಿಕೆಟ್ ಫೈನಲ್‌ನಲ್ಲಿ ಪಾಕಿಸ್ತಾನದ ಗೆಲುವನ್ನು ಆಚರಿಸಿ ಪಾಕಿಸ್ತಾನ–ಪರ ಘೋಷಣೆ ಹಾಕಿದ್ದಾರೆಂದು ಬುರ್ಹನ್‌ಪುರ ಜಿಲ್ಲೆಯಲ್ಲಿ 15 ಮಂದಿ 11ನೇ ತರಗತಿಯ ಮುಸ್ಲಿಂ ಬಾಲಕರನ್ನು ಬಂಧಿಸಿ ಅವರ ಮೇಲೆ ರಾಜದ್ರೋಹದ ಕೇಸ್ ಹಾಕಲಾಯಿತು. ಆದರೆ ನಂತರ 'ಜ್ಞಾನೋದಯ' ಆಗಿ ಅದನ್ನು ಕೈಬಿಟ್ಟು ಕೋಮು ಸೌಹಾರ್ದವನ್ನು ಕೆಡಿಸುವ ಆಪಾದನೆಯನ್ನು ಹಾಕಲಾಗಿದೆ ಎಂದು ಹಿಂದುಸ್ತಾನ್ ಟೈಮ್ಸ್ (ಜೂನ್22) ವರದಿ ಮಾಡಿದೆ.

ಈ ನಡುವೆ ಭಾರತದಲ್ಲಿ ಮುಸ್ಲಿಮರು ಪಾಕಿಸ್ತಾನದ ವಿಜಯವನ್ನು ಆಚರಿಸಿದ್ದಾರೆಂದು ಪ್ರಚಾರ ಮಾಡುವ ಕನಿಷ್ಟ ಎರಡು ಹುಸಿ ವೀಡಿಯೋಗಳನ್ನು ಆಲ್ಟ್‌ನ್ಯೂಸ್ ವೆಬ್‌ತಾಣ ಗುರುತಿಸಿದೆ.

ಜೂನ್ 21 ರಂದು ವಿಶ್ವಾದ್ಯಂತ 3ನೇ ಅಂತರ್ರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಲಕ್ನೌನಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರೊಂದಿಗೆ ಭಾಗವಹಿಸಿದ ಪ್ರಧಾನ ಮಂತ್ರಿಗಳು ಇದು ಖರ್ಚಿಲ್ಲದ ಆರೋಗ್ಯ ವಿಮೆ ಎಂದರು, ಈ ಮೂಲಕ 125 ಕೋಟಿ ದೇಶಬಾಂಧವರನ್ನು ಹಲವು ಸಮಸ್ಯೆಗಳಿಂದ ಉಳಿಸಬಹುದು ಎಂದರು. –ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಕೃಷಿ ಸಾಲಮನ್ನಾ-ರೈತರ ದುರಾಸೆಯ ಪ್ರಶ್ನೆ ಅಲ್ಲ, ದುರ್ದೆಸೆಯ ಪ್ರಶ್ನೆ



ರೈತರು ಸಾಲಮನ್ನಾ ಕೇಳುವ 'ಅಭ್ಯಾಸ' ಮಾಡಿಕೊಂಡಿದ್ದಾರೆ ಎಂದು ತರ್ಕಿಸಲಾಗುತ್ತಿದೆ. ದೇಶದ ಹಿರಿಯ ಮಂತ್ರಿಗಳೊಬ್ಬರು ಇನ್ನೂ ಮುಂದೆ ಹೋಗಿ (ಕೆಳಗೆ ಇಳಿದು?) ಅದೊಂದು ಫ್ಯಾಶನ್ ಆಗಿದೆ ಎಂದಿದ್ದಾರೆ. ಇವೆಲ್ಲ ದುರ್ಭಾವನೆಯ ಮಾತುಗಳು ಹೌದೋ ಅಲ್ಲವೋ, ದೋಷಪೂರಿತ ಮಾತುಗಳಂತೂ ಖಂಡಿತಾ ಹೌದು. ಈ ಮಾತುಗಳನ್ನಾಡುವವರು ಬಂಪರ್ ಬೆಳೆಗಳು ಬಂದಾಗ ಬೆಲೆ ಕುಸಿತವನ್ನು ತಡೆಯಲು ಸೂಕ್ತ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಏಕೆ ಒತ್ತಾಯಿಸುವುದಿಲ್ಲ?

ನಿಜ ಹೇಳಬೇಕೆಂದರೆ, ನವ-ಉದಾರವಾದಿ ಧೋರಣೆಗಳನ್ನು ಜಾರಿಗೊಳಿಸುವ ಮೊದಲು ದೇಶ ಇಂತಹ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ಮಾಡಿತ್ತು. ನವ-ಉದಾರವಾದಿ ವ್ಯವಸ್ಥೆ ಅದನ್ನು ಧ್ವಂಸ ಮಾಡಿದೆ. ರೈತರು ಸದ್ಯದ ದುರ್ದೆಸೆಯಿಂದ ಪಾರಾಗಲು ಸಾಲಮನ್ನಾ ಪಡೆಯಬೇಕು ಮಾತ್ರವಲ್ಲ, ಮುಂದೆಯೂ ಬೆಲೆ ಕುಸಿತಗಳನ್ನು ಎದುರಿಸಲು ಬೆಲೆ-ಬೆಂಬಲವೂ ಅವರಿಗೆ ಬೇಕಾಗಿದೆ, ಅದನ್ನು ನವ-ಉದಾರವಾದ ಧ್ವಂಸ ಮಾಡಿರುವ ವ್ಯವಸ್ಥೆಯನ್ನು ಮತ್ತೆ ರಚಿಸುವ ಮೂಲಕ ಒದಗಿಸಬೇಕು

ಎನ್ನುತ್ತಾರೆ **ಪ್ರೊ.ಪ್ರಭಾತ್ ಪಟ್ನಾಯಕ್**

ರೈತಾಪಿ ಜನಗಳು ಕೇಳುತ್ತಿರುವ ಕೃಷಿ ಸಾಲ ಮನ್ನಾ ಬಹಳಷ್ಟು ಅಪಾರ್ಥ ಮಾಡಿಕೊಂಡಿರುವ ಪ್ರಶ್ನೆ. ಇಂತಹ ಮನ್ನಾ ದೇಶದಲ್ಲಿನ ಸಾಲ ಪಾವತಿ ಸಂಸ್ಕೃತಿಯನ್ನು ಕುಲಗೆಡಿಸುತ್ತದೆ, ಇನ್ನು ಮುಂದೆ ಜನ ಸಾಲಗಳನ್ನು ಮನ್ನಾ ಮಾಡಲಾಗುತ್ತದೆ ಎಂಬ ನಿರೀಕ್ಷೆಯಿಂದ ಅದನ್ನು ಹಿಂದಿರುಗಿಸುವುದನ್ನು ನಿಲ್ಲಿಸಿ ಬಿಡುತ್ತಾರೆ ಎಂದೂ, ಕೆಲವು ವರ್ಷಗಳ ಹಿಂದೆ ಯುಪಿಎ ಸರಕಾರ ಕೃಷಿ ಸಾಲಗಳನ್ನು ಮನ್ನಾ ಮಾಡಿತ್ತು, ಈಗ ಮತ್ತೆ ಸಾಲಮನ್ನಾದ ಬೇಡಿಕೆ ಬಂದಿರುವುದರಿಂದ ರೈತರಿಗೆ ಸಾಲ ಹಿಂದಿರುಗಿಸದಿರುವುದು ಒಂದು ಅಭ್ಯಾಸವಾಗಿ ಬಿಟ್ಟಿದೆ, ಆದ್ದರಿಂದಲೇ ಆಗಾಗ ಸಾಲಮನ್ನಾ ಕೇಳುತ್ತಿದ್ದಾರೆ ಎಂದು ತರ್ಕ ಹೂಡಲಾಗುತ್ತಿದೆ. ಅಲ್ಲದೆ, ಯಾರಾದರೂ ಸಾಲ ಮರುಪಾವತಿಯ ಹೊರೆ ಹೊರಬೇಕಾಗುತ್ತದೆ ತಾನೇ, ರೈತರು ಮಾಡದಿದ್ದರೆ, ಸರಕಾರದ ಬಜೆಟಿನ ಮೇಲೆ ಇದರ ಹೊರೆ ಬೀಳುತ್ತದೆ, ಇದು ಇಡೀ ಸಮಾಜಕ್ಕೆ ಹಾನಿಕಾರಕ ಇತ್ಯಾದಿ, ಇತ್ಯಾದಿ.

ಈ ತರ್ಕಗಳನ್ನೆಲ್ಲ ಸದ್ಭಾವನೆಯಿಂದಲೇ ಮುಂದಿಡಲಾಗುತ್ತಿದೆ ಎಂದು ಭಾವಿಸಿದರೂ, ಇವೆಲ್ಲ ಸಂಪೂರ್ಣ ದೋಷಪೂರಿತ ತಿಳುವಳಿಕೆಗಳು. ಇದು ಹೇಗೆ ಎಂದು ನೋಡಲು ಆರ್ಥಿಕ ವ್ಯವಸ್ಥೆಯಲ್ಲಿ ಸಾಲ ಹೇಗೆ ಸಂಚಲಿಸುತ್ತದೆ ಎಂಬುದನ್ನು ನೋಡೋಣ.

ಒಬ್ಬ ರೈತ ಬೆಳೆ ಬೆಳೆಯಲು 100ರೂ. ಸಾಲ ತೆಗೆದುಕೊಳ್ಳುತ್ತಾನೆ ಎಂದಿಟ್ಟುಕೊಳ್ಳೋಣ. ಸರಳವಾಗಿ ನೋಡಲು, ಆತನ ಬೆಳೆಯ ಮೌಲ್ಯವೂ ಮೂಲ ಬೆಲೆಗಳಲ್ಲಿ 100ರೂ. ಎಂದಿರಲಿ. ಅದನ್ನು ಮಾರುಕಟ್ಟೆಗೆ ಒಯ್ದಾಗ ಒಬ್ಬ ವ್ಯಾಪಾರಿ ಅದನ್ನು ಖರೀದಿಸಲು 100ರೂ. ಬ್ಯಾಂಕ್‌ನಿಂದ ಸಾಲ ಮಾಡುತ್ತಾನೆ. ಈ ಹಣ ರೈತನಿಗೆ ಮಾರಾಟ ಮಾಡಿ ಸಿಗುವ ಹಣವಾದ್ದರಿಂದ ಅದನ್ನು ಬ್ಯಾಂಕಿಗೆ ಹಿಂದಿರುಗಿಸುತ್ತಾನೆ. ಆದ್ದ-ರಿಂದ ಬ್ಯಾಂಕಿನಲ್ಲಿ ಸಾಲ ಬಾಕಿ 100ರೂ. ಆಗಿಯೇ ಉಳಿಯುತ್ತದೆ, ಸಾಲಗಾರನ ಗುರುತು ಮಾತ್ರ ಬದಲಾಗುತ್ತದೆ. ಮೂಲತಃ ರೈತನದಾಗಿದ್ದ ಸಾಲ ಈಗ ವ್ಯಾಪಾರಿಯದ್ದಾಗುತ್ತದೆ.

ಈ ಸಾಲ ಸಂಚಲನೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಸಾಲಬಾಕಿಗೆ ಎದುರಾಗಿ ಸದಾ ಅಷ್ಟೇ ಮೌಲ್ಯದ ಒಂದು ಸರಕಿನ ದಾಸ್ತಾನು ಇರುತ್ತದೆ. ರೈತ ಬೀಜ, ರಸಗೊಬ್ಬರ ಇತ್ಯಾದಿ ಖರೀದಿಸುವಾಗ ಈ ಲಾಗುವಾಡುಗಳ ಮೌಲ್ಯ ಮಾಡಿದ ಸಾಲಕ್ಕೆ ಸಮನಾಗಿರುತ್ತದೆ ತಾನೇ? ನಂತರ ರೈತನ ಬಳಿ ಬರುವ ಉತ್ಪನ್ನದ ದಾಸ್ತಾನು ಸಾಲಕ್ಕೆ ಸಮನಾಗಿರುತ್ತದೆ. ಆಮೇಲೆ ವ್ಯಾಪಾರಿ ಬಳಿಯಿರುವ ದಾಸ್ತಾನು ಸಾಲಕ್ಕೆ ಸಮನಾಗುತ್ತದೆ. ಹೀಗೆ ಸಾಲ ಸಂಚಲನೆ ಮಾಡುತ್ತಿರುವಾಗ ಸರಕಿನ ಸ್ವರೂಪ ಮತ್ತು ಸರಕಿನ ಜಾಗ ಬದಲಗುತ್ತದೆ, ಆದರೆ ಅದರ ಮೌಲ್ಯ ಅದೇ ಅಗಿರುತ್ತದೆ. ಆದ್ದ-ರಿಂದ ಬ್ಯಾಂಕುಗಳು 'ಪ್ರಯಾಸ'ಕ್ಕೆ ಒಳಗಾಗುವ ಪ್ರಶ್ನೆ ಇಲ್ಲ(ಬರ ಮತ್ತು ಇತರ ನೈಸರ್ಗಿಕ ಅನಹುತಗಳ ಸಮಯದಲ್ಲಿ ಮಾತ್ರ ಬಿಟ್ಟು).

ಸರಕಿನ ದಾಸ್ತಾನನ್ನು ಅಂತಿಮವಾಗಿ ಬಳಕೆದಾರನಿಗೆ ಮಾರಿದಾಗ (ಅದನ್ನು ಆತ/ಆಕೆ ತನ್ನ ಆದಾಯದಿಂದಲೇ ಖರೀದಿಸುತ್ತಾರೆ ಎಂದಿಟ್ಟುಕೊಳ್ಳೋಣ) ಮಾರಿ ಬಂದ ಹಣ ಸಾಲ ಮರುಪಾವತಿಯ ರೂಪದಲ್ಲಿ ಬ್ಯಾಂಕಿಗೆ ಮತ್ತೆ ಹರಿದು ಬರುತ್ತದೆ. ಆದ್ದರಿಂದ ನೈಸರ್ಗಿಕ ಅನಾಹುತಗಳಿಲ್ಲದಿದ್ದಲ್ಲಿ, ಮೂಲಬೆಲೆಗಳು ಹಾಗೆ ಉಳಿದಿದ್ದಲ್ಲಿ, ಸಾಲಮನ್ನಾದ ಬೇಡಿಕೆಯಾಗಲೀ, ಬ್ಯಾಂಕುಗಳು 'ಪ್ರಯಾಸ'ಪಡುವುದಾಗಲೀ ಇರುವುದಿಲ್ಲ. ಅಂದರೆ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಉತ್ಪಾದನೆಯಲ್ಲಿ ಮತ್ತು ಬೆಲೆಗಳಲ್ಲಿ ಮಹಾ ಏರುಪೇರುಗಳು ಇಲ್ಲದಿದ್ದರೆ ಬ್ಯಾಂಕ್ ಸಾಲಗಳು ತಂತಾನೇ ವಸೂಲಾಗುತ್ತಿರುತ್ತವೆ.

ಈಗ ಸಾಲಮನ್ನಾದ ಬೇಡಿಕೆ ಬರುತ್ತಿರಲು ಪ್ರಾಥಮಿಕ ಕಾರಣ, ಯಾವುದೇ ನೈಸರ್ಗಿಕ ಅನಾಹುತದಿಂದಾಗಿ ಉತ್ಪಾದನೆ ಕುಸಿದಿದೆ ಎಂಬ ಕಾರಣಕ್ಕಾಗಿ ಅಲ್ಲ. ವಾಸ್ತವವಾಗಿ ಈ ವರ್ಷ ಬಂಪರ್ ಬೆಳೆ ಬಂದಿದೆ. ಆ ಬಂಪರ್ ಬೆಳೆಯಿಂದಾಗಿರುವ ಬೆಲೆ ಕುಸಿದಿರುವುದರಿಂದಾಗಿಯೇ ಸಾಲಮನ್ನಾದ ಬೇಡಿಕೆ ಬಂದಿರುವುದು. ಮೇಲೆ ಹೇಳಿದ ಉದಾಹರಣೆಯಲ್ಲಿನ ಮೂಲಬೆಲೆ ಹಾಗೆಯೇ ಉಳಿದಿಲ್ಲವಾದ್ದರಿಂದಾಗಿ.


ಬೆಲೆ ಕುಸಿದಾಗ ಈ ಉದಾಹರಣೆಯಲ್ಲಿ ಏನಾಗುತ್ತದೆ ನೋಡೋಣ.

ನಮ್ಮ ಕೃಷಿಯಲ್ಲಿ, ಸಾಮಾನ್ಯವಾಗಿ, ಬಹುಪಾಲು ರೈತರಿಗೆ ದಾಸ್ತಾನು ಇಡುವ ಸಾಮರ್ಥ್ಯ ಇಲ್ಲವಾದ್ದರಿಂದಾಗಿ, ಉತ್ಪಾದನೆ ಹೆಚ್ಚಿದಾಗ, ಇದು 10% ಎಂದಿಟ್ಟುಕೊಳ್ಳೋಣ, ಬೆಲೆ ಕುಸಿತ 10%ಕ್ಕಿಂತಲೂ ಹೆಚ್ಚಿರುತ್ತದೆ, ಆಮೂಲಕ ಉತ್ಪಾದಕರಿಗೆ ಬೆಳೆಯ ಒಟ್ಟು ಮೌಲ್ಯ ಇಳಿಯುತ್ತದೆ(ತದ್ವಿರುದ್ಧವಾಗಿ, ಉತ್ಪಾದನೆ ಇಳಿದಾಗ ಉತ್ಪಾದಕರಿಗೆ ಹೀಗಾಗುವುದಿಲ್ಲ ಎಂಬುದನ್ನು ಗಮನಿಸಬೇಕು).

ಆದ್ದರಿಂದ ಮೇಲಿನ ಉದಾಹರಣೆಯಲ್ಲಿ, ರೈತ ತೆಗೆದುಕೊಂಡ 100ರೂ. ಸಾಲಕ್ಕೆ ಪ್ರತಿಯಾಗಿ, ಆತ ವ್ಯಾಪಾರಿಗೆ ಮಾರುವ ಉತ್ಪನ್ನದ ಬೆಲೆ ಅದಕ್ಕಿಂತ ಕಡಿಮೆಯಾಗುತ್ತದೆ, ಅದು 70ರೂ. ಎಂದಿಟ್ಟುಕೊಳ್ಳೋಣ. ವ್ಯಾಪಾರಿ ಬ್ಯಾಂಕಿನಿಂದ 70ರೂ. ಸಾಲ ಪಡೆಯುತ್ತಾನೆ, ಅದು ರೈತನ ಮೂಲಕ ಬ್ಯಾಂಕಿಗೆ ಹಿಂದಿರುಗಿ ಬರುತ್ತದೆ. 30ರೂ. ಹಿಂದಿರುಗಿ ಬರುವುದಿಲ್ಲ. ಅದನ್ನು ತೆರುವ ದಾರಿ ರೈತನ ಬಳಿ ಇರುವುದಿಲ್ಲ. ಆಗ ಬ್ಯಾಂಕ್ ಮೇಲೆ ಈ 'ಕಾರ್ಯನಿರ್ವಹಿಸದ ಆಸ್ತಿ'ಯ ಅಂದರೆ ರೈತನ ಸಾಲಬಾಕಿಯ ಹೊರೆ ಬೀಳುತ್ತದೆ.

ಆದರೆ ವ್ಯಾಪಾರಿ ರೈತನಿಂದ 70ರೂ. ತೆ-ತ್ತು ಖರೀದಿಸದ ಬೆಳೆಯನ್ನು ಆತ 70ರೂ.ಗೇನೂ, ವಾಸ್ತವವಾಗಿ ಮೂಲಬೆಲೆಯಾದ 100ರೂ.ಗಿಂತ ಕಡಿಮೆಗೇನೂ ಮಾರುವುದಿಲ್ಲ. ಬಂಪರ್ ಬೆಳೆ ಬಂದಾಗ ಆಗುವ ಬೆಲೆ ಕುಸಿತದ ಪ್ರಯೋಜನ ಬಳಕೆದಾರನಿಗೇನೂ ವರ್ಗಾವಣೆಗೊಳ್ಳುವುದಿಲ್ಲ, ಪೂರ್ಣವಾಗಿಯಂತೂ ಖಂಡಿತವಾಗಿ ಇಲ್ಲ.

ಉದಾಹರಣೆಗೆ, ಕೇರಳದಲ್ಲಿ ಕಾಫಿ ಬೆಳೆಯು ಬೆಲೆಕುಸಿದಾಗ, ಚಿಲ್ಲರೆ ಮಾರುಕಟ್ಟೆಯಲ್ಲಿ ಇನ್‌ಸ್ಟಂಟ್ ಕಾಫಿಯ ಬೆಲೆ ಸ್ವಲ್ಪವೂ ಇಳಿಯಲಿಲ್ಲ. ಇಂದು ಮೋದಿಯವರ ಸ್ವಂತ ರಾಜ್ಯ ಗುಜರಾತದಲ್ಲಿ ನೆಲಗಡಲೆ ಬೆಲೆಗಳು ಕುಸಿದಿವೆ, ಆದರೆ ಇದರ ಅರ್ಥ ನೆಲಗಡಲೆ ಎಣ್ಣೆ ಬಳಸುವವನಿಗೆ ಅದು ಅಗ್ಗವಾಗುತ್ತದೆಯೆಂದೇನಲ್ಲ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಉತ್ಪಾದಕ ಮತ್ತು ಬಳಕೆದಾರನ ಮಧ್ಯೆ ಎಲ್ಲೋ ಒಂದೆಡೆಯಲ್ಲಿ ಈ ಕುಸಿತದ ಫಲಿತಾಂಶವನ್ನು ಹೆಚ್ಚಿನ ಲಾಭವಾಗಿ ಹೀರಿಕೊಳ್ಳಲಾಗುತ್ತದೆ. ಈ ಕ್ಷಣದಲ್ಲಿ ನಾನು ಈ ಫಲಾನಭವಿಯನ್ನು ಸೂಚಿಸಲು 'ವ್ಯಾಪಾರಿ' ಎಂಬ ಪದವನ್ನು ಬಳಸುತ್ತೇನೆ. ಈ ವ್ಯಾಪಾರಿ ಬ್ಯಾಂಕಿನಿಂದ ಪಡೆದ ಸಾಲ 70ರೂ. ಆಗಿದ್ದರೂ, ಆತನ ಬಳಿಯಿರುವ ಸರಕು ದಾಸ್ತಾನಿನ ಮೌಲ್ಯ 100ರೂ. ಆದ್ದರಿಂದ ರೈತನಿಗೆ ಆಗಿರುವ 30ರೂ. ಕೊರತೆ(ಆಮೂಲಕ ಬ್ಯಾಂಕಿನ 30ರೂ. ಸಾಲಬಾಕಿಯ ಸಮಸ್ಯೆ)ಗೆ ಸಮನಾಗಿ ವ್ಯಾಪಾರಿಯ ನಿವ್ವಳ ಮಾಲ್ಯ ಅಷ್ಟೇ ಪ್ರಮಾಣದಲ್ಲಿ ಉತ್ತಮಗೊಂಡಿರುತ್ತದೆ. ಆದರೆ ಬ್ಯಾಂಕು ತನ್ನ ಸಾಲ ವಸೂಲಿಗೆ ವ್ಯಾಪಾರಿಯನ್ನು ಮುಟ್ಟುವಂತಿಲ್ಲ, ರೈತ ಕೂಡ ತನ್ನ ಸಾಲ ಮರುಪಾವತಿಗೆ ಸಂಪನ್ಮೂಲ ಪಡೆಯಲು ವ್ಯಾಪಾರಿಯನ್ನು ಮುಟ್ಟುವಂತಿಲ್ಲ (ವ್ಯಾಪಾರಿಯಿಂದ ರೈತ ಸಾಲ ಮರುಪಾವತಿಗೆ ಸಾಕಷ್ಟು ಸಂಪನ್ಮೂಲವನ್ನು ಪಡೆಯದ್ದರಿಂದಲೇ ಈ ಸಮಸ್ಯೆ ಉಂಟಾಗಿದ್ದರೂ ಕೂಡ).

ಬ್ಯಾಂಕಿಗೆ ಈಗಲೂ ಸಾಲ ಮೊತ್ತ 100ರೂ., 70ರೂ. ವ್ಯಾಪಾರಿಯದ್ದು ಮತ್ತು 30ರೂ. ರೈತನ ವಸೂಲಾಗದ 30ರೂ. ವ್ಯಾಪಾರಿ ಬಳಿಯಿರುವ ದಾಸ್ತಾನಿನ ಮೌಲ್ಯ ಕೂಡ 100ರೂ.(ಬಳಕೆದಾರನಿಗೆ ಆ ಬೆಲೆಯಲ್ಲೆ ಮಾರುವುದು). ಆದರೆ ಬ್ಯಾಂಕು ಈ ಸರಕು ದಾಸ್ತಾನಿನ ಮೇಲೆ ದಾವೆ ಹಾಕುವಂತಿಲ್ಲ, ಅದು 70ರೂ. ಮಾತ್ರ ಕೇಳಬಹುದು. **ಆದ್ದರಿಂದ ನಾವು ಯಾವುದನ್ನು ಮರುಪಾವತಿಯಾಗದ ಸಮಸ್ಯೆ ಎನ್ನುತ್ತೇವೆಯೋ ಅದು ರೈತನಿಂದ ವ್ಯಾಪಾರಿಗೆ ಆದ ವರ್ಗಾವಣೆಯಲ್ಲದೆ ಬೇರೇನೂ ಅಲ್ಲ.** ಈ ವರ್ಗಾವಣೆಯಿಂದ ಬ್ಯಾಂಕಿನ ಸೊತ್ತಿಗೆ ತೊಂದರೆ-ಯಾಗುತ್ತದೆ. ಬ್ಯಾಂಕ್ ಈ 30ರೂ. ವಸೂಲಿಗೆ ರೈತನ ಮೇಲೆ ಒತ್ತಡ ಹಾಕಿದರೆ, ಆತ ದರಿದ್ರನಾಗುತ್ತಾನೆ, ಆತ್ಮಹತ್ಯೆಯನ್ನೂ ಮಾಡಿಕೊಳ್ಳಬಹುದು, ಈಗ ಆಗುತ್ತಿರುವಂತೆ.

ಸಾಲಮನ್ನಾ ಮಾಡಬೇಕೆಂಬ ಪ್ರತಿರೋಧದ ಅಲೆ ಎದ್ದಿರುವುದು ರೈತನ ಇಂತಹ ಹಣೆಬರಹವನ್ನು ತಡೆಯುವ ಒಂದು ಪ್ರಯತ್ನವಾಗಿ.

ಈ ಸರಳ ಉದಾಹರಣೆಯಿಂದ ಕೆಲವು ತೀರ್ಮಾನಗಳು ತಕ್ಷಣವೇ ಹೊರ ಬರುತ್ತವೆ.

ಮೊದಲನೆಯದಾಗಿ, ರೈತ ಸಾಲ ಮರುಪಾವತಿ ಮಾಡದಿರುವುದು ಯಾವುದೇ ಕೆಟ್ಟ 'ಸಾಲಪ್ರವೃತ್ತಿ'ಯಿಂದ ಅಲ್ಲ;

ಎರಡನೆಯದಾಗಿ, ಈಗ ಸಾಲಮನ್ನಾ ರೈತನನ್ನು ಬ್ಯಾಂಕ್‌ನಿಂದ ಋಣಮುಕ್ತಗೊಳಿಸಿದರೂ ಇಂತಹ ಪರಿಸ್ಥಿತಿ ಮುಂದೆಯೂ ಬರಬಹುದು. ಸಾಲಮನ್ನಾದ ಬೇಡಿಕೆ ಮತ್ತೆ-ಮತ್ತೆ ಬರುತ್ತಿದ್ದರೆ, ಅದು ಒಮ್ಮೆ ಸಾಲಮನ್ನಾದ ಪ್ರಯೋಜನ ಪಡೆದ ರೈತರು ಮತ್ತೆ-ಮತ್ತೆ ಅದನ್ನು ಬಯಸುತ್ತಾರೆ ಎಂಬುದರಿಂದಾಗಿ ಅಲ್ಲ, ಅಂದರೆ ರೈತರ ದುರಾಸೆಯಿಂದಾಗಿ ಅಲ್ಲ, ಬದಲಾಗಿ ನಮ್ಮ ಆರ್ಥಿಕದಲ್ಲಿರುವ ಸಾಂಸ್ಥಿಕ ರಚನೆಯಿಂದಾಗಿ, ಬಂಪರ್ ಬೆಳೆ ಬಂದಾಗ ಅವರು ಬೆಲೆ ಕುಸಿತ ಕಾಣಬೇಕಾದ ವ್ಯವಸ್ಥೆಯಿಂದಾಗಿ.

ಮೂರನೆಯದಾಗಿ, ಬ್ಯಾಂಕಿಗೆ ಕೆಟ್ಟಸಾಲದ ಪ್ರಶ್ನೆ ಎದುರಿಸಬೇಕಾಗಿ ಬಂದಿರುವುದು ಅದು ಕೊಟ್ಟ ಸಾಲ ಗಾಳಿಯಲ್ಲಿ ಮಾಯವಾಗಿದೆ ಎಂಬುದರಿಂದ ಅಲ್ಲ, ಬದಲಾಗಿ ಅದು ವ್ಯಾಪಾರಿಯ ಜೇಬಿಗೆ ವರ್ಗಾವಣೆಯಾಗಿದ್ದರಿಂದ- ಇದನ್ನು ಮುಟ್ಟುವ ಶಕ್ತಿ ರೈತನಿಗಿಲ್ಲ, ಬ್ಯಾಂಕಿಗೆ ಅಂತಹ ಅಧಿಕಾರ ಇಲ್ಲ.

ರೈತರು ಸಾಲಮನ್ನಾ ಕೇಳುವ 'ಅಭ್ಯಾಸ' ಮಾಡಿಕೊಂಡಿದ್ದಾರೆ ಎಂದು ಅದನ್ನು ವಿರೋಧಿಸುವವರು, ಅದರ ಬದಲು ಬಂಪರ್ ಬೆಳೆಗಳು ಬಂದಾಗ ಬೆಲೆ ಕುಸಿತವನ್ನು ತಡೆಯಲು ಸೂಕ್ತ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಒತ್ತಾಯಿಸಬೇಕು. ನಿಜ ಹೇಳಬೇಕೆಂದರೆ, **ನವ-ಉದಾರವಾದಿ ಧೋರಣೆಗಳನ್ನು ಜಾರಿಗೊಳಿಸುವ ಮೊದಲು ದೇಶ ಇಂತಹ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ಮಾಡಿತ್ತು. ಭಾರತ ಆಹಾರ ನಿಗಮ(ಎಫ್‌ಸಿಐ) 22 ಬೆಳೆಗಳ ಬೆಂಬಲ ಮತ್ತು ಖರೀದಿ ಬೆಲೆಯನ್ನು ಪ್ರಕಟಿಸುತ್ತಿತ್ತು ಮತ್ತು ಅ ಬೆಲೆಗಳು ಪರಿಣಾಮಕಾರಿಯಾಗಲು ಖರೀದಿ ಕಾರ್ಯಾಚರಣೆಗಳನ್ನು ನಡೆಸುತ್ತಿತ್ತು.**

ವಾಣಿಜ್ಯ ಬೆಳೆಗಳಿಗೆ ಸಂಬಂಧಪಟ್ಟಂತೆ ಹಲವು ಸರಕು ಮಂಡಳಿಗಳಿದ್ದವು, ಕಾಫಿ ಮಂಡಳಿ, ಚಹಾ ಮಂಡಳಿ ಇತ್ಯಾದಿ. ಅವು ಮಾರುಕಟ್ಟೆ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದವು, ಬೆಲೆ ಕುಸಿತವಾದಾಗ ಮಧ್ಯಪ್ರವೇಶಿಸುವುದೂ ಇದರಲ್ಲಿ ಸೇರಿತ್ತು. ನಿಜ, ಇಂತಹ ಮಧ್ಯಪ್ರವೇಶಗಳು ನಿರೀಕ್ಷಿತ ಮಟ್ಟದಲ್ಲಿ ಇರುತ್ತಿರಲಿಲ್ಲ. ಎಫ್‌ಸಿಐ ಸರಿಯಾದ ಸಮಯದಲ್ಲಿ ಖರೀದಿ ಮಾಡುತ್ತಿರಲಿಲ್ಲ. ಎಫ್‌ಸಿಐ ಏಜೆಂಟರು ಮಾರುಕಟ್ಟೆಯಲ್ಲಿ ಕಾಣಿಸಿ ಕೊಳ್ಳುವ ಮೊದಲೇ ಅತ್ಯಂತ ಕಡಿಮೆ ದಾಸ್ತಾನು ಸಾಮರ್ಥ್ಯ ಹೊಂದಿರುವ ಬಡ ಮತ್ತು ಕೆಳ ಮಧ್ಯಮ ರೈತರೂ ಕೂಡ ಅಗ್ಗ ದರಗಳಲ್ಲಿ ತಮ್ಮ ಉತ್ಪನ್ನಗಳನ್ನು ಮಾರಬೇಕಾಗಿ ಬರುತ್ತಿತ್ತು. ಆದರೂ ಕೂಡ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ, ಸ್ವಲ್ಪಮಟ್ಟಿಗೆ ಅದನ್ನು ನಿಭಾಯಿಸುವ ಪ್ರಯತ್ನಗಳಿದ್ದವು.

ಆದರೆ ನವ-ಉದಾರವಾದದೊಂದಿಗೆ ಇವನ್ನೆಲ್ಲ 'ಮಡಿಚಿ ಇಡುವ' ಕೆಲಸವಾಯಿತು. ನಿಜ, ಎಫ್‌ಸಿಐ ಈಗಲೂ ಇದೆ, ಕೆಲವು ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶವನ್ನೂ ಮಾಡುತ್ತದೆ. ಆದರೆ ಅದು ರೈತರಿಗೆ ಅಗತ್ಯವಾಗಿರುವಷ್ಟು ಮಟ್ಟದಲ್ಲಿ ಇಲ್ಲ(ಮುಂದೆ ಇದನ್ನು ಕೂಡ ಡಬ್ಲ್ಯುಟಿಒ ಒಪ್ಪಂದಕ್ಕೆ ತಲೆಬಾಗಿ ತಡೆಯಬಹುದು). ಆದರೆ ಸರಕು ಮಂಡಳಿಗಳ (ಕಾಫಿ ಮಂಡಳಿ ಇತ್ಯಾದಿ) ಮಾರುಕಟ್ಟೆ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದೆ. ಆದರೆ ಈ ಮಂಡಳಿಗಳ ವಾಣಿಜ್ಯ ಬೆಳೆಗಳಿಗೇ ಸಾಲ ಸೌಲಭ್ಯ ಅತಿ ಅಗತ್ಯವಾಗಿರುವುದು.

ಇಂತಹ ಒಂದು ಸಾಂಸ್ಥಿಕ ವ್ಯವಸ್ಥೆ ಮುರಿದು ಬಿದ್ದಿರುವುದೇ ರೈತರ ಸಂಕಟಗಳಿಗೆ, ಆಗಾಗ ಸಾಲಮನ್ನಾ ಕೇಳುವಂತಾಗಿರುವುದು. ಹೀಗೆ ಮುರಿದು ಬಿದ್ದಿರುವುದರ ಫಲಾನುಭವಿಗಳನ್ನು ನಾನು ಇದುವರೆಗೆ 'ವ್ಯಾಪಾರಿ'ಗಳು ಎಂದಿದ್ದೆ. ಇವರಲ್ಲಿ ಈಗ ಬಹುರಾಷ್ಟ್ರೀಯ ಕೃಷಿ ಕಂಪನಿಗಳು, ಮತ್ತು ದೇಶೀ ಕಾರ್ಪೊರೇಟ್-ಹಣಕಾಸು ಕೂಟಗಳು ಸೇರಿರುತ್ತವೆ. ಇವರೆಲ್ಲ ಕೃಷಿ ಸರಕುಗಳ ಮಾರುಕಟ್ಟೆಯನ್ನು ಪ್ರವೇಶಿಸಿದ್ದಾರೆ.

ರೈತರು ಸದ್ಯದ ದುರ್ದೆಸೆಯಿಂದ ಪಾರಾಗಲು ಸಾಲಮನ್ನಾ ಪಡೆಯಬೇಕು ಮಾತ್ರವಲ್ಲ, ಮುಂದೆ ಬೆಲೆ ಕುಸಿತಗಳನ್ನು ಎದುರಿಸಲು ಬೆಲೆ-ಬೆಂಬಲವೂ ಅವರಿಗೆ ಬೇಕಾಗಿದೆ, ಅದನ್ನು ನವ-ಉದಾರವಾದ ಧ್ವಂಸ ಮಾಡಿರುವ ವ್ಯವಸ್ಥೆಯನ್ನು ಮತ್ತೆ ರಚಿಸುವ ಮೂಲಕ ಒದಗಿಸಬೇಕು.

ಬಿಜೆಪಿ ಆಳ್ವಿಕೆಯ ರಾಜಸ್ತಾನದಲ್ಲಿ ಮತ್ತೊಂದು ಚಚ್ಚಿ ಹತ್ಯೆ



ಬಿಜೆಪಿಯ ಆಳ್ವಿಕೆಯ ರಾಜಸ್ತಾನದಲ್ಲಿ ಜನಗಳನ್ನು ಚಚ್ಚಿ ಸಾಯಿಸುವುದು ಸಾಮಾನ್ಯ ಸಂಗತಿಯಾಗುತ್ತಿದೆ. ಹರ್ಯಾಣದ ರೈತ ಪೆಹ್ಲೂ ಖಾನ್ ನಂತರ ಇದರ ಇತ್ತೀಚಿನ ಉದಾಹರಣೆಯೆಂದರೆ ಜೂನ್ 16ರಂದು ಪ್ರತಾಪಗಡದಲ್ಲಿ ಸಿಪಿಐ(ಎಂಎಲ್) ಕಾರ್ಯಕರ್ತ ಮತ್ತು ಕಾರ್ಮಿಕ ಮುಖಂಡ ಝಫರ್ ಹುಸೇನ್ ಹತ್ಯೆ. ಮುನಿಸಿಪಲ್ ಕಮಿಶನರ್ ನಿರ್ದೇಶನದಲ್ಲೇ ಸಫಾಯಿ ಕರ್ಮಚಾರಿಗಳು ಆತನನ್ನು ಬಡಿದು, ತುಳಿದು, ಚಚ್ಚಿ ಸಾಯಿಸಿದ್ದಾರೆ ಎಂದು ವರದಿಯಾಗಿದೆ.

'ಸ್ವಚ್ಛ ಭಾರತ್ ಅಭಿಯಾನ್' ಅಡಿಯಲ್ಲಿ ಬಯಲಿನಲ್ಲಿ ಮಲವಿಸರ್ಜನೆ ಮಾಡುವುದನ್ನು ತಡೆಯುವ ಹೆಸರಿನಲ್ಲಿ ಬಯಲಲ್ಲಿ ಕೂರುವವರನ್ನು ಅವಮಾನ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದ ಮುನಿಸಿಪಲ್ ಕಮಿಶನರ್ ನೇತೃತ್ವದಲ್ಲಿ ಕೆಲವು ಬಯಲಲ್ಲಿ ಕುಳಿತಿದ್ದ ಮಹಿಳೆಯರ ಫೋಟೋ ತೆಗೆಯುವುದನ್ನು ವಿರೋಧಿಸಿ ತಡೆದದ್ದೇ ಝುಫರ್ ಹುಸೇನ್ ಮಾಡಿದ 'ತಪ್ಪು'.

ಈ ಮಹಿಳೆಯರು ಶೌಚಾಲಯ ವ್ಯವಸ್ಥೆ ಇಲ್ಲದ ಒಂದು ಕೇರಿಯ ನಿವಾಸಿಗಳಾಗಿದ್ದು ನಿರ್ವಾಹವಿಲ್ಲದೆ ಬಯಲಿಗೆ ಹೋಗಬೇಕಾಗುತ್ತಿದೆ. ವಾಸ್ತವವಾಗಿ ಝುಫರ್ ಹುಸೇನ್ ಅವರೇ ನಗರ ಸಭೆಗೆ ಈ ಕುರಿತು ಮನವಿ ಪತ್ರ ಸಲ್ಲಿಸಿದ್ದರು. ಸಾಮುದಾಯಿಕ ಶೌಚಾಲಯಗಳನ್ನು ಕಟ್ಟಬೇಕು, ಸ್ವಚ್ಛತಾ ಅಭಿಯಾನ್ ಅಡಿಯಲ್ಲಿ ಕಟ್ಟಿದ ಶೌಚಾಲಯಗಳು ಉಪಯೋಗಿಸಲಾರದಂತಿದ್ದು ಅವನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದರು. ಅದಕ್ಕೆ ಈ ಮುನಿಸಿಪಲ್ ಕಮಿಶನರ್ ಸ್ಪಂದಿಸಿರಲಿಲ್ಲ.

ದಲಿತರು ಮತ್ತು ಅಲ್ಪಸಂಖ್ಯಾತರನ್ನು ಚಚ್ಚಿ ಸಾಯಿಸುವಂತೆ, ಆ ಬಗ್ಗೆ ಸರಕಾರದ, ಆಳುವ ಪಕ್ಷದ ದಿವ್ಯಮೌನವೂ ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಆದರೆ ಈ ಬಾರಿ ಮುಖ್ಯಮಂತ್ರಿಗಳು ಝುಫರ್ ಹುಸೇನ್ 'ಸಾವು' ದುರದೃಷ್ಟಕರ ಎಂದಿದ್ದಾರೆ. ಅಂ- ದರೆ ಮೌನ ಮುರಿದದ್ದು 'ಹತ್ಯೆ'ಯನ್ನು 'ಸಾವು' ಆಗಿ ಪರಿವರ್ತಿಸಲಿಕ್ಕಾಗಿಯೇ ಎಂಬ ಸಂದೇಹವನ್ನು ಉಂಟು ಮಾಡಿದೆ.

ಇದು ಅಮಾನುಷ ಹತ್ಯೆಯ ಪ್ರಕರಣ ಮಾತ್ರವಲ್ಲ, ಲೈಂಗಿಕ ಕಿರುಕುಳದ ಅಪರಾಧದ ಪ್ರಕರಣ ಕೂಡ. ಮುನಿಸಿಪಲ್ ಕಮಿಶನರ್ ಸೇರಿದಂತೆ ಎಲ್ಲ ಹಲ್ಲೆಕೋರರನ್ನು ಬಂಧಿಸಬೇಕು, ಝುಫರ್ ಕುಸೇನ್ ಕುಟುಂಬಕ್ಕೆ ಸಾಕಷ್ಟು ಪರಿಹಾರ ಒದಗಿಸಬೇಕು ಮತ್ತು ಸ್ವಚ್ಛ ಭಾರತ ಅಭಿಯಾನ್ ಅಡಿಯಲ್ಲಿ ಬಲವಂತದ ಮತ್ತು ಮಹಿಳಾ–ವಿರೋಧಿ ಕ್ರಮಗಳನ್ನು ನಿಲ್ಲಿಸಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.



ಆಗ್ರಾದ ತಾಯಿಗೆ ಕಣ್ಣೂರಿನ ಮಕ್ಕಳ ನೆರವು

ಪತ್ರಿಕೆಗಳಲ್ಲಿ, ಚಾನೆಲ್‌ಗಳಲ್ಲಿ ಒಂದು ಮನಕಲಕುವ ಸುದ್ದಿ ಪ್ರಕಟವಾಗಿತ್ತು. ಉತ್ತರಪ್ರದೇಶದ ಆಗ್ರಾದ ಇಕೊ ಕಾಲನಿ ನಿವಾಸಿ ಆರತಿ ಶರ್ಮ ತಮ್ಮ ಮೂರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗನ ಶಿಕ್ಷಣದ ಖರ್ಚಿಗೆ ತನ್ನ ಮೂತ್ರಪಿಂಡ ಮಾರುವುದಾಗಿ ಪ್ರಕಟಿಸಿದ್ದಳು.

ಆಕೆಯ ಗಂಡನ ರೆಡಿಮೇಡ್ ಗಾರ್ಮೆಂಟ್ ವ್ಯಾಪಾರ ಇತ್ತು. ನೋಟು ರದ್ದತಿಯ ನಂತರ ಅದು ಮುಚ್ಚಿ ಹೋಗಿ ಆತ ಟ್ಯಾಕ್ಸಿ ಡ್ರೈವರ್ ಕೆಲಸ ಮಾಡಲಾರಂಭಿಸಿದ. ತಿಂಗಳಿಗೆ 5000ರೂ. ಮಾತ್ರ ಆದಾಯ–ಇದರಲ್ಲಿ ನಾಲ್ಕು ಮಕ್ಕಳ ಶಿಕ್ಷಣ ಸಾಧ್ಯವಿರಲಿಲ್ಲ. ಆದರೆ ಮಕ್ಕಳಿಗೆ ಶಿಕ್ಷಣ ಕೊಡಿಸಲೇ ಬೇಕೆಂದು ಪಣ ತೊಟ್ಟ ಆರತಿ ಎಪ್ರಿಲ್ 29 ರಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥರನ್ನು ಭೇಟಿಯಾದಳು. ಅದಕ್ಕಾಗಿ ತನ್ನ ಎಲ್‌ಪಿಜಿ ಸಿಲಿಂಡರನ್ನು ಕಾಳಸಂತೆಯಲ್ಲಿ ಮಾರಿದಳು. ಮುಖ್ಯಮಂತ್ರಿಗಳು ನೆರವಿನ ಭರವಸೆ ನೀಡಿದರೂ ಇದುವರೆಗೆ ಅದು ಸಿಕ್ಕಿಲ್ಲ. ಜಿಲ್ಲಾ ಆಡಳಿತವೂ ನೆರವು ನೀಡಲು ನಿರಾಕರಿಸಿತು.

ಹತಾಶಳಾದ ಆರತಿ ಫೇಸ್‌ಬುಕ್‌ನಲ್ಲಿ ಒಂದು ಪೋಸ್ಟ್ ಹಾಕಿದಳು. ಮೂತ್ರಪಿಂಡ ಮಾರುವುದಾಗಿಯೂ ಹೇಳಿದ್ದ ಸುದ್ದಿ ಕೇರಳದ 'ದೇಶಾಭಿಮಾನಿ' ಪತ್ರಿಕೆಯಲ್ಲಿಯೂ ಬಂದಿತ್ತು. ಇದನ್ನು ನೋಡಿದ ಕಣ್ಣೂರಿನ ತಲಿಪರಾಂಬ ಕ್ಷೇತ್ರದ ಶಾಸಕ ಜೇಮ್ಸ್ ಮ್ಯಾಥ್ಯು ಅವರು ತಮ್ಮ ಕ್ಷೇತ್ರದ ಮಕ್ಕಳಿಗೆ ಈ ತಾಯಿಯ ನೆರವಿಗೆ ಬರುವಂತೆ ಕೋರಿದರು. ಅದಕ್ಕೆ ಸ್ಪಂದಿಸಿದ ಈ ಕ್ಷೇತ್ರದ ಮಕ್ಕಳು ತಂತಮ್ಮ ಶಾಲೆಗಳಲ್ಲಿ ಡಬ್ಬ ಹಿಡಿದು ಹಣ ಸಂಗ್ರಹಕ್ಕಿಳಿದರು. ತಲಿಪರಾಂಬದ ಜನರು ಆರತಿಯ ಮಕ್ಕಳಿಗೆ ಕೇರಳದ ಯಾವುದೇ ಪಠ್ಯಕ್ರಮದಲ್ಲಿ ಪುಕ್ಕಟೆ ಶಿಕ್ಷಣ ಒಗಗಿಸಲು ಸಿದ್ಧರಿದ್ದಾರೆ ಎಂದು ಪ್ರಕಟಿಸಿದರು. ಅದು ಅನಾನುಕೂಲವಾದರೆ ಇಲ್ಲಿಯ ಮಕ್ಕಳು ಹಣ ಸಂಗ್ರಹಿಸಸಿ ಕೊಡುತ್ತಾರೆ, ತಾವು ಮೂತ್ರಪಿಂಡ ಮಾರುವ ಯೋಚನೆಯನ್ನು ಬಿಡಿ ಎಂದು ಹೇಳಿದರು.

ತಲಿಪರಾಂಬದ ಮಕ್ಕಳು ಒಟ್ಟು ರೂ.2,03,651 ಸಂಗ್ರಹಿಸಿದರು. ಇದನ್ನು ಮ್ಯಾಥ್ಯು ಅವರಿಗೆ ಒಪ್ಪಿಸುವ ಕಾರ್ಯಕ್ರಮವನ್ನು ಕರಿಕಯಂ ಲೋಯರ್ ಪ್ರೈಮರಿ ಸ್ಕೂಲಿನಲ್ಲಿ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ವೇದಿಕೆಯ ಮೇಲೆ ಬಂದ ಈ ಭಾಗದ ಸುಪರಿಚಿತ ಬಾಲ ಕಲಾವಿದೆ ನಿರಂಜನಾ ತನ್ನ ಕಿವಿಯೋಲೆಗಳನ್ನು ಕೊಟ್ಟು ಮೂವರು ಸೋದರಿಯರು ಮತ್ತು ಒಬ್ಬ ಸೋದರನ ಶಿಕ್ಷಣಕ್ಕೆ ನೆರವಾಗುವ ಈ ಮಿಶನ್‌ನಲ್ಲಿ ಭಾಗವಹಿಸಲು ತನಗೆ ಸಂತೋಷವಾಗುತ್ತಿದೆ ಎಂದಳು.

ಈ ಹಣವನ್ನು ಆಗ್ರಾದಲ್ಲಿ ನಡೆಸಲಿರುವ ಒಂದು ಸಮಾರಂಭದಲ್ಲಿ ಆರತಿಯವರಿಗೆ ಒಪ್ಪಿಸಲಾಗುವುದು, ಇದಕ್ಕಾಗಿ ಉತ್ತರಪ್ರದೇಶದ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಮಧು ಗರ್ಗ್ ಅವರನ್ನು ಸಂಪರ್ಕಿಸಲಾಗಿದೆ ಎಂದು ಮ್ಯಾಥ್ಯು ಹೇಳಿರುವುದಾಗಿ ವರದಿಯಾಗಿದೆ.

ಬಿಜೆಪಿ ಮುಖಂಡರು 'ಕಮ್ಯುನಿಸ್ಟ್ ಭಯೋತ್ಪಾದನೆ'ಯ ಜಿಲ್ಲೆ ಎಂದು ಪ್ರಚಾರ ಮಾಡುತ್ತಿರುವ ಕಣ್ಣೂರು ಜಿಲ್ಲೆಯಲ್ಲಿ ನಡೆದಿರುವ ಘಟನೆ ಇದು.

ಸಿಪಿಐ(ಎಂ) ಕೊಯಮತ್ತೂರು ಜಿಲ್ಲಾ ಸಮಿತಿ ಕಚೇರಿಯ ಮೇಲೆ ಬಾಂಬು ದಾಳಿ

ಜೂನ್ 16ರ ಮುಂಜಾನೆ ತಮಿಳುನಾಡಿನ ಕೊಯಮತ್ತೂರು ಜಿಲ್ಲಾ ಸಮಿತಿ ಕಚೇರಿಯ ಮೇಲೆ ಪೆಟ್ರೋಲ್ ಬಾಂಬ್ ದಾಳಿ ನಡೆದಿದೆ. ಇದರಲ್ಲಿ ಪಕ್ಷದ ಕಾರು ಮತ್ತು ಕಟ್ಟಡದ ಕಿಟಕಿಗಳಿಗೆ ಹಾನಿ ತಟ್ಟಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಇದನ್ನು ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ಪಕ್ಷದ ಕಚೇರಿಗಳು ದುಡಿಯುವ ಜನಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ದುಡಿಯುತ್ತಿವೆ. ಈ ಹಿಂದೆ ಕೊಯಮತ್ತೂರನ್ನು ಕೋಮುವಾದಿ ಹಿಂಸಾಚಾರ ತಟ್ಟಿದಾಗ ಜನಗಳ ಐಕ್ಯತೆಯನ್ನು ಮತ್ತು ಕೋಮು ಸಾಮರಸ್ಯವನ್ನು ಕಾಪಾಡುವಲ್ಲಿ ಪಕ್ಷ ಒಂದು ಮಹತ್ವದ ಪಾತ್ರ ವಹಿಸಿದೆ. ಈ ಪ್ರದೇಶದಲ್ಲಿ ಜನಗಳ ಐಕ್ಯತೆ ಮತ್ತು ಶಾಂತಿ ಕೆಡಿಸುವ ಶಕ್ತಿಗಳು ಬೆಳೆಯುತ್ತಿರುವುದು ಬಹಳ ಆತಂಕದ ವಿಷಯ, ಇತ್ತೀಚೆಗೆ ಕನ್ಯಾಕುಮಾರಿ ಜಿಲ್ಲೆಯಲ್ಲೂ ಪಕ್ಷದ ಕಚೆರಿಯ ಮೇಲೆ ದಾಳಿ ಮಾಡಿ ಧ್ವಜಸ್ತಂಭವನ್ನು ಮುರಿಯಲಾಗಿತ್ತು ಎಂದು ಕಾರ್ಯದರ್ಶಿ ಮಂಡಳಿ ಹೇಳಿದೆ.


ದಾಳಿಕೋರರನ್ನು ತಕ್ಷಣವೇ ಬಂಧಿಸಬೇಕು ಮತ್ತು ಕಾನೂನಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಇಂತಹ ಹೆಚ್ಚುತ್ತಿರುವ ಹಿಂಸಾತ್ಮಕ ಚಟುವಟಿಕೆಗಳನ್ನು ನಿಲ್ಲಿಸಲು ಪೋಲೀಸರು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದೆ. ತಮಿಳುನಾಡಿನ ಪ್ರಜಾಪ್ರಭುತ್ವ ಶಕ್ತಿಗಳು ಈ ಹೀಸಾಕೃತ್ಯಗಳ ವಿರುದ್ಧ ದನಿಯೆತ್ತಬೇಕು ಎಂದೂ ಅದು ಕರೆ ನೀಡಿದೆ.

ಶಿಮ್ಲಾ ನಗರಸಭಾ ಚುನಾವಣೆಗಳು: ಮತ್ತೆ ಆಳುವ ವರ್ಗಗಳ ಕೈಮೇಲು

ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದ ನಗರಸಭೆ ಒಂದು ವಿಶಿಷ್ಟತೆಯನ್ನು ಹೊಂದಿತ್ತು. ಐದು ವರ್ಷಗಳ ಹಿಂದೆ ನಡೆದ ಚುನಾವಣೆಯಲ್ಲಿ 25 ವಾರ್ಡುಗಳಲ್ಲಿ 12 ಬಿಜೆಪಿ, 11 ಕಾಂಗ್ರೆಸ್ ಮತ್ತು 2 ಸಿಪಿಐ(ಎಂ) ಗೆದ್ದಿದ್ದವು. ಆದರೆ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ ನೇರ ಚುನಾವಣೆಗಳಿದ್ದವು ಇವೆರಡನ್ನೂ ಸಿಪಿಐ(ಎಂ) ಗೆದ್ದುಕೊಂಡಡದ್ದ- ರಿಂದ ನಗರಸಭೆಯ ಆಳ್ವಿಕೆ ಸಿಪಿಐ(ಎಂ) ಕೈಗೆ ಬಂದಿತ್ತು. ಆದರೆ ಚುನಾಯಿತ ಮಂಡಳಿಯಲ್ಲಿ ಆಳುವ ವರ್ಗಗಳನ್ನು ಪ್ರತಿನಿಧಿಸುವ ಬಿಜೆಪಿ ಮತ್ತು ಕಾಂಗ್ರೆಸಿನವರದ್ದೇ ಮೇಲುಗೈಯಿತ್ತು. ಆದರೂ ಸಿಪಿಯ(ಎಂ)ನ ಮೇಯರ್ ಮತ್ತು ಉಪಮೇಯರ್ ಕಳೆದ ಐದು ವರ್ಷಗಳಲ್ಲಿ ನಗರದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ದುಡಿದಿದ್ದರು. ಆದರೂ ಈಗಲೂ ಆಳುವ ವರ್ಗಗಳ ಪ್ರತಿನಿಧಿಗಳ ಪ್ರಾಬಲ್ಯ ಹಾಗೇ ಇದೆ, ತುಸು ಹೆಚ್ಚೇ ಅಗಿದೆ.

ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಕೈಜೋಡಿಸಿ ಮೇಯರ್ ಮತ್ತು ಉಪಮೇಯರ್‌ಗೆ ನೇರ ಚುನಾವಣೆಗಳನ್ನು ರದ್ದು ಮಾಡಿದರು. ವಾರ್ಡುಗಳ ಸಂಖ್ಯೆಯನ್ನು 25ರಿಂದ 34ಕ್ಕೆ ಏರಿಸಿದರು. ಈ ರೀತಿ ವಾರ್ಡುಗಳ ಸಂಖ್ಯೆಯನ್ನು ಏರಿಸುವಾಗ ಕ್ಷೇತ್ರಗಳ ಮರುವಿಂಗಡಣೆಯನ್ನು ಬೇಕಾಬಿಟ್ಟಿಯಾಗಿ ಮಾಡಲಾಯಿತು. ಇದರಿಂದಾಗಿ ಕೆಲವು ವಾರ್ಡ್‌ಗಳಲ್ಲಿ 800 ಮತದಾರರಿದ್ದರೆ, ಇನ್ನು ಕೆಲವು ವಾರ್ಡುಗಳಲ್ಲಿ 4000ದ ವರೆಗೂ ಮತದಾರರಿದ್ದರು. ಇದಲ್ಲದೆ ಮತದಾರ ಪಟ್ಟಿಯಲ್ಲಿ ಬಹಳಷ್ಟು ಏರುಪೇರುಗಳಿದ್ದವು. ಇದನ್ನು ಸರಿಪಡಿಸಿ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಲಾಗಿತ್ತು. ಆದರೆ ಅದೇ ಮತದಾರ ಪಟ್ಟಿಯ ಆಧಾರದಲ್ಲಿ ಚುನಾವಣೆ ನಡೆದಿದೆ. ಚುನಾವಣೆ ಪಕ್ಷದ ಆಧಾರದಲ್ಲಿ ನಡೆಯಬಾರದು ಎಂದು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಹೇಳಿದ್ದರೂ 'ಅನಧಿಕೃತವಾಗಿ ಪಕ್ಷಗಳ ಆದಾರದಲ್ಲೇ ನಡೆಯಿತು. ಬಿಜೆಪಿ 34ರಲ್ಲಿ 17, ಕಾಂಗ್ರೆಸ್ 12 , 4 ಪಕ್ಷೇತರರು, ವಾಸ್ತವವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಬಂಡಾಯ ಅಭ್ಯರ್ಥಿಗಳು ಗೆದ್ದರು. ಸಿಪಿಐ(ಎಂ) ಒಂದು ಸ್ಥಾನವನ್ನು ಮಾತ್ರ ಪಡೆಯಿತು. ಬಿಜೆಪಿ ಕಳೆದ ಬಾರಿಯಂತೆ ಅರ್ಧದಷ್ಟು ಸ್ಥಾನಗಳಲ್ಲಿ ಮಾತ್ರ ಗೆದ್ದಿತು. ನಿಚ್ಚಳ ಬಹುಮತ ಪಡೆಯದಿದ್ದರೂ, ಯಥಾಪ್ರಕಾರ ಕುದುರೆ ವ್ಯಾಪಾರ ನಡೆಸಿ ಬಿಜೆಪಿಯ ಕೌನ್ಸಿಲರುಗಳು ಮೇಯರ್ ಮತ್ತು ಉಪಮೇಯರ್ ಆಗಿ ಚುನಾಯಿತರಾಗಿದ್ದಾರೆ.

ಕಳೆದ ಬಾರಿ 2ಸ್ಥಾನಗಳನ್ನು ಪಡೆದಿದ್ದ ಸಿಪಿಐ(ಎಂ) ಈ ಬಾರಿ ಕೇವಲ ಒಂದನ್ನು ಮಾತ್ರ ಪಡೆದಿದೆ. ಆದರೆ ಇನ್ನು ಮೂರು ಕ್ಷೇತ್ರಗಳಲ್ಲಿ ಗೆಲುವಿನ ಬಹಳ ಹತ್ತಿರ ಬಂದಿದೆ. ಆದರೂ ಐದು ವರ್ಷಗಳ ಕಾಲ ಉತ್ತಮ ಕೆಲಸ ಮಾಡಿದರೂ ಮತಗಳಿಕೆ 22% ದಿಂದ 13% ಕ್ಕೆ ಇಳಿದಿರುವ ಬಗ್ಗೆ ವಿಮರ್ಶೆ ನಡೆಸುವುದಾಗಿ ಪಕ್ಷದ ಮುಖಂಡರು ಹೇಳಿದ್ದಾರೆ.



ಮನರೇಗದಲ್ಲಿ ಗರಿಷ್ಟ ಕೆಲಸ ನಿರ್ಮಾಣಕ್ಕೆ ತ್ರಿಪುರಾಕ್ಕೆ ಅತ್ಯುನ್ನತ ಪ್ರಶಸ್ತಿ

ತ್ರಿಪುರಾದ ದಕ್ಷಿಣ ಜಿಲ್ಲೆ, ಢಲಾಯ್ ಜಿಲ್ಲೆ ಮತ್ತು ಗಿರನಿಯ ಬ್ಲಾಕ್‌ನ ಶಚಿಂದ್ರನಗರ ಗ್ರಾಮ ಪಂಚಾಯ್ತಿಗೆ ಭಾರತ ಸರಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಪ್ರಶಸ್ತಿ ನೀಡಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಅಡಿಯಲ್ಲಿ ಅತಿ ಹೆಚ್ಚು ಕೆಲಸದದ ದಿನಗಳ ನಿರ್ಮಾಣ ಮಾಡಿರುವುದಕ್ಕೆ ಈ ಪ್ರಶಸ್ತಿ. ತ್ರಿಪುರ ಸತತವಾಗಿ ಈ ಯೋಜನೆಯಲ್ಲಿ ಗರಿಷ್ಟ ದಿನಗಳ ಕೆಲಸ ನಿರ್ಮಿಸುತ್ತ ಬಂದಿದೆ.

ವರ್ಗ ರಾಜಕೀಯ ಮುನ್ನೆಲೆಗೆ ಬಂದಿದೆ
ಮೇ ಗೆದ್ದೂ ಸೋತರು, ಕಾರ್ಬಿನ್ ಸೋತೂ ಗೆದ್ದರು!

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬ್ರಿಟನ್ ಸಂಸತ್ 650 ಸದಸ್ಯರ ಬಲಹೊಂದಿದೆ. ಇದೇ ಜೂನ್ 8 ರಂದು ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷದ ಪ್ರಧಾನಿ ತೆರೇಸಾ ಮೇ ನೇತೃತ್ವದ ಕನ್ಸರ್ವೇಟೀವ್ ಪಕ್ಷವು 318 ಸ್ಥಾನ ಪಡೆದು ದೊಡ್ಡ ಪಕ್ಷವಾಗಿ ಹೊರಹೊಮ್ಮಿದಾಗ್ಯೂ ಬಹುಮತಕ್ಕೆ ಇನ್ನು 8 ಸ್ಥಾನಗಳು ಕಡಿಮೆಯಿದ್ದು, ಇದೀಗ ಅಲ್ಪ ಸಂಖ್ಯಾತ ಸರ್ಕಾರವಾಗಿದೆ. ಚುನಾವಣೆಗೆ ಇನ್ನು ಮೂರು ವರ್ಷಗಳ ಅವಧಿ ಇದ್ದರೂ ಸಹ, ಪ್ರಧಾನಿ ತೆರೇಸಾ ಮೇ ಯವರು, ತನ್ನ ಒಣ ಪ್ರತಿಷ್ಠೆಯನ್ನು ಪಣಕ್ಕಿಟ್ಟು ಅನಗತ್ಯವಾಗಿ ಕ್ಷಿಪ್ರ ಚುನಾವಣೆ ನಡೆಸಿ, ಭಾರೀ ಮುಖಭಂಗಕ್ಕೆ ಒಳಗಾಗಿದ್ದಾರೆ. ಎರಡು ವರ್ಷಗಳ ಹಿಂದೆ 331 ಸ್ಥಾನ ಗಳಿಸಿದ್ದ ಇವರ ಕನ್ಸರ್ವೇಟೀವ್ ಪಕ್ಷವು 13 ಸ್ಥಾನಗಳನ್ನು ಕಳೆದುಕೊಂಡಿದೆ. ಸ್ಕಾಟ್ಲ್ಯಾಂಡಿನಲ್ಲಿ ಸ್ಕಾಟಿಶ್ ನ್ಯಾಶನಲ್ ಪಾರ್ಟಿಯ ಬೆಂಬಲದಲ್ಲಿ ತೀವ್ರ ಕುಸಿತ ಇಲ್ಲದಿದ್ದರೆ ಇನ್ನಷ್ಟು ಸ್ಥಾನಗಳನ್ನು ಕಳೆದುಕೊಳ್ಳುತ್ತಿದ್ದರು.

ಇದರಿಂದಾಗಿ ಪ್ರಧಾನಿ ಮೆ ಅತಂತ್ರದ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇದೇ ಜೂನ್ 19 ರಿಂದ ಆರಂಭಗೊಳ್ಳುವ (ಈಗಾಗಲೇ ಆರಂಭಗೊಂಡಿದೆ) ಬ್ರೆಕ್ಸಿಟ್ ಮಾತುಕತೆಯಲ್ಲಿ ಪಾಲ್ಗೊಳ್ಳುವ ಮುನ್ನ, ಸಂಸತ್ ಚುನಾವಣೆ ನಡೆಸಿ ತನ್ನ ಪಕ್ಷದ ಬಲವನ್ನು ಮತ್ತಷ್ಟುಹೆಚ್ಚಿಸಿಕೊಂಡುಯುರೋಪಿನ್ ಒಕ್ಕೂಟದಿಂದ ಬ್ರಿಟನ್ ಹೊರಬರುವ ತನ್ನ ನಿಲುವನ್ನು ಗರ್ವದಿಂದ ಎತ್ತಿಯಿಡಿಯಲು ಹೋಗಿ ಮುಗ್ಗರಿಸಿ ಬಿದ್ದಿದ್ದಾರೆ. ಇವರು ಚುನಾವಣೆಯಲ್ಲಿ ಕೊಟ್ಟಂತ ಘೋಷಣೆ "ಬಲವಾದ ಮತ್ತು ಸ್ಥಿರವಾದ" (Strong and stable) ಹೋಗಿ, ಇದೀಗ ದುರ್ಬಲ, ಅನಿಶ್ಚಿತತೆಯ ಹಾಗೂ ಅಲುಗಾಡುವ ಸರ್ಕಾರ ಬಂದಿದೆ. ಅಲ್ಲದೆ, ಬ್ರೆಕ್ಸಿಟ್ ಮಾತುಕತೆಯಲ್ಲಿ ಮೇ ಯವರ ಸ್ಥಿತಿ ಮತ್ತಷ್ಟು ಕುಗ್ಗಿ ಹೋಗುವ ಸಂಭವ ಕಾಣುತ್ತಿದೆ. ಕ್ಷಿಪ್ರ ಚುನಾವಣೆ ನಡೆಸಿ, 'ಕಲ್ಲಿನ ಬಂಡೆಗೆ ತಲೆ ಚಚ್ಚಿ–ಕೊಂಡಂತಾಗಿದೆ' ಪ್ರಧಾನಿ ತೆರೇಸಾ ಮೇ ಯವರ ಸ್ಥಿತಿ ಎಂದು ಬ್ರಿಟನ್ನಿನ ಮಾಧ್ಯಮಗಳು, ರಾಜಕೀಯ ಪರಿಣತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಉಳಿದಂತೆ ವಿರೋಧ ಪಕ್ಷದ ಜೆರೆಮಿ ಕಾರ್ಬಿನ್ ನಾಯಕತ್ವದ ಲೇಬರ್ ಪಕ್ಷ 30 ಸೀಟುಗಳನ್ನು ಹೆಚ್ಚಿಗೆ ಪಡೆದು 260 ಸ್ಥಾನಗಳನ್ನು ಪಡೆದಿದೆ. ಸ್ಕಾಟಿಶ್ ನ್ಯಾಶನಲ್ ಪಾರ್ಟಿ 35, ಲಿಬರಲ್ ಡೆಮಾಕ್ರಟ್ಸ್ 12, ಇತರರು 23 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ, ತೆರೇಸಾ ಮೆ ಯವರ ಕ್ಷಿಪ್ರ ಚುನಾವಣೆಯ ಜೂಜಿಗೆ ಸೂಕ್ತ ಉತ್ತರ ನೀಡಿದ್ದಾರೆ. ಸ್ಕಾಟಿಶ್ ನ್ಯಾಶನಲ್ ಪಾರ್ಟಿ 21 ಸೀಟುಗಳನ್ನು ಕಳೆದುಕೊಂಡಿದೆ.

ಸಂಸತ್‌ನಲ್ಲಿ ಉಂಟಾಗಿರುವ ಪೂರ್ಣ ಅತಂತ್ರ ಬಿಕ್ಕಟ್ಟುಗಳಿಂದಾಗಿ, ಮೆ'ಯವರ ಸರ್ಕಾರ ಬದುಕುಳಿಯುವುದು ಕಷ್ಟ ಸಾಧ್ಯವಾಗಿದೆ. ಇದ–ರಿಂದ ಸಂಶಯಾಸ್ಪದವಾದ ಹಿಂಬದಿ ಒಪ್ಪಂದಗಳು ಏರ್ಪಾಡಾಗಿ, ಸುದೀರ್ಘಕಾಲದ ಸಾಂವಿಧಾನಿಕ ಕಾರ್ಯ ವಿಧಾನಗಳ ಅಭೂತಪೂರ್ವ ಅಡೆ–ತಡೆಗಳು ಉಂಟಾಗುವ ಸಂಭವ ಕಾಣುತ್ತಿದೆ. ಹಣದುಬ್ಬರ ದ ತೀವ್ರ ಏರಿಕೆ ಮತ್ತು ಜೀವನ ಮಟ್ಟದ ಮೇಲೆ ಪರಿಣಾಮ ಬೀರಿ ಮತ್ತಷ್ಟು ಕುಸಿತಕ್ಕೆ ಎಡೆಮಾಡಿಕೊಡುತ್ತದೆ.

ಅತಂತ್ರ ಟೋರಿ ಸರಕಾರ

ಬ್ರಿಟಿಷ್ ಮತ್ತು ಅಂತರರಾಷ್ಟ್ರೀಯ ಬಂಡವಾಳಶಾಹಿಯ ದೃಷ್ಟಿಯಲ್ಲಿ ಮೇ ಯವರ



ದುರಂತಮಯ ತಪ್ಪುಗ್ರಹಿಕೆಯನ್ನು ಕಾರ್ಮಿಕ ನಾಯಕ ಜೆರೆಮಿ ಕಾರ್ಬಿನ್ ಮತ್ತು ಅವರ ಲೇಬರ್ ಪಡೆಯ ಕಾರ್ಯಕರ್ತರು ಪ್ರತಿಭಾ ಪೂರ್ಣವಾಗಿ ಬಳಸಿಕೊಂಡರು. ಹಾಗೂ ಬ್ರಿಟಿಷ್‌ರಲ್ಲಿ ವರ್ಗ ರಾಜಕೀಯವನ್ನು ಪುನರುಜ್ಜೀವನಗೊಳಿಸಿದರು. ಮಾತ್ರವಲ್ಲದೆ ಮಾಜಿ ಲೇಬರ್ ಪ್ರಧಾನಿ ಟೊನಿ ಬ್ಲೇರ್ ಅವರ ರಾಜಕೀಯ ಧೋರಣೆ "ಮೂರನೇ ಮಾರ್ಗ"ವನ್ನು ಹೂತು ಹಾಕಿದ್ದಾರೆ.

ರಾಜಕೀಯ ಬಿಕ್ಕಟ್ಟು ವಿಪರೀತ ದುರಂತದ ಮಟ್ಟ ಮುಟ್ಟಿದೆ. ಮತದಾನವಾದ ಒಂದು ವಾರದ ನಂತರ, ತೆರೇಸಾ ಮೇ ಯವರು ಸಂಸತ್ತಿನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಸಹ, ಸರ್ಕಾರವನ್ನು ರಚಿಸಲು ಸಾಧ್ಯವಾಗಿರಲಿಲ್ಲ. ತನ್ನ ತಪ್ಪಿನ ಅರಿವಿನಿಂದಾಗಿ ಆಗಿರುವ ಮುಖಭಂಗವನ್ನು ಒಪ್ಪಿಕೊಳ್ಳದೆ, ತೀವ್ರ ಪ್ರತಿಗಾಮಿ ಪಕ್ಷವಾದ ಟೋರಿ–ಡೆಮಾಕ್ರಾಟಿಕ್ ಯೂನಿಯನಿಸ್ಟ್ ಪಕ್ಷ(ಡಿ.ಯು.ಪಿ) ಯೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರ ಉಳಿಸಿಕೊಳ್ಳಲು ಅಸಂವಿಧಾನಿಕ ಹಾಗೂ ಬ್ರಿಟಿಷ್ ಜನತೆಯ ವಿರುದ್ಧ ಹೆಜ್ಜೆ ಇಡಲು ಇನ್ನಿಲ್ಲದ ಪ್ರಯತ್ನದಲ್ಲಿ ತೊಡಗಿದ್ದಾರೆ. ಇದರಿಂದ ಕನ್ಸರ್ವೇಟಿವ್ ಪಕ್ಷದಲ್ಲೇ ಒಡಕು ಉಂಟಾಗುವ ಸಂಭವ ಹೆಚ್ಚಾಗಿದೆ. ಡಿಯುಪಿ ಉತ್ತರ ಐರ್ಲೆಂಡಿನ ಮೂಲದ ಕ್ಯಾಥೋಲಿಕ್–ವಿರೋಧಿ ಪಕ್ಷವಾಗಿದೆ. ಅದು ಹಿಂದೆ ಭಯೋತ್ಪಾದಕ ಕೃತ್ಯಗಳಲ್ಲೂ ತೆ–ೂಡಗಿತ್ತು. ಡಿಯುಪಿ ಯೊಂದಿಗೆ ಮೈತ್ರಿ ವಿರುದ್ಧ ಇಂದಲ್ಲ ನಾಳೆಯಾದರೂ ಕನ್ಸರ್ವೇಟಿವ್ ಪಕ್ಷದೊಳಗೆ ಬಿರುಗಾಳಿ ಏಳಬಹುದು. ರಾಣಿಯ ಭಾಷಣದ ಮೇಲೆ ಮತದಾನ ನಡೆದಾಗಲೇ ಮೆ ಸರಕಾರದ ಭವಿಷ್ಯ ನಿರ್ಧಾರ ಆಗಲಿದೆ.

ತೆರೇಸಾ ಮೆ ಯವರು ಎರಡು ಪ್ರಮುಖ ಚುನಾವಣಾ ಘೋಷಣೆಗಳು ಇದೀಗ ಮಣ್ಣುಪಾಲಾಗಿ ಹೋಗಿದೆ. ಒಂದು "ಬಲವಾದ ಮತ್ತು ಸ್ಥಿರವಾದ" ಸರ್ಕಾರ ನೀಡುವುದು. ಲೇಬರ್ ಪಕ್ಷದ ನಾಯಕ ಕಾರ್ಬಿನ್ ಅವರದ್ದು "ಅವ್ಯವಸ್ಥೆಯ ಮೈತ್ರಿ" ಹಾಗೂ ಅವರೊಬ್ಬ "ಭಯೋತ್ಪಾದಕರ ಹಿತೈಷಿ" ಎಂಬುದು ಮತ್ತೊಂದು ಘೋಷಣೆ. ಬದಲಾಗಿ ಈಗ ಮೆ ಯವರದ್ದೇ "ಅವ್ಯವಸ್ಥೆಯ ಮೈತ್ರಿ" ಹಾಗೂ ಅವರೊಬ್ಬ "ಭಯೋತ್ಪಾದಕರ ಹಿತೈಷಿ" ಎಂದಾಗಿ ಬಿಟ್ಟಿದೆ.

ಹೀಗೆ ಅತಂತ್ರ ಸ್ಥಿತಿಯಿಂದ ಕಂಗೆಟ್ಟು ಹೋಗಿರುವ ಬ್ರಿಟನ್ ರಾಜಕೀಯ ಅಂತರಾಷ್ಟ್ರೀಯವಾಗಿ ಗಮನ ಸೆಳೆದಿದೆ. ಬ್ರೆಕ್ಸಿಟ್ ಮಾತುಕತೆಗಳನ್ನು ಮುಂದು ಹಾಕುವ ನಿಟ್ಟಿನಲ್ಲಿಯೂ ಸಲಹೆಗಳು ಬಂದಿವೆ. ಈ ಮಧ್ಯೆ ಬ್ರೆಕ್ಸಿಟ್ ಮಂತ್ರಿ ಜಾರ್ಜ್ ಬ್ರಿಡ್ಜ್ ರವರು ರಾಜೀನಾಮೆ ಕೊಟ್ಟ ಹಿನ್ನೆಲೆಯಲ್ಲಿ, ಬ್ರೆಕ್ಸಿಟ್ ಮಾತುಕತೆ ಮೇಲೆ ಅಘಾತವಾದ ಪರಿಣಾಮವನ್ನು ಉಂಟುಮಾಡುವ ಸನ್ನಿವೇಶ ಎದುರಾಗಿರುವುದು ಮೇ ಯವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಬ್ರಸೆಲ್ಸಿನಲ್ಲಿ ನಡೆಯುವ ಬ್ರೆಕ್ಸಿಟ್ ಮಾತುಕತೆಗಳು ಯಾವಾಗ ಆರಂಭಗೊಂಡರೂ ಸಹ, ಅದೊಂದು ನುಂಗಲಾರದ ತುತ್ತಾಗಲಿದೆ. ಒಂದು ವರ್ಷದ ಹಿಂದೆ ಬ್ರೆಕ್ಸಿಟ್ ಜನಮತಸಂಗ್ರಹ ನಡೆದಾಗ ಶೇ. 52 ಪರ ಹಾಗೂ ಶೇ. 48 ವಿರೋಧ ಮತಗಳು ಬಿದ್ದವು. ಇದನ್ನು ಮತ್ತಷ್ಟು ಬಲಯುತ ಮಾಡುವ ಹಾದಿಯಲ್ಲಿ ಕ್ಷಿಪ್ರ ಚುನಾವಣೆಗೆ 'ಮೇ' ಮುಂದಾದರು. ಬ್ರೆಕ್ಸಿಟ್ ಬಗ್ಗೆ ಟೋರಿ ಪಕ್ಷದೊಳಗೆ ಮೊದಲಿಂದಲೂ ತೀವ್ರ ಭಿನ್ನಾಭಿಪ್ರಾಯಗಳು ಇದ್ದವು. ಚುನಾವಣೆ ನಂತರ ಇವು ಇನ್ನೂ ಜೋರಾಗಿವೆ. ಮೆ ಟೋರಿಯ ಎರಡು ಬಣಗಳ ಸಮತೋಲನ ಗೊಳಿಸಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ.

ಸೋತವರು ಗೆದ್ದವರಂತೆ
ಗೆದ್ದವರು ಸೋತಂತೆ ಕಾಣುತ್ತಿದ್ದಾರೆ

ಬ್ರಿಟಿಷ್ ಪ್ರಸ್ತುತ ಪರಿಸ್ಥಿತಿ ಎಲ್ಲಾ ರೀತಿಯ ರಾಜಕೀಯ ತರ್ಕವನ್ನು ಮೀರಿ ನಿಂತಿದೆ. ಚುನಾವಣೆಯಲ್ಲಿ ವಿಜಯಶಾಲಿಗಳು ಸೋತವರಂತೆ, ಸೋತವರು ವಿಜೇತರಂತೆ ಕಾಣುತ್ತಿದ್ದಾರೆ. ಏಕೆಂದರೆ ಬ್ರಿಟಿಷ್‌ನ ಪ್ರತಿಯೊಬ್ಬರು ಬದಲಾವಣೆಯ ದಿಕ್ಕನ್ನೂ ಎದುರು ನೋಡಲು ಬಯಸುತ್ತಿದ್ದಾರೆ.

ಈ ಅಸಮಾನ್ಯ ಅದ್ಭುತ ರಾಜಕೀಯ ಬದಲಾವಣೆಯ ನಡುವೆ ಜೆರೆಮಿ ಕಾರ್ಬಿನ್ ರವರ ಅದ್ಭುತ ಚುನಾವಣಾ ಪ್ರಚಾರ, ಕಾರ್ಮಿಕ ಸಂದೇಶ, ಉತ್ಸಾಹಭರಿತ ಹೊಸ ಮಾರ್ಗಗಳು ಬ್ರಿಟಿಷ್ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು.

ಒಂದು ತಲೆಮಾರಿನಲ್ಲೇ ಅತ್ಯಂತ ರ್‍ಯಾಡಿಕಲ್ ಮ್ಯಾನಿಫೆಸ್ಟೋ, ಲೇಬರ್ ಸದಸ್ಯರು ಬೀದಿ–ಬದಿಗಳಲ್ಲಿ ಮನೆಗಳ ಬಾಗಿಲು ತಟ್ಟಿ, ಸಾಮಾಜಿಕ–ಜಾಲತಾಣಗಳ ಮೂಲಕ ಕೈಗೊಂಡ ಪ್ರಚಾರದ ಭರಾಟೆ, ವಿವಿಧ ಬಗೆಯ ಸಂದೇಶಗಳ ಮೂಲಕ ಕಾರ್ಬಿನ್ ಅವರ ಅದ್ಭುತ ಚುನಾವಣಾ ಪ್ರಚಾರ ಈ ಚುನಾವಣೆಯ ವಿಶೇಷತೆಯಾಗಿತ್ತು. ಕೇವಲ ಐದು ವಾರಗಳ ಅವಧಿಯಲ್ಲಿ ಕಾರ್ಬಿನ್ ಜನತೆಯನ್ನು ಅದರಲ್ಲೂ ಕಾರ್ಮಿಕರನ್ನು ಲೇಬರ್ ಗೆ ಮತ ನೀಡುವಂತೆ ಉತ್ತೇಜಿಸಿದರು. ಚುನಾವಣೆ ಘೋಷಣೆಯಾದಾಗ ಏಪ್ರಿಲ್ ತಿಂಗಳ ಮಧ್ಯದಲ್ಲಿ ಕೇವಲ 24–25 ಪ್ರತಿಶತ ಬೆಂಬಲವಿತ್ತು. ಅದ್ಭುತ ಪ್ರಚಾರದ ಆಕರ್ಷಣೆಯಿಂದಾಗಿ, ಶೇ.41 ರಷ್ಟು ಮತಗಳ ಬೆಂಬಲ ಲೇಬರ್ ಪಕ್ಷಕ್ಕೆ ಅಂತಿಮವಾಗಿ ದೊರಕಿತು. ಶೇ. 10ರಷ್ಟು ಹೆಚ್ಚಿನ ಮತ ಗಳಿಸಿತು. ಇದು 1945ರ ನಂತರ ಲೇಬರ್ ಪಡೆದ ಅತ್ಯಂತ ಹೆಚ್ಚಿನ ಮತ ಹೆಚ್ಚಳ. ಅದರಲ್ಲೂ ಯುವಜನತೆ ದೊಡ್ಡ ಪ್ರಮಾಣದಲ್ಲಿ ಮೊದಲ ಬಾರಿ ಮತಗಟ್ಟೆಗೆ ಬಂದು ಲೇಬರ್ ಗೆ ಮತ ನೀಡಿದ್ದಯ ಗಮನಾರ್ಹವಾಗಿತ್ತು. ವಲಸೆಗಾರ–ವಿರೋಧಿ ಉಗ್ರ ಬಲಪಂಥೀಯ ಇಂಡಿಪೆಂಡೆಂಟ್ ಪಕ್ಷ ಶೇ. 10 ರಷ್ಟು ಮತ ಕಳೆದುಕೊಂಡಿದ್ದು, ಇದನ್ನು ಲೇಬರ್ ಪಕ್ಷ ಪೂರ್ಣವಾಗಿ (ಅಥವಾ ಅದರ ದೊಡ್ಡ ಭಾಗ) ಬಾಚಿಕೊಂಡಂತೆ ಕಾಣುತ್ತದೆ.

ಕಾರ್ಬಿನ್ ಒಬ್ಬ ವೃತ್ತಿ ನಿರತ ಜನಪ್ರಿಯ ಲೇಬರ್ ರಾಜಕೀಯ ನಾಯಕನಾಗಿ ಹೊಮ್ಮಿ, 1980 ರಿಂದಲೇ ಸಂಸತ್ ಸದಸ್ಯನಾಗಿ ಅಪಾರ ಅನುಭವ ಹೊಂದಿದ್ದಾರೆ. ಪ್ರತಿಯೊಂದು ಪ್ರಮುಖ ವಿಷಯಗಳಲ್ಲಿಯೂ ಇವರ ಸೈದ್ಧಾಂತಿಕ ಬದ್ಧತೆ ಅಚಲ, ಅನನ್ಯ. ಅದು ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿ ವಿರುದ್ಧ ಇರಲಿ, ಅಥವಾ 2003 ರಲ್ಲಿ ಟೋನಿ ಬ್ಲೇರ್‌ರ ಇರಾಕ್ ಮೇಲಿನ ಆಕ್ರಮಣವನ್ನು ತಡೆಗಟ್ಟುವ ಯತ್ನಗಳು ಇರಲಿ. ಇಸ್ಲಿಂಗ್ಟನ್ ಉತ್ತರದ ಸಂಸದರಾಗಿ, ಪ್ರಗತಿಶೀಲರಾಗಿ ಕಾರ್ಮಿಕರ ಹಕ್ಕುಗಳ ಬಗ್ಗೆ ಕಳೆದ 2015 ರ ಚುನಾವಣೆಯಲ್ಲಿ ಹಾಗೂ ಈ 2017 ರ ಚುನಾವಣೆಯಲ್ಲಿ ನೇರವಾಗಿ ಕಾರ್ಮಿಕರನ್ನು ಸೆಳೆಯುವಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇದರ ಫಲವೇ ಲೇಬರ್ ಪಕ್ಷದ ಈ ಉನ್ನತ ಮಟ್ಟದ ಸಾಧನೆ. ಸುಮಾರು 20 ಸಾವಿರ ತಳ ಮಟ್ಟದ ಕಾರ್ಯಕರ್ತರು ದುಡಿದಿದ್ದು ಲೇಬರ್ ಪಕ್ಷವನ್ನು ಬರಿಯ ಪಾರ್ಲಿಮೆಂಟರಿ ಪಕ್ಷದಿಂದ ಸಾಮಾಜಿಕ ಚಳುವಳಿಯ ರೀತಿಯಲ್ಲೂ ನಡಸುವಲ್ಲಿ ಕಾರ್ಬಿನ್ ಯಶಸ್ವಿಯಾಗಿದ್ದಾರೆ.

ವರ್ಗ ರಾಜಕೀಯ ಮರುಸ್ಥಾಪನೆ

ಇವರ ಚುನಾವಣಾ ಯಶಸ್ವಿನ ಹಿನ್ನೆಲೆಯಲ್ಲಿ ಗಮನಾರ್ಹ ಅಂಶವೆಂದರೆ, ಚುನಾವಣಾ ಪ್ರಣಾಳಿಕೆಯ ಪ್ರಮುಖ ಘೋಷಣೆ "ಕೇವಲ ಕೆಲವೇ ಕೆಲವರಿಗಲ್ಲ ಹಲವರಿಗಾಗಿ" (For the many, not the few) ಎಂದು ರಾಷ್ಟ್ರದ ಮುಂದೆ ಬಿಂಬಿಸಿದ್ದು. ಹಿಂದೆಂದೂ ಕಂಡರಿಯದ ಇದು ಎಡಪಂಥೀಯ ರ್‍ಯಾಡಿಕಲ್ ಮ್ಯಾನಿಫೆಸ್ಟೊ ಆಗಿತ್ತು. ಪ್ರಮುಖವಾಗಿ ಬ್ರಿಟಿಷ್ ರಾಜಕೀಯದಲ್ಲಿ ವರ್ಗ ರಾಜಕೀಯವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಲಕ್ಷಾಂತರ ಜನರನ್ನು ಸೆಳೆಯಿತು. ಅವರ ಧೈನಂದಿನ ಜೀವನದ ವಿಷಯಗಳಾದ – ಮಿತವ್ಯಯದ ದಾಳಿಯಲ್ಲಿ ಸೊರಗಿದ ಆರೋಗ್ಯ ಶಿಕ್ಷಣ ವ್ಯವಸ್ಥೆಯ ದುರವಸ್ಥೆ, ವಸತಿ ರಹಿತರ ಗೋಳು, ಇವೆಲ್ಲ ಆಳುತ್ತಿರುವವರ ನೀತಿಗಳ ಭಾಗವಾಗಿ ನಡೆಯುತ್ತದೆ ಎಂದು ಸಮರ್ಥವಾಗಿ ವಿವರಿಸಿರುವ ಪ್ರಣಾಳಿಕೆಯಿಂದ ಬ್ರಿಟಿಷ್ ಜನರು ಆಕರ್ಷಿತರಾದರು. ಈ ಸಂದೇಶಗಳು ಎಷ್ಟರ ಮಟ್ಟಿಗೆ ಶಕ್ತಿಶಾಲಿಯಾಗಿತ್ತೆಂದರೆ, ಬಲಪಂಥೀಯರಿಗೆ ಸಾಮಾನ್ಯವಾಗಿ ಲಾಭವಾಗಬಹುದಾದಂತ ಈ ಅವಧಿಯಲ್ಲಿ ಬಂದ ಭಯೋತ್ಪಾದಕ ದಾಳಿಗಳು ಸಹ ಅವರಿಗೆ ಪ್ರಯೋಜನವಾಗಲಿಲ್ಲ.

ಪ್ರಧಾನಿ ಮೆ ಕಂಗೆಟ್ಟು ಹೋಗಿದ್ದಾರೆ. ಲೇಬರ್ ನಾಯಕ ಜೆರೆಮಿ ಕಾರ್ಬಿನ್ ಅವರ ಎಡ ಪಂಥದ ಮೈತ್ರಿ ಜನರ ಮನ ಗೆದ್ದಿದೆ. ಬ್ರಿಟನ್‌ನಲ್ಲಿ ವರ್ಗ ರಾಜಕೀಯ ಮರುಸ್ಥಾಪನೆಯ ಗಾಳಿ ಬೀಸಲಾರಂಭಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಬ್ರಿಟನ್ ಮತ್ತೊಂದು ಚುನಾವಣೆ ಹೆಚ್ಚು ಕಡಿಮೆ ಖಚಿತವಿದೆ. ಇನ್ನೊಮ್ಮೆ ಚುನಾವಣೆ ನಡೆದರೆ ಎಡಪಂಥೀಯ ಕಾರ್ಯಕ್ರಮದ ಆಧಾರದಲ್ಲಿ ಲೇಬರ್ ಬಹುಮತದ ಸರಕಾರದ ಸಾಧ್ಯತೆ ಬಹಳ ಹೆಚ್ಚಿದೆ. ಇದು ಅಭಿವೃದ್ಧ ಬಂಡವಾಳಶಾಹಿ ದೇಶದ ರಾಜಕೀಯದಲ್ಲಿ ಒಂದು ದೊಡ್ಡ ಬದಲಾವಣೆ ತರಬಹುದು. ●

JANASHAKTHI KANNADA VARA PATRIKE JUN 26-JULY 02, 2017 Price : Rs. 10/- Date of Publication : 23 JUN 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ 3 ನೇ ಅ.ಭಾ. ಸಮ್ಮೇಳನ, ವಿಶಾಖಪಟ್ಟಣ

ಆದಿವಾಸಿ ಆಂದೋಲನದ ವಿಸ್ತರಣೆ ಪ್ರಬಲ ಪ್ರತಿರೋಧದ ಸಂಕಲ್ಪ

ಎಸ್.ವೈ. ಗುರುಶಾಂತ್

'ನಮ್ಮ ದೇಶದಲ್ಲಿರುವ ವಿವಿಧ ಸಾಮಾಜಿಕ ಗುಂಪುಗಳು ಅನುಭವಿಸುತ್ತಿರುವ ದಬ್ಬಾಳಿಕೆ, ದಮನ ಮತ್ತು ಶೋಷಣೆಯ ನಿರ್ದಿಷ್ಟ ವಿಷಯಗಳನ್ನು ಕೈಗೆತ್ತಿಕೊಳ್ಳದೇ ಅಮೂಲಾಗ್ರ ಸಾಮಾಜಿಕ ಬದಲಾವಣೆಗೆ ಮತ್ತು ನ್ಯಾಯಾಕ್ಕಾಗಿ ನಡೆಯುವ ಯಾವುದೇ ಆಂದೋಲನ – ಮುನ್ನಡೆ ಸಾಧಿಸುತ್ತದೆ ಎಂದು ನಿರೀಕ್ಷಿಸಲೂ ಸಾಧ್ಯವಿಲ್ಲ' ಈ ಮಾತಿನ ಮಹತ್ವವನ್ನು ವಿವಿಧ ರೀತಿಯಲ್ಲಿ ವಿವರವಾಗಿ ನಿರೂಪಿಸಿದವರು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರವರು. ಅವರು ವಿಶಾಖಪಟ್ಟಣಂನಲ್ಲಿ 'ನಮ್ಮ ಸಂಪತ್ತು, ನಮ್ಮ ಅಧಿಕಾರ' ಎಂಬ ಘೋಷಣೆ ಅಡಿಯಲ್ಲಿ ಸೇರಿದ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್'ನ 3ನೇ ಅಖಿಲ ಭಾರತ ಸಮ್ಮೇಳನವನ್ನು 2017 ರ ಜೂನ್ 20 ರಂದು ಉದ್ಘಾಟಿಸುತ್ತಾ ಹೇಳಿದರು.



ಡಾ.ಎಂ. ಬಾಬುರಾವ್



ಜಿತೇಂದ್ರ ಚೌಧುರಿ

2014 ರಲ್ಲಿ ಭುವನೇಶ್ವರದಲ್ಲಿ 2 ನೇ ಸಮ್ಮೇಳನವು ಜರುಗಿ–ತ್ತು. 'ಆರಮ್' ಆರಂಭಗೊಂಡಿದ್ದು 2010ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ, ಕಳೆದ ಸಮ್ಮೇಳನದಿಂದೀಚೆಗೆ ಮಂಚ್ ದೇಶವ್ಯಾಪ್ತಿಯಾಗಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿದೆ ಮಾತ್ರವಲ್ಲ, ಆದಿವಾಸಿಗಳನ್ನು ದೇಶದ ವಿವಿಧ ಕಡೆಗಳಲ್ಲಿ ನೆಲೆ ತಪ್ಪಿಸಿ, ಅಲ್ಲಿಂದ ಓಡಿಸಿ ಅತ್ಯಮೂಲ್ಯ ಸಂಪನ್ಮೂಲಗಳ ಲೂಟಿಗೆ ದಮನಕಾಂಡವನ್ನೂ ನಡೆಸುತ್ತಿರುವುದರ ವಿರುದ್ಧ ಪ್ರತಿರೋದ– ಒಟ್ಟುವ ಶಕ್ತಿಯಾಗಿ ರೂಪುಗೊಳ್ಳುತ್ತಿದೆ. ಪ್ರಖರ ಹೋರಾಟಗಳಿಂದ, ಹಲವಾರು ಸಮರಧೀರರು ದಬ್ಬಾಳಿಕೆ ಎದುರಿಸಿದ್ದಾರೆ, ಎದುರಿಸುತ್ತಿದ್ದಾರೆ. ಹುತಾತ್ಮರೂ ಆಗಿದ್ದಾರೆ. ಈ ಹಿನ್ನೆಲೆಯಲ್ಲೇ 'ಸಮಾನತೆ ಮತ್ತು ನ್ಯಾಯಕ್ಕಾಗಿ ಪ್ರಗತಿಪರ ಮೌಲ್ಯಗಳನ್ನು ಎತ್ತಿ ಹಿಡಿದು ಅಹೋರಾತ್ರಿ ಹೋರಾಟ ನಡೆಸುತ್ತಿರುವ ತಮಗೆ ಅಭಿನಂದನೆಗಳು ಎಂದು ಪಿಣರಾಯಿಯವರು ಹೇಳಿದ್ದು.

ದೇಶದೆಲ್ಲೆಡೆ ಅಭಿವೃದ್ಧಿ ಹೆಸರಿನಲ್ಲಿ ದೇಶದ ಮತ್ತು ವಿದೇಶಗಳ ಕಾರ್ಪೋರೇಟ್ ಕಂಪನಿಗಳ ಲೂಟಿಗಾಗಿ ನಮ್ಮ ದೇಶದ ಸಂಪತ್ತನ್ನು ತೆರೆದಿಡಲಾಗುತ್ತಿದೆ. ಆದಿವಾಸಿ–ಬುಡಕಟ್ಟು ಸಮುದಾಯಗಳನ್ನು ವ್ಯಾಪಕವಾಗಿ ನೆಲೆ ತಪ್ಪಿಸಲಾಗುತ್ತಿದೆ. 2006ರ ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿ ಮಾಡದೇ, ಭೂಮಿ ಮತ್ತು ಸಮುದಾಯದ ಹಕ್ಕುಗಳಿಂದ ವಂಚಿಸಲಾಗಿದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ಆದರೆ ಕಾಂಗ್ರೆಸ್ ಮತ್ತು ಬಿಜೆಪಿ ಮತ್ತವರ ಮೈತ್ರಿಗಳ ಸರ್ಕಾರಗಳಿಗೆ ಇದು ಇಲ್ಲ, ಬೇಕಾಗಿಯೂ ಇಲ್ಲ. ಪ್ರಬಲ ಹೋರಾಟಗಳಿಂದಲೇ ಆ ಹಕ್ಕು ದಕ್ಕಿಸಿಕೊಳ್ಳಬೇಕಿದೆ ಎಂದರು.

ಆದಿವಾಸಿ ಸಮುದಾಯಗಳ ಬದುಕು, ಭಾಷೆ, ಸಂಸ್ಕೃತಿಯ ಅನನ್ಯತೆಯನ್ನು ಪ್ರಸ್ತಾಪಿಸಿದ ಅವರು, ಆದಿವಾಸಿಗಳ ನಡುವೆ ಆರೆಸ್ಸೆಸ್–ಮತ್ತವರ ಪರಿವಾರ 'ಹಿಂದುತ್ವ'ವನ್ನು ಕೊಂಡೊಯ್ಯುತ್ತಿರುವುದರ ಬಗ್ಗೆ ಅದರ ಸಾಂಸ್ಕೃತಿಕ ಬುಡಮೇಲುತನದ ಬಗ್ಗೆ ಪ್ರಸ್ತಾಪಿಸಿದರು ಎಚ್ಚರಿಸಿದರು.

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಬುಡಕಟ್ಟು ಸಮುದಾಯಗಳ ಹಿತರಕ್ಷಣೆಗೆ ಬದ್ಧವಾಗಿದ್ದು, ಅನೇಕ ಕ್ರಮಗಳನ್ನು ಕೈಗೊಂಡಿರುವುದನ್ನು ತಿಳಿಸಿದರು.

ಕಾಂ. ಪಿಣರಾಯಿ ವಿಜಯನ್‌ರವರ ಭಾಷಣ, ಒಂದು ರೀತಿಯಲ್ಲಿ ಇಡೀ 3 ದಿನಗಳ ಸಮ್ಮೇಳನಕ್ಕೆ ಮುನ್ನುಡಿಯಂತಿತ್ತು. ಅದೇ ಉದ್ಘಾಟನಾ ಸಮಾರಂಭದಲ್ಲಿ ದೇಶದಲ್ಲಿ ಪ್ರಭುತ್ವದ ಮತ್ತು ಸ್ಥಾಪಿತ ಹಿತಾಸಕ್ತಿಗಳಿಂದ ದಾಳಿಗೊಳಗಾಗಿಯೂ, ಎದುರಿಸಿ ನಿಂತ 5 ಆದಿವಾಸಿ ಸಂಗಾತಿಗಳಿಗೆ ಅಭಿನಂದಿಸಿದವರಲ್ಲಿ ಕರ್ನಾಟಕದ ನೆರಿಯ ಪ್ರದೇಶದಲ್ಲಿ ಭೂಮಾಲೀಕರ ಧಾಳಿಗೆ ಒಳಗಾದ ಸುಂದರ ಮಲೆಕುಡಿಯರವರೂ ಒಬ್ಬರು.



ಎಸ್.ವೈ. ಗುರುಶಾಂತ್



ವೈ.ಕೆ. ಗಣೇಶ್

ಈ ಸಮ್ಮೇಳನಕ್ಕೆ ಮಹತ್ವವಿದ್ದುದು ಹಲವು ಬಗೆಯಲ್ಲಿ ಅದರ ಮುಂದೆ ಮೂರು ಮುಖ್ಯ ಕಲಾಪಗಳಿದ್ದವು.

1. ಕಳೆದ ಸಮ್ಮೇಳನದಿಂದ ಇಲ್ಲಿಯವರೆಗಿನ ದೇಶದ ವಿ ದ್ಯಾ ವ್ ಂಾ ನ್ ಗ್ ಳ್ ನ್ ್ನ ಅಂದಾಜಿಸುವುದು. ಚಳುವಳಿಯ ಮುನ್ನಡೆ, ಸವಾಲುಗಳನ್ನು ಗುರುತಿಸುವುದು.
2. ದೇಶದ ಆದಿವಾಸಿ ಸಮುದಾಯಗಳು ಎದುರಿಸುತ್ತಿರುವ 5 ಪ್ರಮುಖ ಪ್ರಶ್ನೆಗಳ ಬಗ್ಗೆ ವಿಸ್ತೃತವಾದ ಚರ್ಚೆ ನಡೆಸಿ 'ಆಯೋಗ'ಗಳ ವರದಿಯ ಮೇಲೆ ಚರ್ಚಿಸಿ, ಅದನ್ನು ಶ್ರೀಮಂತಗೊಳಿಸುವುದು.
3. ಪ್ರಮುಖವಾಗಿ ಸಂಘಕ್ಕೆ ಒಂದು ಧ್ಯೇಯ, ಗುರಿ ಮತ್ತು ಸಂಘಟನಾ ಸಂರಚನೆ ಸಂವಿಧಾನವನ್ನು ಅಳವಡಿಸಿಕೊಳ್ಳುವುದು. ಈ ಮೂರು ಯಶಸ್ವಿಯಾಗಿ ನೆರವೇರಿದವು.

ವಿಶೇಷವಾಗಿ ಆದಿವಾಸಿ 'ಅಧಿಕಾರ್ ರಾಷ್ಟ್ರೀಯ ಮಂಚ್' ಒಂದು ವಿಶಾಲವಾದ ವೇದಿಕೆಯಾಗಿರುತ್ತದೆ. ದೇಶದ ಆಯಾ ರಾಜ್ಯಗಳಲ್ಲಿರುವ ಘಟಕಗಳು/ಸಂಘಗಳು ಈ ವೇದಿಕೆಗೆ ಸೇರ್ಪಡೆಗೊಂಡಿರುತ್ತವೆ. ಹಾಗೆಯೇ ಹಿಂದಿದ್ದ ಸಂಘಟನಾ ಸಂರಚನೆಯಲ್ಲಿ ಕೆಲವು ಬದಲಾವಣೆಗಳನ್ನು ಅಂಗೀಕರಿಸಲಾಗಿದೆ. ಅಖಿಲ ಭಾರತ ಮಟ್ಟದಲ್ಲಿ, ಅ.ಭಾ. ಸಮ್ಮೇಳನವು 'ರಾಷ್ಟ್ರೀಯ ಸಮನ್ವಯ ಸಮಿತಿಯನ್ನು (ಎನ್.ಸಿ.ಸಿ) ಆಯ್ಕೆ ಮಾಡುತ್ತದೆ. ಎನ್.ಸಿ.ಸಿಯು ಪದಾಧಿಕಾರಿಗಳನ್ನು ಅವರನ್ನು ಒಳಗೊಂಡು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನು ಚುನಾಯಿಸುವುದು. ಈ ಸಮಿತಿಗೆ ಒಬ್ಬರು ಅಧ್ಯಕ್ಷರು (ಛೇರ್ಮನ್), ಒಬ್ಬರು ರಾಷ್ಟ್ರೀಯ ಸಂಚಾಲಕರು, ಉಪಾಧ್ಯಕ್ಷರು, ಸಹ ಸಂಚಾಲಕರು, ಖಜಾಂಚಿ ಇರುತ್ತಾರೆ.

ಆಯಾ ರಾಜ್ಯ ಘಟಕಗಳು ತಮ್ಮದೇ ಆದ ಸಂಘಟನಾ ಸ್ವರೂಪ, ಬಾವುಟ, ಸದಸ್ಯತ್ವ ಹೊಂದುವ, ಇಲ್ಲದಿರುವ ಹಕ್ಕು ಹೊಂದಿರುತ್ತವೆ. 'ಆರಂ'ಗೆ ಒಂದು ಎಲೆ ಹಸಿರು ಹಿನ್ನೆಲೆಯ ಮೂರು ಕೆಂಪು ನಕ್ಷತ್ರಗಳ (ಬಿಳಿ ಬಾರ್ಡರ್) ಬ್ಯಾನರ್ ಇರುವುದು. ಈ ಸಮ್ಮೇಳನದ ಕಲಾಪಗಳು, ಚರ್ಚೆಗಳು ಅತ್ಯಂತ ಅರ್ಥಪೂರ್ಣವಾಗಿದ್ದವು.

ರಾಷ್ಟ್ರೀಯ ಸಮನ್ವಯ ಸಮಿತಿಯ ಛೇರ್ಮನ್ನಾರಾಗಿ ಹಿರಿಯ ನಾಯಕ ಮಾಜಿ ಸಂಸದರಾದ ಡಾ॥ ಎಂ. ಬಾಬುರಾವ್‌ರನ್ನೂ, ಸಂಸದ ಜಿತೇಂದ್ರ ಚೌಧುರಿಯವರನ್ನು ಸಂಚಾಲಕರನ್ನಾಗಿಯೂ, ಖಜಾಂಚಿಯಾಗಿ ತಮಿಳುನಾಡು ಮಾಜಿ ಶಾಸಕ ದಿಲ್ಲಿ ಬಾಬುರನ್ನು ಚುನಾಯಿಸಲಾಯಿತು. ರಾಷ್ಟ್ರೀಯ ಸಮನ್ವಯ ಸಮಿತಿಗೆ ಕರ್ನಾಟಕದಿಂದ ಕಾಂ. ವೈ. ಕೆ. ಗಣೇಶ್ ಮತ್ತು ಕಾಂ. ಎಸ್.ವೈ. ಗುರುಶಾಂತ್ ರವರು ಪುನರಾಯ್ಕೆಗೊಂಡರು.

ಸಮ್ಮೇಳನದಲ್ಲಿ ಒಟ್ಟು 349 ಪ್ರತಿನಿಧಿಗಳು, ಕರ್ನಾಟಕದಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು. ವಿಶೇಷವಾಗಿ, ನೆರಿಯಾದಲ್ಲಿ ಧಾಳಿಗೊಳಗಾದ ಸುಂದರ ಮಲೆಕುಡಿಯಾ, ಅಲ್ಲದೇ ಇತ್ತೀಚೆಗೆ ಕುಂದಾಪುರ ತಾಲೂಕಿನಲ್ಲಿ ಬಜರಂಗದಳ, ವಿಶ್ವಹಿಂದೂ ಪರಿಷತ್‌ನಿಂದ ಧಾಳಿಗೊಳಗಾದ ಅದನ್ನು ಎದುರಿಸಿ ನಿಂತ ಕೊರಗ ಸಮುದಾಯದ ಶ್ರೀಮತಿ ಶಕುಂತಲಾ ಕೊರಗರವರು, ವಿಠಲ ಮಲೆಕುಡಿಯಾ ಪ್ರಮುಖರು.

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ಜೂನ್ 20 ರಂದು ನಡೆದ ನೀರಾವರಿ ಸಮಾವೇಶವನ್ನು AIKS ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಅನ್ನನ್ ಮುಲ್ಲಾ ಉದ್ಘಾಟನೆ ಮಾಡಿ ಮಾತನಾಡಿದರು. ಏಕಖಿಖ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್ ಭಾಗವಹಿಸಿದ್ದರು.



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**